ಸೋಮವಾರ, ಮೇ 22, 2023 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್‌. ಸಂತೋಷ್ ಹೇಳಿಕೆ

‘ಸತ್ಯ ಅಡಗಿಸಲು ಬಿಡೆವು’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ‘ಸಾವರ್ಕರ್ ಸಮಗ್ರ ಸಂಪುಟ–6’ ಕೃತಿಯ ಪ್ರತಿಯನ್ನು ಸಾತ್ಯಕಿ ಸಾವರ್ಕರ್ (ಎಡದಿಂದ ಮೂರನೆಯವರು) ಅವರು ಬಿ.ಎಲ್‌. ಸಂತೋಷ್ (ಎಡದಿಂದ ಮೊದಲಿಗರು) ಅವರಿಗೆ ಹಸ್ತಾಂತರಿಸಿದರು. ಎಸ್‌.ಆರ್‌. ಲೀಲಾ, ವಿ. ನಾಗರಾಜ್‌, ಜಿ.ಬಿ. ಹರೀಶ್ ಹಾಗೂ ಪ್ರಕಾಶಕ ಹರ್ಷ ಸಮೃದ್ಧ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸ್ವಾತಂತ್ರ್ಯದ ಬಳಿಕ ಸುಳ್ಳಿನ ಇತಿಹಾಸ ಹೆಣೆಯುತ್ತಾ ನೇತಾಜಿ, ಸಾವರ್ಕರ್, ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿ ಕೆಲವರಿಗೆ ಅನ್ಯಾಯ ಮಾಡಲಾಯಿತು. ಈಗ ಇತಿಹಾಸ ಸರಿಪಡಿಸಲು ಅನೇಕ ಹೆಜ್ಜೆಗಳನ್ನು ಇಡಲಾಗುತ್ತಿದೆ’ ಎಂದು ಭಾರತೀಯ ಜನತಾ ಪಕ್ಷದ (ಬಿಜೆಪಿ) ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ತಿಳಿಸಿದರು.

ಸಾವರ್ಕರ್ ಸಾಹಿತ್ಯ ಸಂಘ ಹಾಗೂ ದಿ ಮಿಥಿಕ್ ಸೊಸೈಟಿ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಸಾವರ್ಕರ್ ಸಮಗ್ರ ಸಂಪುಟ–6’ ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ಸತ್ಯವನ್ನು ಶಾಶ್ವತವಾಗಿ ಅಡಗಿಸಿಡಲು ಸಾಧ್ಯವಿಲ್ಲ. ದೇಶದಲ್ಲಿ 100 ವರ್ಷಗಳಿಂದ ಬಹಳ ಸಂಗತಿಗಳು ತಮ್ಮ ಸತ್ಯಕ್ಕೆ, ತಮ್ಮ ಗುರಿಗೆ ಹೊಂದದವರ ಮೇಲೆ ಪರದೆ ಹಾಕುವ ಕೆಲಸವನ್ನು ಯಶಸ್ವಿಯಾಗಿ ಮಾಡಿಕೊಂಡು ಬರಲಾಗಿದೆ. ಇದು ತಂತ್ರದ ಭಾಗವಾಗಿತ್ತು. ನೇತಾಜಿ, ಸಾವರ್ಕರ್ ಬಗ್ಗೆ ಮಾತನಾಡುವವರು ಬಲಪಂಥೀಯರು, ‘ಭಾರತ್ ಮಾತಾ ಕೀ ಜೈ’ ಎನ್ನುವವರು ಆರೆಸ್ಸೆಸ್‌ನವರು ಎಂದು ಬ್ರ್ಯಾಂಡ್ ಮಾಡಲಾಯಿತು. ಪಶ್ಚಿಮದಿಂದ ಎರವಲು ಪಡೆದ ಈ ತಂತ್ರ ಶಾಶ್ವತವಾಗಿ ಉಳಿಯುವುದಿಲ್ಲ ಎನ್ನುವುದು ಈಗ ಅರಿವಿಗೆ ಬರುತ್ತಿದೆ. ಇತಿಹಾಸದ ಸತ್ಯವನ್ನು ತುಂಬಾ ದಿನ ಅಡಗಿಸಿ ಇಡಲು ಸಾಧ್ಯವಿಲ್ಲ’ ಎಂದರು.

> **ದೇಶದ ಇತಿಹಾಸವನ್ನು ಮುಸ್ಲಿಂ, ಐರೋಪ್ಯ ಇತಿಹಾಸಕಾರರು ತಮ್ಮ ಮೂಗಿನ ನೇರಕ್ಕೆ ಬರೆದರು. ಸಾವರ್ಕರ್ ದಾಖಲೆ ಪರಿಶೀಲಿಸಿ ಇತಿಹಾಸ ಬರೆದಿದ್ದಾರೆ**
>
> **ವಿ. ನಾಗರಾಜ್,** ದಿ ಮಿಥಿಕ್ ಸೊಸೈಟಿ ಅಧ್ಯಕ್ಷ

> **ಮೋಜು–ಮಸ್ತಿ, ಜ್ಞಾನಪೀಠಕ್ಕೆ ಸಾವರ್ಕರ್ ಅವರು ಸಾಹಿತ್ಯ ಸೃಷ್ಟಿಸಿಲ್ಲ. ವೀರತ್ವದ ಸಾಹಿತ್ಯ ನಮ್ಮಲ್ಲಿ ನೆಲ ಕಚ್ಚಿದೆ. ಶೌರ್ಯ, ಪರಾಕ್ರಮ ಪುನರ್ ಜಾಗರಣ ಆಗಬೇಕು**
>
> **ಜಿ.ಬಿ. ಹರೀಶ,** ಕೃತಿಯ ಸಂಪಾದಕ

‘ಅನುಕೂಲಕರ ಸತ್ಯಕ್ಕೆ ಸಾವರ್ಕರ್ ಹೊಂದುವುದಿಲ್ಲ. ಇದರಿಂದಾಗಿ ಸಾವರ್ಕರ್ ಅನೇಕರಿಗೆ ಅಪ್ರಿಯ. ಸಾರ್ವಜನಿಕ ಜೀವನದಲ್ಲಿ 10ರಿಂದ 5 ಗಂಟೆ ಕಾರ್ಯ ನಿರ್ವಹಿಸುವವರಿಗೆ ರಾಜಕಾರಣ, ದೇಶದ ಕೆಲಸದಲ್ಲಿ ಸಾವರ್ಕರ್ ಕುಳಿತುಕೊಳ್ಳುವುದಿಲ್ಲ. ಅವರನ್ನು ಸ್ವೀಕರಿಸುವುದು ಅಂದರೇ ಬದುಕನ್ನು ಸುಟ್ಟುಕೊಳ್ಳುವುದು’ ಎಂದು ಹೇಳಿದರು.

‘ಅನ್ಯಾಯಗಳು ನಮಗೆ ತಡೆದುಕೊಳ್ಳಲು ಸಾಧ್ಯವಾಗದಿದ್ದಾಗ ಸತ್ಯ ಕಥೆಗಳು ಹೊರಬರುತ್ತವೆ. ‘ದಿ ಕೇರಳ ಸ್ಟೋರಿ’, ‘ಕಾಶ್ಮೀರಿ ಫೈಲ್ಸ್’ನಂತಹ ಸಿನಿಮಾಗಳು ಉದಾಹರಣೆ. ಈ ಸಿನಿಮಾಗಳು ಕಟ್ಟು ಕಥೆಯಲ್ಲ, ವಾಸ್ತವದ ದರ್ಶನ’ ಎಂದರು.

ಕಾನೂನು ಕ್ರಮ: ಸಾವರ್ಕರ್ ಅವರ ಮೊಮ್ಮಗ ಸಾತ್ಯಕಿ ಸಾವರ್ಕರ್, ‘ಯಾವುದೇ ಪುರಾವೆ ಇಲ್ಲದೆ ಕೆಲವರು ಸಾವರ್ಕರ್ ಅವರ ಬಗ್ಗೆ ಆರೋಪ ಮಾಡುತ್ತಾರೆ. ಈಗಾಗಲೇ ಅಂತಹವರ ಮೇಲೆ ಕಾನೂನು ಹೋರಾಟ ಮಾಡಲಾಗುತ್ತಿದೆ. ಮಹಾಪುರುಷ ಸಾವರ್ಕರ್ ಅವರಿಗೆ ಸೂಕ್ತ ಗೌರವ ನೀಡುವ ಕೆಲಸ ಆಗಬೇಕು’ ಎಂದು ಹೇಳಿದರು.

ವಿದ್ವಾಂಸೆ ಎಸ್.ಆರ್. ಲೀಲಾ, ‘ಸಾವರ್ಕರ್ ಇತಿಹಾಸ ರಚನಾಕರರಷ್ಟೇ ಅಲ್ಲ, ಇತಿಹಾಸ ನಿರ್ಮಾಣಕಾರರೂ ಆಗಿದ್ದಾರೆ. ಸಾವರ್ಕರ್ ಮತ್ತು ಅಂಬೇಡ್ಕರ್ ಹಿಂದೂ ಸಮಾಜವನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ದೇಶ ನೆಮ್ಮದಿಯಿಂದ ಇರಲು ಧರ್ಮ ದ್ವೇಷಿಗಳ ವಿನಿಮಯದ ಬಗ್ಗೆ ಅಂಬೇಡ್ಕರ್ ಪ್ರಸ್ತಾಪಿಸಿದ್ದರು. ಅವರ ಮಾತನ್ನು ಗಂಭೀರವಾಗಿ ಪರಿಗಣಿಸದಿದ್ದರಿಂದ ಈಗ ಸಮಸ್ಯೆಯಲ್ಲಿ ಸಿಲುಕಿಕೊಂಡಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮೀಣ ಪ್ರತಿಭೆಗಳಿಗೆ ಕಥಾ ಕಮ್ಮಟ

ಪ್ರತಿ ಜಿಲ್ಲೆಗೂ ಕಾರ್ಯಕ್ರಮ ಆಯೋಜನೆಗೆ ವೀರಲೋಕ ಪ್ರಕಾಶನ ನೆರವು

ಪ್ರಜಾವಾಣಿ ವಾರ್ತೆ



ಸಮಾಲೋಚನೆ ಸಭೆಯಲ್ಲಿ ಲಕ್ಷ್ಮಣ ಕೊಡಸೆ, ಕಾ.ತ. ಚಿಕ್ಕಣ್ಣ ಹಾಗೂ ವೀರಕಪುತ್ರ ಶ್ರೀನಿವಾಸ್ ಇದ್ದಾರೆ

ಮುಖ್ಯಾಂಶಗಳು

- ಯುವ ಲೇಖಕ, ಲೇಖಕಿಯರಿಗೆ ಪ್ರೋತ್ಸಾಹ
- ಮುಂದಿನ ವರ್ಷದಿಂದ ಕರ್ನಾಟಕ ಲಿಟ್ ಫೆಸ್ಟ್ ಆಯೋಜನೆ
- ಕಥೆ, ಕವಿತೆ ಬರೆಯುವವರ ಸಂಖ್ಯೆ ಹೆಚ್ಚಳ

ಬೆಂಗಳೂರು: ಸಾಹಿತ್ಯಾಸಕ್ತ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಲು ವೀರಲೋಕ ಪ್ರಕಾಶನ ರಾಜ್ಯದ ಎಲ್ಲ ಜಿಲ್ಲೆಗಳು ಹಾಗೂ ಕಾಸರಗೋಡಿನಲ್ಲಿ ಕಥಾ ಕಮ್ಮಟ ಹಮ್ಮಿಕೊಂಡಿದೆ.

ವೀರಲೋಕ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಸಮಾಲೋಚನೆ ಸಭೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕ ವೀರಕಪುತ್ರ ಶ್ರೀನಿವಾಸ್, ‘ಪ್ರತಿ ಜಿಲ್ಲೆಗೂ ನಮ್ಮ ಸಂಸ್ಥೆಯಿಂದ ಕಮ್ಮಟ ನಡೆಸಲು ₹ 25 ಸಾವಿರ ಅನುದಾನ ನೀಡುತ್ತಿದ್ದೇವೆ. ನಮ್ಮ ಕಮ್ಮಟದಲ್ಲಿ ಭಾಗವಹಿಸಿ, ಒಂದು ಸಂಕಲನಕ್ಕಾಗುವಷ್ಟು ಕಥೆಗಳನ್ನು ಬರೆಯುವ ಯುವ ಲೇಖಕ ಹಾಗೂ ಲೇಖಕಿಯರಿಗೆ 2024ರಲ್ಲಿ ನಡೆಯುವ ಕರ್ನಾಟಕ ಲಿಟ್ ಫೆಸ್ಟ್‌ನಲ್ಲಿ ವಿಶೇಷ ಉಡುಗೊರೆ ನೀಡಲಾಗುವುದು’ ಎಂದು ಹೇಳಿದರು.

ಕಥೆಗಾರ ಕಾ.ತ. ಚಿಕ್ಕಣ್ಣ, ‘ಇತ್ತೀಚಿನ ದಿನಗಳಲ್ಲಿ ಕಥೆ ಮತ್ತು ಕವಿತೆ ಬರೆಯುವವರ ಸಂಖ್ಯೆ ಜಾಸ್ತಿಯಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಯುವಜನರಿಗೆ ಬರವಣಿಗೆ ಎನ್ನುವುದು ಬಿಡುಗಡೆ ಇದ್ದಂತೆ. ಅವರಿಗೆ ಬರೆಯುವ ಹಸಿವು ತುಂಬಾ ಇರುತ್ತದೆ. ಆದರೆ, ಮಾರ್ಗದರ್ಶನದ ಕೊರತೆ ಇರುತ್ತದೆ. ಅಂಥವರಿಗೆ ಓದು ಬರವಣಿಗೆಯ ಕ್ಷೇತ್ರದಲ್ಲಿ ದಾರಿ ತೋರಿಸಿದರೆ ಖಂಡಿತವಾಗಿಯೂ ಅವರನ್ನು ಸಶಕ್ತ ಕಥೆಗಾರರನ್ನಾಗಿ ಮಾಡಬಹುದು’ ಎಂದು ತಿಳಿಸಿದರು.

ಪತ್ರಕರ್ತ ಲಕ್ಷ್ಮಣ ಕೊಡಸೆ, ‘ಸರ್ಕಾರದ ಅಕಾಡೆಮಿ, ಪ್ರಾಧಿಕಾರಗಳು ಮಾಡಬೇಕಾದ ಕೆಲಸವನ್ನು ವೀರಲೋಕ ತಂಡದವರು ಮಾಡುತ್ತಿದ್ದಾರೆ. ಸಾಹಿತ್ಯಕ್ಕಾಗಿ, ಯುವ ಪ್ರತಿಭೆಗಳನ್ನು ಗುರುತಿಸುವುದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿರುವುದು ಶ್ಲಾಘನೀಯ’ ಎಂದರು.



ನಗರದಲ್ಲಿ ಭಾನುವಾರ ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2022–23ನೇ ಸಾಲಿನಲ್ಲಿ ತೇರ್ಗಡೆ ಹೊಂದಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯಿತು. (ಮಧ್ಯದಲ್ಲಿ ಕುಳಿತವರು ಎಡದಿಂದ) ಡಾ. ಲಕ್ಷ್ಮೀನರಸಯ್ಯ, ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಎಂ. ಗುರಪ್ಪ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ, ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಂ. ನಾಗರಾಜ್‌, ಕಾರ್ಯದರ್ಶಿ ಎಸ್‌.ಜೆ. ಕಾಳೇಗೌಡ, ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಜಂಟಿ ನಿರ್ದೇಶಕ ಎನ್‌. ನವನೀತ್ ಮೋಹನ್ ಇದ್ದಾರೆ —ಪ್ರಜಾವಾಣಿ ಚಿತ್ರ

ಸಿಇಟಿ: 2ನೇ ದಿನ ಶೇ 93.16 ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುತ್ತಿರುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ -23) ಎರಡನೇ ದಿನವಾದ ಭಾನುವಾರ ರಾಜ್ಯದಲ್ಲೆಡೆ ಸುಸೂತ್ರವಾಗಿ ನಡೆಯಿತು.

ಬೆಂಗಳೂರಿನ 121 ಕೇಂದ್ರಗಳು ಸೇರಿದಂತೆ ರಾಜ್ಯದ ಎಲ್ಲಾ 592 ಕೇಂದ್ರಗಳಲ್ಲಿ ಪರೀಕ್ಷೆಯು ಪಾರದರ್ಶಕವಾಗಿ ನಡೆದಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಒಟ್ಟು ನೋಂದಾಯಿಸಿದ್ದ 2,61,610 ವಿದ್ಯಾರ್ಥಿಗಳ ಪೈಕಿ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ ಪರೀಕ್ಷೆಗಳಿಗೆ ತಲಾ 2,39,716 (ಒಟ್ಟು ಶೇ 93.16) ವಿದ್ಯಾರ್ಥಿಗಳು ಹಾಜರಾಗಿದ್ದರು. ಸೋಮವಾರ ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ ಕನ್ನಡ ಭಾಷೆ ಪರೀಕ್ಷೆಯು ನಿಗದಿಯಾಗಿರುವಂತೆ ನಡೆಯಲಿದೆ. ಬೀದರ್, ಬೆಳಗಾವಿ, ಬಳ್ಳಾರಿ, ವಿಜಯಪುರ, ಮಂಗಳೂರು, ಬೆಂಗಳೂರು ಕೇಂದ್ರದಲ್ಲಿ ಪರೀಕ್ಷೆ ನಡೆಯಲಿದೆ.

ವಿಶೇಷ ಅಧಿವೇಶನ: ನಿಷೇಧಾಜ್ಞೆ ಜಾರಿ

ಬೆಂಗಳೂರು: ವಿಧಾನಸಭೆಯ ವಿಶೇಷ ಅಧಿವೇಶನ ಮೇ 22ರಿಂದ 24ರವರೆಗೆ ನಡೆಯಲಿದ್ದು ವಿಧಾನಸೌಧದ ಸುತ್ತಮುತ್ತ 2 ಕಿ.ಮೀ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಮೂರು ದಿನವೂ ಬೆಳಿಗ್ಗೆ 6ರಿಂದ ಮಧ್ಯರಾತ್ರಿ 12 ಗಂಟೆ ವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸಿ.ಎಚ್.ಪ್ರತಾಪ್ ರೆಡ್ಡಿ ತಿಳಿಸಿದ್ದಾರೆ.

ಈ ಆದೇಶದ ಅನ್ವಯ ನಿಷೇಧಿತ ಪ್ರದೇಶದಲ್ಲಿ ಐದಕ್ಕಿಂತ ಹೆಚ್ಚು ಮಂದಿ ಗುಂಪು ಸೇರುವಂತಿಲ್ಲ. ಮೆರವಣಿಗೆ ಮತ್ತು ಸಭೆ ನಡೆಸುವಂತಿಲ್ಲ. ಶಸ್ತ್ರಾಸ್ತ್ರಗಳು, ದೊಣ್ಣೆಗಳು, ಮಾರಕಾಸ್ತ್ರಗಳನ್ನು ಕೊಂಡೊಯ್ಯುವಂತಿಲ್ಲ. ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಉಪಕರಣ ಸಾಗಾಟ, ಶೇಖರಣೆ ನಿಷೇಧಿಸಲಾಗಿದೆ.

ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ವಿಷಾದ

ಚಪ್ಪಲಿ ಬೇಕು, ತಯಾರಕರು ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಪ್ಪಲಿಗಳು ಎಲ್ಲರಿಗೂ ಬೇಕು. ಆದರೆ ಚಪ್ಪಲಿ ಹೊಲಿದುಕೊಡುವ ಸಮುದಾಯ ಮಾತ್ರ ಯಾರಿಗೂ ಬೇಡ. ಈ ಸಮುದಾಯಕ್ಕೆ ಗೌರವ ನೀಡಬೇಕೆಂಬ ಸಾಮಾನ್ಯಜ್ಞಾನವೂ ಯಾರಿಗೂ ಇಲ್ಲ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಬೇಸರ ವ್ಯಕ್ತಪಡಿಸಿದರು.

ಆದಿಜಾಂಬವ ಜಾಗೃತಿ ಪಾಕ್ಷಿಕ ಪತ್ರಿಕೆ ವತಿಯಿಂದ ಆಯೋಜಿಸಿದ್ದ ಕೆ.ಮೋಹನದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಕಿರೀಟದ ಅಗತ್ಯವಿಲ್ಲ, ಚಪ್ಪಲಿ ಈಗ ಎಲ್ಲರಿಗೂ ಅಗತ್ಯ ವಸ್ತು. ಮಕ್ಕಳಿಂದ ಆದಿಯಾಗಿ ಮಠಾಧೀಶರ ತನಕ ಎಲ್ಲರಿಗೂ ಪಾದರಕ್ಷೆಗಳು ಬೇಕು. ಆದರೆ, ಅದನ್ನು ಹೊಲಿದುಕೊಡುವ ಸಮುದಾಯ ಎಲ್ಲರ ನಿರ್ಲಕ್ಷ್ಯಕ್ಕೆ ಒಳಗಾಗಿದೆ’ ಎಂದು ಹೇಳಿದರು.

ಅಮೆರಿಕದಲ್ಲಿ ಮೂರು ಡಾಕ್ಟರೇಟ್ ಪಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ‘ಪಂಡಿತ’ ಎಂದು ಯಾರೂ ಹೇಳಲಿಲ್ಲ. ಕನಿಷ್ಠ ಒಂದು ಪದವಿಯನ್ನೂ ಪಡೆಯದಿದ್ದರೂ ಸಮುದಾಯದ ಕಾರಣಕ್ಕೆ ಪಂಡಿತರಾಗುತ್ತಾರೆ ಎಂದು ಹೇಳಿದರು.

‘ಈ ರೀತಿ ಬ್ರ್ಯಾಂಡ್‌ಗಳು ನಿಲ್ಲಬೇಕು, ಕಷ್ಟಪಟ್ಟು ವಿದ್ಯಾರ್ಜನೆ ಮಾಡಿದವರಿಗೆ ಮನ್ನಣೆ ದೊರೆಯಬೇಕು. ಸಮಾಜಕ್ಕೆ ಕೊಡುಗೆ ನೀಡಿದವರನ್ನು ಗುರುತಿಸಿ ಗೌರವಿಸುವ ಕೆಲಸ ಆಗಬೇಕು. ಈ ರೀತಿ ಕಷ್ಟದಿಂದ ಬಂದ ಮೂವರು ಸಾಧಕರಿಗೆ ದತ್ತಿನಿಧಿ ಪ್ರಶಸ್ತಿ ನೀಡಿರುವುದು ಅರ್ಥಪೂರ್ಣ’ ಎಂದು ತಿಳಿಸಿದರು.



ನಿವೃತ್ತ ನ್ಯಾಯಮೂರ್ತಿ ಎಂ.ರಾಮಕೃಷ್ಣ ಅವರಿಗೆ ‘ಸಂವಿಧಾನ ಶಿಲ್ಪಿ’ ಪ್ರಶಸ್ತಿ, ಲೇಖಕ ಆರ್‌.ರಂಗಸ್ವಾಮಿ ಅವರಿಗೆ ‘ಹಸಿರು ಕ್ರಾಂತಿಯ ಹರಿಕಾರ’ ಪ್ರಶಸ್ತಿ, ಬರಹಗಾರ್ತಿ ಚಿತ್ರದುರ್ಗದ ಡಿ.ಶಿವರುದ್ರಮ್ಮ ಅವರಿಗೆ ‘ಒನಕೆ ಓಬವ್ವ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹೈಕೋರ್ಟ್ ನ್ಯಾಯಮೂರ್ತಿಗಳಾದ ಆರ್‌. ದೇವದಾಸ್, ಕೃಷ್ಣ ಎಸ್‌.ದೀಕ್ಷಿತ್, ಮೋಹನದೇವ್ ಆಳ್ವ, ಲೇಖಕ ಎಸ್‌.ಎಸ್‌.ಪಡಶೆಟ್ಟಿ, ಸುಮಂಗಲಿ ಸೇವಾಶ್ರಮದ ಎಸ್‌.ಜಿ.ಸುಶೀಲಮ್ಮ, ವಕೀಲ ರಾಜೇಶ್, ಜಾಂಬವ ಎಂ.ಗಂಗಾಧರ್ ಇದ್ದರು —ಪ್ರಜಾವಾಣಿ ಚಿತ್ರ

ಸೋಮವಾರ, ಮೇ 22, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 141 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಬೆಂಗಳೂರು ನಗರ ವಿವಿಯಲ್ಲಿ ಹೊಸ ಪದವಿ ಕೋರ್ಸ್‌ಗಳು



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 7

ಬೆಂಬಲ ಕ್ರೋಡೀಕರಣ: ವಿಪಕ್ಷಗಳತ್ತ ಮುಖ 9

ಚುಂಚಶ್ರೀ- ಡಿಕೆಶಿ ಗೋಪ್ಯ ಮಾತುಕತೆ 4

ವಿಶ್ವಸಂಸ್ಥೆಯಲ್ಲಿ ಸುಧಾರಣೆ ಅಗತ್ಯ: ಪ್ರಧಾನಿ ಮೋದಿ 9

ಗುಂಡಿಕ್ಕಿ ಗರ್ಭಿಣಿ ಆನೆ ಹತ್ಯೆ 4

9ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ವರುಣನ ಆರ್ಭಟ • ಗುಡುಗು ಸಹಿತ ಆಲಿಕಲ್ಲು ಮಳೆ

ಭಾರಿ ಮಳೆ: ಆರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ಸುರಿದ ಗುಡುಗುಸಹಿತ ಧಾರಾಕಾರ ಮಳೆಗೆ ಆರು ಮಂದಿ ಮೃತಪಟ್ಟಿದ್ದಾರೆ. ಮಳೆಯ ಆರ್ಭಟಕ್ಕೆ ಹಲವು ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಚಿಕ್ಕಮಗಳೂರು, ಮೈಸೂರು, ಕೊಡಗು, ಧಾರವಾಡ, ಕೊಪ್ಪಳ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದ್ದು, ಕೆಲವೆಡೆ ಆಲಿಕಲ್ಲು ಸಹಿತ ಮಳೆ ಸುರಿದಿದೆ. ಜೋರು ಗಾಳಿಯಿಂದಾಗಿ ರಸ್ತೆಗಳ ಮೇಲೆ ಮರಗಳು ಬಿದ್ದು ವಾಹನ ಸಂಚಾರ ಅಡಚಣೆ ಆಯಿತು. ವಿದ್ಯುತ್ ಕಂಬಗಳು ಉರುಳಿ ಹಾನಿ ಸಂಭವಿಸಿದೆ.

ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಅಂಡರ್‌ಪಾಸ್ ಮೂಲಕ ಕಾರನ್ನು ದಾಟಿಸಲು ಯತ್ನಿಸಿದಾಗ ಅಲ್ಲಿ ಸಂಗ್ರಹವಾಗಿದ್ದ ನೀರು ಕಾರಿನೊಳಗೆ ನುಗ್ಗಿ ಇನ್ಫೊಸಿಸ್ ಉದ್ಯೋಗಿ ಭಾನುರೇಖಾ (23) ಮೃತಪಟ್ಟಿದ್ದಾರೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಡಿ. ಸಿದ್ದಾಪುರದಲ್ಲಿ ಸಿಡಿಲು ಬಡಿದು ಅಪ್ಪೇನಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯ ಮಲ್ಲಿಕಾರ್ಜುನ (39) ಮೃತಪಟ್ಟರೆ, ಬೆಟ್ಟದಪುರ ಸಮೀಪದ ಬಾರಸೆ ಗ್ರಾಮದ ಜಮೀನಿನಲ್ಲಿ ವಿದ್ಯುತ್ ತಂತಿ ತುಳಿದು ಕೆ.ದೊಡ್ಡಕೊಪ್ಪಲಿನ ಸ್ವಾಮಿ (18) ಸಾವಿಗೀಡಾಗಿದ್ದಾರೆ.

ಪಿರಿಯಾಪಟ್ಟಣ ತಾಲ್ಲೂಕಿನ ಅವರ್ತಿಯ ಲೋಕೇಶ್ (55) ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಸಿಡಿಲು ಬಡಿದು, ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯಲ್ಲಿ ಬೈಕ್ ಮೇಲೆ ಮರ ಉರುಳಿ, ಸವಾರ ವೇಣುಗೋಪಾಲ್ (58) ಸಾವಿಗೀಡಾಗಿದ್ದಾರೆ.

ಕೊಪ್ಪಳ ತಾಲ್ಲೂಕಿನ ಶಿವಪುರದಲ್ಲಿ ಶ್ರೀಕಾಂತ್ ಮೇಟಿ (16) ಎಂಬ ಬಾಲಕ ಸಿಡಿಲು ಬಡಿದು ಮೃತಪಟ್ಟಿದ್ದಾನೆ.



ಭಾರಿ ಮಳೆಯಿಂದ ಬೆಂಗಳೂರಿನ ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಮುಳುಗಿದ್ದ ಕಾರನ್ನು ಅಗ್ನಿಶಾಮಕ ಸಿಬ್ಬಂದಿ ಹೊರಗೆಳೆದರು ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಐದು ದಿನ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡು ಹಾಗೂ ಕರಾವಳಿಯ ಜಿಲ್ಲೆಗಳಲ್ಲಿ ಮುಂದಿನ ಐದು ದಿನ ಗುಡುಗುಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ ಹಾಗೂ ಉಡುಪಿಯ ಒಂದೆರಡು ಕಡೆ, ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರದ ಕೆಲವೆಡೆ ಸೋಮವಾರ ಗುಡುಗು ಸಹಿತ ಮಳೆಯಾಗಬಹುದು. ಉತ್ತರ ಒಳನಾಡು ಹಾಗೂ ಕರಾವಳಿಯ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣಹವೆ ಇರುವ ಸಾಧ್ಯತೆ ಇದೆ. ಗರಿಷ್ಠ ಉಷ್ಣಾಂಶವು ರಾಜ್ಯದ ಕೆಲವು ಕಡೆ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಲಿದೆ ಎಂದು ಇಲಾಖೆ ತಿಳಿಸಿದೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಮೈಸೂರಿನ ಟಿ. ನರಸೀಪುರದಲ್ಲಿ ಗರಿಷ್ಠ (12 ಸೆಂ.ಮೀ.) ಮಳೆಯಾಗಿದೆ. ತುಮಕೂರಿನ ಶಿರಾದಲ್ಲಿ 6 ಸೆಂ.ಮೀ., ರಾಮನಗರದಲ್ಲಿ 5 ಸೆಂ.ಮೀ., ಬೆಂಗಳೂರು ನಗರ, ರಾಮನಗರದ ಚಂದೂರಾಯನಹಳ್ಳಿಯಲ್ಲಿ ತಲಾ 3 ಸೆಂ.ಮೀ. ಮಳೆಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (41.8 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ವಾರದೊಳಗೆ ಸಂಪುಟ ವಿಸ್ತರಣೆ

ಡಿ.ಕೆ.ಶಿವಕುಮಾರ್ ಸುಳಿವು • ಸಚಿವ ಸ್ಥಾನ ಆಕಾಂಕ್ಷಿಗಳಿಂದ ಹೆಚ್ಚಿದ ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸ್ಥಾನ ಸಿಗದಿರುವ ಕಾರಣಕ್ಕೆ ದಿನೇಶ್ ಗುಂಡೂರಾವ್, ಬಸವರಾಜ ರಾಯರೆಡ್ಡಿ ಸೇರಿದಂತೆ ಕೆಲವು ಹಿರಿಯ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ, ಇದೇ ವಾರ ರಾಜ್ಯ ಸಚಿವ ಸಂಪುಟ ವಿಸ್ತರಿಸುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸುಳಿವು ನೀಡಿದ್ದಾರೆ.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಇದೇ 22ರಿಂದ ಮೂರು ದಿನ ನಡೆಯಲಿರುವ ವಿಧಾನಸಭೆ ಅಧಿವೇಶನದಲ್ಲಿ ಹೊಸ ಶಾಸಕರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಆ ನಂತರ ಸಂಪುಟ ವಿಸ್ತರಣೆ ಬಗ್ಗೆ ತೀರ್ಮಾನಿಸಲಾಗುವುದು’ ಎಂದರು.

ಹೊಸ ಸಚಿವ ಸಂಪುಟದಲ್ಲಿ 25ರಿಂದ 28 ಸಚಿವರು ಇರುವ ಸಾಧ್ಯತೆಯಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಜೊತೆ ಎಂಟು ಶಾಸಕರು ಸಂಪುಟ ದರ್ಜೆಯ ಸಚಿವರಾಗಿ ಶನಿವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಭಿನ್ನಾಭಿಪ್ರಾಯದ ಕಾರಣಕ್ಕೆ ಕೇವಲ ಎಂಟು ಶಾಸಕರು ಸಂಪುಟ ಸೇರಿದ್ದಾರೆ. ಮುಖ್ಯಮಂತ್ರಿ ಸೇರಿ ಒಟ್ಟು 34 ಸದಸ್ಯರಿಗೆ ಸಂಪುಟದಲ್ಲಿ ಅವಕಾಶವಿದೆ.

> **ಸಂಪುಟ ಸಚಿವರಿಗೆ ಖಾತೆ ಹಂಚಿಕೆ ವಿಚಾರ ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಬಿಟ್ಟದ್ದು. ಅದೆಲ್ಲವನ್ನೂ ಅವರು ತೀರ್ಮಾನ ಮಾಡುತ್ತಾರೆ**
> **ಡಿ.ಕೆ. ಶಿವಕುಮಾರ್**
> ಉಪ ಮುಖ್ಯಮಂತ್ರಿ

ಈ ಮಧ್ಯೆ, ಸಚಿವ ಸ್ಥಾನ ನಿರೀಕ್ಷೆಯಲ್ಲಿದ್ದ ಹಲವು ಹಿರಿಯ ಶಾಸಕರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಸಂಪುಟ ಸೇರಲು ಒತ್ತಡ ಹಾಕುತ್ತಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ದಿನೇಶ್ ಗುಂಡೂರಾವ್, ‘ನಾನು ಆರನೇ ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಶಾಸಕನಾಗಿದ್ದ ಕಳೆದ 24 ವರ್ಷಗಳಲ್ಲಿ ಮೂರು ವರ್ಷ ಮಾತ್ರ ಸಚಿವನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಉಳಿದ ಅವಧಿಯಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕವಾಗಿ ಪಕ್ಷದ ಕೆಲಸ ಮಾಡಿದ್ದೇನೆ. ನನಗೂ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ. ಆದಷ್ಟು ಬೇಗ ಸಚಿವ ಸಂಪುಟ ವಿಸ್ತರಿಸುವ ಸಾಧ್ಯತೆಯಿದೆ’ ಎಂದರು.

‘ಯಾವುದೇ ಖಾತೆ ಕೊಟ್ಟರೂ ನಿಭಾಯಿಸುತ್ತೇನೆ. ಎಲ್ಲವೂ ವರಿಷ್ಠರ ಗಮನದಲ್ಲಿದೆ. ಅಧಿಕಾರದ ಹಿಂದೆ ಬೀಳುವ ವ್ಯಕ್ತಿ ನಾನಲ್ಲ’ ಎಂದ ಅವರು, ‘ಯಾರು ಅರ್ಹರಿದ್ದಾರೆ ಅಂಥವರನ್ನು ಬಿಟ್ಟರೆ ಸಮಸ್ಯೆಗಳು ಎದುರಾಗುತ್ತವೆ’ ಎಂದೂ ಹೇಳಿದರು.

ಭದ್ರಾವತಿ ಕಾಂಗ್ರೆಸ್ ಶಾಸಕ ಬಿ.ಕೆ. ಸಂಗಮೇಶ್ ಕೂಡಾ ಸಚಿವ ಸ್ಥಾನ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಮತ್ತೊಬ್ಬ ಸಚಿವ ಸ್ಥಾನ ಆಕಾಂಕ್ಷಿ ಬಸವರಾಜ ರಾಯರೆಡ್ಡಿ ಅವರು ಸಿದ್ದರಾಮಯ್ಯ ಅವರನ್ನು ಭಾನುವಾರ ಬೆಳಿಗ್ಗೆ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಬಳಿಕ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಗೆಲುವು ಕಂಡ ಲಿಂಗಾಯತರಲ್ಲಿ ನಾನು ಕೂಡ ಹಿರಿಯ. ಒಮ್ಮೆ ಸಂಸದ, ಏಳು ಬಾರಿ ಶಾಸಕನಾಗಿದ್ದೇನೆ. ನನಗೆ ಆಡಳಿತಾತ್ಮಕ ಅನುಭವವಿದೆ. ಸಚಿವನಾದರೆ ಹೆಚ್ಚು ಜನಸೇವೆ ಮಾಡಬಹುದು. ಹೀಗಾಗಿ, ನಾನು ಕೂಡಾ ಆಕಾಂಕ್ಷಿ. ಮುಂದಿನ ಸೋಮವಾರದ ಒಳಗೆ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆಯಾಗುವ ಬಗ್ಗೆ ಮಾಹಿತಿಯಿದೆ’ ಎಂದರು.

ಹಾವೇರಿ ಶಾಸಕ ರುದ್ರಪ್ಪ ಲಮಾಣಿ (ಪರಿಶಿಷ್ಟ ಜಾತಿ) ಮತ್ತು ಚಾಮರಾಜನಗರ ಶಾಸಕ ಸಿ. ಪುಟ್ಟರಂಗಶೆಟ್ಟಿ (ಉಪ್ಪಾರ) ಕೂಡಾ ತಮ್ಮನ್ನೂ ಸಂಪುಟ ಸ್ಥಾನಕ್ಕೆ ಪರಿಗಣಿಸಬೇಕು ಎಂದಿದ್ದಾರೆ. ‘ಜಾತಿ ಮತ್ತು ಪ್ರಾದೇಶಿಕವಾರು ಅನೇಕ ಹಿರಿಯರನ್ನು ಸಂಪುಟದಿಂದ ಹೊರಗಿಡಲಾಗಿದೆ’ ಎಂದು ಲಮಾಣಿ ಹೇಳಿದರೆ, ‘ನಾನು ಉಪ್ಪಾರ ಸಮುದಾಯದವನಾಗಿದ್ದು, ನಾಲ್ಕು ಬಾರಿ ಶಾಸಕನಾಗಿದ್ದೇನೆ. ಚಾಮರಾಜನಗರ ಜಿಲ್ಲೆಯಲ್ಲಿ ನಾನು ಹಿರಿಯನಾಗಿದ್ದೇನೆ’ ಎಂದು ಪುಟ್ಟರಂಗಶೆಟ್ಟಿ ಹೇಳಿಕೊಂಡಿದ್ದಾರೆ.

₹2000 ನೋಟು ಬದಲಿಸಲು ಅರ್ಜಿ ಬೇಡ: ಎಸ್‌ಬಿಐ

ನವದೆಹಲಿ (ಪಿಟಿಐ): ₹2 ಸಾವಿರ ಮುಖಬೆಲೆಯ ನೋಟುಗಳನ್ನು ಬೇರೆ ನೋಟುಗಳೊಂದಿಗೆ ಬದಲಿಸಿಕೊಳ್ಳಲು ಯಾವುದೇ ಮನವಿ ಪತ್ರ ಅಥವಾ ಗುರುತಿನ ಚೀಟಿಯ ಅಗತ್ಯ ಇಲ್ಲ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಭಾನುವಾರ ಹೇಳಿದೆ.

ಒಂದು ಬಾರಿಗೆ ₹20 ಸಾವಿರದ ವರೆಗೆ ನೋಟು (10 ನೋಟುಗಳು) ಬದಲಿಸಿಕೊಳ್ಳಬಹುದು ಎಂದು ಎಸ್‌ಬಿಐ ತನ್ನ ಎಲ್ಲ ಸ್ಥಳೀಯ ಕೇಂದ್ರ ಕಚೇರಿಗಳ ಮುಖ್ಯ ಜನರಲ್ ಮ್ಯಾನೇಜರ್‌ಗಳಿಗೆ ಮಾಹಿತಿ ನೀಡಿದೆ.

ಗ್ರಾಹಕರಿಗೆ ನೋಟು ಬದಲಿಸಿಕೊಳ್ಳಲು ಬ್ಯಾಂಕ್ ಶಾಖೆಗಳಲ್ಲಿ ಅಗತ್ಯವಾದ ವ್ಯವಸ್ಥೆ ಕಲ್ಪಿಸುವಂತೆ ತಿಳಿಸಿದೆ.

₹2 ಸಾವಿರದ ನೋಟನ್ನು ಖಾತೆಗೆ ಜಮಾ ಮಾಡಲು ಆರ್‌ಬಿಐ ಯಾವುದೇ ಮಿತಿ ಹೇರಿಲ್ಲವಾದರೂ ಈ ಪ್ರಕ್ರಿಯೆಯು ಕೆವೈಸಿ ಮತ್ತು ಶಾಸನಬದ್ಧ ನಿಯಮಗಳಿಗೆ ಒಳಪಟ್ಟಿರಲಿದೆ ಎಂದು ಹೇಳಿದೆ.

ನೋಟು ಬದಲಿಸಿಕೊಳ್ಳಲು ಒಬ್ಬ ವ್ಯಕ್ತಿ ಎಷ್ಟು ಬಾರಿ ಬೇಕಿದ್ದರೂ ಸರತಿಯಲ್ಲಿ ನಿಲ್ಲಬಹುದು. ಕೆಲವು ಗ್ರಾಹಕರು, ನಗದು ಜಮಾ ಯಂತ್ರಗಳನ್ನು ಬಳಸಿ ಶನಿವಾರವೇ ತಮ್ಮ ಖಾತೆಗೆ ₹2 ಸಾವಿರದ ನೋಟುಗಳನ್ನು ಜಮಾ ಮಾಡಿದ್ದಾರೆ. ಬಹಳಷ್ಟು ಮಂದಿ ಚಿನ್ನ ಖರೀದಿಸುವ ಪ್ರಯತ್ನ ನಡೆಸಿದ್ದಾರೆ. ವರ್ತಕರು ₹2000 ನೋಟು ಪಡೆಯಲು ಹಿಂದೇಟು ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜೀರೊ ಟ್ರಾಫಿಕ್ ಬೇಡ: ಸಿ.ಎಂ

ಬೆಂಗಳೂರು: ವಾಹನ ದಟ್ಟಣೆಯಿಂದ ಜನರಿಗೆ ಆಗುವ ಕಿರಿಕಿರಿ ತಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜೀರೊ ಟ್ರಾಫಿಕ್ ಸೌಲಭ್ಯವನ್ನು ತ್ಯಜಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ‘ನನ್ನ ವಾಹನ ಸಂಚಾರಕ್ಕೆ ನೀಡಲಾಗಿರುವ ಜೀರೊ ಟ್ರಾಫಿಕ್ ಸೌಲಭ್ಯವನ್ನು ಹಿಂದಕ್ಕೆ ಪಡೆಯುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ತಿಳಿಸಿದ್ದೇನೆ ಎಂದಿದ್ದಾರೆ.

ಅಲ್ಲದೆ, ಸಾರ್ವಜನಿಕರಿಂದ ಗೌರವ–ಸನ್ಮಾನ ರೂಪದಲ್ಲಿ ಹಾರ–ತುರಾಯಿ, ಶಾಲು–ಶಲ್ಯಗಳನ್ನು ಸ್ವೀಕರಿಸದಿರಲು ನಿರ್ಧರಿಸಿರುವ ಅವರು, ಪ್ರೀತಿ ಗೌರವವನ್ನು ಕಾಣಿಕೆಗಳ ಮೂಲಕವೇ ಸಲ್ಲಿಸಲು ಬಯಸುವವರು ಪುಸ್ತಕಗಳನ್ನು ನೀಡಬಹುದು ಎಂದಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ: ಫೆಬ್ರುವರಿಯಿಂದ ತೆರವಾಗದ ಒತ್ತುವರಿ: ಹೂಳು ತೆರವು, ಕಾಂಕ್ರೀಟ್ ಗೋಡೆ ನಿರ್ಮಾಣವೂ ಆಗಿಲ್ಲ

ಸಂಕಷ್ಟಗಳ ತಡೆಗೆ ಸಜ್ಜಾಗದ ರಾಜಧಾನಿ

• ಆರ್. ಮಂಜುನಾಥ್

ಬೆಂಗಳೂರು: ಮಳೆಯಿಂದ ಉಂಟಾಗುವ ಸಂಕಷ್ಟಗಳ ನಿಯಂತ್ರಣಕ್ಕೆ ಬೆಂಗಳೂರು ನಗರ ಇನ್ನೂ ಸಜ್ಜಾಗಿಲ್ಲ ಎಂಬುದನ್ನು ಭಾನುವಾರ ಮುಕ್ಕಾಲು ಗಂಟೆ ಸುರಿದ ಮಳೆ ಬಹಿರಂಗಗೊಳಿಸಿದೆ.

ಅತಿಹೆಚ್ಚು ಮಳೆಯಿಂದ ‘ಪೂರ್ವ ಬೆಂಗಳೂರು ಮುಳುಗಿದ’ ಸಂದರ್ಭದಲ್ಲಿ ಮುಖ್ಯಮಂತ್ರಿಯಾದಿಯಾಗಿ ಸಚಿವರು, ಶಾಸಕರು, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೀಡಿದ್ದ ಆಶ್ವಾಸನೆಗಳನ್ನು ಈಡೇರಿಲ್ಲ.

ರಸ್ತೆಗಳ ಚರಂಡಿ, ಶೋಲ್ಡರ್ ಡ್ರೈನ್ ಸ್ವಚ್ಛತೆ, ರಾಜಕಾಲುವೆ ಒತ್ತುವರಿ ತೆರವು, ಕಾಲುವೆಗಳ ಹೂಳು ತೆಗೆದು, ಕಾಂಕ್ರೀಟ್ ಗೋಡೆಗಳನ್ನು ನಿರ್ಮಿಸುವ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಮಾಡಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ, ಫೆಬ್ರುವರಿಯಿಂದ ಈವರೆಗೆ ರಾಜಕಾಲುವೆ ತೆರವಿನ ಒಂದು ಕಾರ್ಯಾಚರಣೆಯೂ ನಡೆದಿಲ್ಲ ಎಂಬುದನ್ನು ಬಿಬಿಎಂಪಿ ಅಂಕಿ–ಅಂಶವೇ ಹೇಳುತ್ತದೆ. ಇನ್ನು, ₹1,500 ಕೋಟಿ ವೆಚ್ಚದ ಹೂಳು ತೆರವು ಹಾಗೂ ಕಾಂಕ್ರೀಟ್ ಗೋಡೆಗಳ ನಿರ್ಮಾಣ ಕಾರ್ಯ ಇನ್ನೂ ಪ್ರಗತಿಯಲ್ಲೇ ಇದೆ ಎಂಬುದನ್ನು ಮಹಾಲಕ್ಷ್ಮಿ ಲೇಔಟ್ ಸೇರಿದಂತೆ ನಗರದ ಇತರೆ ಪ್ರದೇಶಗಳಲ್ಲಿ ಮನೆಗಳಿಗೆ ನುಗ್ಗಿರುವ ನೀರು ತೋರಿಸುತ್ತಿದೆ.



ದೊಡ್ಡನೆಕ್ಕುಂದಿ ಕೆರೆಯಲ್ಲಿ ನಡೆಯುತ್ತಿರುವ ತೂಬು ನಿರ್ಮಾಣ ಕಾಮಗಾರಿ

ನಗರದಲ್ಲಿ ಮಳೆಗಾಲದ ಸಂದರ್ಭದಲ್ಲಿ ನಾಗರಿಕರಿಗೆ ಯಾವುದೇ ಸಂಕಷ್ಟ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೀಡಿದ್ದ ಭರವಸೆ ಸುಳ್ಳಾಗಿದೆ. ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಸೇರಿದಂತೆ ವಿಭಾಗದ ಎಲ್ಲ ಸಿಬ್ಬಂದಿಗೂ ಚುನಾವಣೆ ಕಾರ್ಯದಿಂದ ಮುಕ್ತಗೊಳಿಸಲಾಗಿತ್ತು. ಆದರೂ, ನಿರೀಕ್ಷಿತ ಪ್ರಮಾಣದಲ್ಲಿ ಕೆಲಸಗಳಾಗಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಇನ್ನೂ 784 ಸ್ಥಳಗಳಲ್ಲಿ ರಾಜಕಾಲುವೆ ಒತ್ತುವರಿ ಹಾಗೆಯೇ ಉಳಿದಿದೆ. ಮಹದೇವಪುರ ವಲಯದಲ್ಲಿ ಕಳೆದ ಬಾರಿ ಅತಿಹೆಚ್ಚು ಮಳೆಯಿಂದ ಸಾಕಷ್ಟು ಹಾನಿಯಾಗಿತ್ತು. ಈ ವಲಯದಲ್ಲೇ ಇನ್ನೂ 305 ಸ್ಥಳಗಳಲ್ಲಿ ಒತ್ತುವರಿ ಹಾಗೆಯೇ ಉಳಿದಿದೆ. ದಾಸರಹಳ್ಳಿ ವಲಯದಲ್ಲಿ 124, ಬೊಮ್ಮನಹಳ್ಳಿಯಲ್ಲಿ 86, ಯಲಹಂಕದಲ್ಲಿ 79, ಪೂರ್ವ ವಲಯದಲ್ಲಿ 103 ಸ್ಥಳಗಳಲ್ಲಿ ರಾಜಕಾಲುವೆ ಒತ್ತುವರಿ ಉಳಿದಿದೆ ಎಂಬುದು ಬಿಬಿಎಂಪಿಯ ಇತ್ತೀಚಿನ ಅಂಕಿ–ಅಂಶಗಳಲ್ಲಿದೆ.

ರಾಜಕಾಲುವೆ ಮರು ನಿರ್ಮಾಣಕ್ಕೆ ರಾಜ್ಯ ಸರ್ಕಾರ ವಿಶೇಷವಾಗಿ ಸುಮಾರು ₹1,750 ಕೋಟಿ ಬಿಡುಗಡೆ ಮಾಡಿದೆ. ಅತ್ಯಂತ ಅಗತ್ಯವಾದ ಕಡೆ ಮಳೆಗಾಲದಲ್ಲಿ ತೊಂದರೆಯಾಗುವುದನ್ನು ತಪ್ಪಿಸಲು ₹1,500 ಕೋಟಿ ವೆಚ್ಚದ ಕಾಮಗಾರಿ ನಡೆಯುತ್ತಿದೆ ಎಂದು ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹೇಳುತ್ತಿದ್ದಾರೆ. ಆದರೆ, ಅದು ವಾಸ್ತವದಲ್ಲಿ ಕಾಣುತ್ತಿಲ್ಲ ಎಂದು ಮಹದೇವಪುರದ ಜಗದೀಶ್ ರೆಡ್ಡಿ ದೂರುತ್ತಾರೆ.

‘ಚುನಾವಣೆ ಕಾರ್ಯದಿಂದ ರಾಜಕಾಲುವೆ ಒತ್ತುವರಿ ತೆರವು, ಮರು ನಿರ್ಮಾಣ ಯೋಜನೆ ಪ್ರಗತಿ ಪರಿಶೀಲನೆ ಮಾಡಿಲ್ಲ’ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳುತ್ತಾರೆ.

ಸರ್ಕಾರದ ಅನುಮತಿಗೆ ಕಾದಿರುವ ತೂಬು ನಿರ್ಮಾಣ

ಅಮೃತ ನಗರೋತ್ಥಾನ ಯೋಜನೆಯಲ್ಲಿ 148 ಕೆರೆಗಳಿಗೆ ‘ಸ್ಲೂಯಿಸ್ ಗೇಟ್’ (ತೂಬು) ಅಳವಡಿಸುವ ಯೋಜನೆಗೆ ರಾಜ್ಯ ಸರ್ಕಾರ ಕಳೆದ ನವೆಂಬರ್‌ನಲ್ಲಿ ಅನುಮೋದನೆ ನೀಡಿದ್ದರೂ ಕಾಮಗಾರಿ ಆರಂಭಿಸಲು ಇನ್ನೂ ಅನುಮತಿ ಸಿಕ್ಕಿಲ್ಲ.

102 ಕೆರೆಗಳಿಗೆ ‘ಸ್ಲೂಯಿಸ್ ಗೇಟ್’ ನಿರ್ಮಿಸಲು ₹36.85 ಕೋಟಿ ವೆಚ್ಚ ಮಾಡಲು ಸಮ್ಮತಿಸಿದ್ದರು. ಟೆಂಡರ್ ಪ್ರಕ್ರಿಯೆ ಮುಗಿದು ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿತ್ತು. ಈವರೆಗೂ ಸಮ್ಮತಿ ಸಿಕ್ಕಿಲ್ಲ. ಹೀಗಾಗಿ, ಈ ಬಾರಿಯೂ ಕೆರೆಗಳಿಂದ ಹರಿಯುವ ನೀರಿನ ಗತಿಯನ್ನು ತಗ್ಗಿಸುವುದು ಸಾಧ್ಯವಾಗುವುದಿಲ್ಲ.

‘10 ಕೆರೆಗಳಲ್ಲಿ ತೂಬು ಅಳವಡಿಸುವ ಕಾರ್ಯ ಹಿಂದೆಯೇ ಆರಂಭವಾಗಿತ್ತು. ಅದು ನಡೆಯುತ್ತಿದೆ. ಆದರೆ, 102 ಕೆರೆಗಳಲ್ಲಿ ತೂಬು ಅಳವಡಿಸುವ ಕಾರ್ಯಕ್ಕೆ ಸರ್ಕಾರದಿಂದ ಅನುಮತಿ ಸಿಕ್ಕ ಮೇಲೆ ಕಾರ್ಯಾದೇಶ ನೀಡಬೇಕಾಗುತ್ತದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ರಾಜಕಾಲುವೆ ಒತ್ತುವರಿ ಅಂಕಿ–ಅಂಶ

2,951	784	118
ಒಟ್ಟು ಒತ್ತುವರಿ ಪ್ರಕರಣ	ಒಟ್ಟು ತೆರವು ಬಾಕಿ	ನ್ಯಾಯಾಲಯದಲ್ಲಿರುವ ಪ್ರಕರಣ

ಗ್ಯಾರಂಟಿ ವಿಷಯದಲ್ಲಿ ಬಣ್ಣ ಬದಲಿಸಬೇಡಿ: ಸಿ.ಟಿ ರವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಅಧಿಕಾರಕ್ಕೆ ಏರಿದ ಒಂದೇ ದಿನಕ್ಕೆ ತನ್ನ ಆಶ್ವಾಸನೆ (ಗ್ಯಾರಂಟಿ) ವಿಚಾರದಲ್ಲಿ ಬಣ್ಣ ಬದಲಿಸಿದೆ. ದಿನಗಳು ಕಳೆದಂತೆ ಅದ್ಯಾವ ರೀತಿ ಬಣ್ಣ ಬದಲಿಸಲಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾಡಿನ ಜನತೆಗೆ ಕೊಟ್ಟ ಮಾತಿನಂತೆ ಚಾಚೂ ತಪ್ಪದೇ ನಡೆಯಬೇಕು’ ಎಂದು ಆಗ್ರಹಿಸಿದರು.

‘ಬಿಜೆಪಿ ಆಡಳಿತದ ಅವಧಿಯಲ್ಲಿ ಹಗರಣ ಆಗಿದ್ದರೆ ಅದನ್ನೂ ತನಿಖೆ ನಡೆಸಿ. ಕೆಂಪಣ್ಣ ಆಯೋಗ ಈಗಾಗಲೇ ಕೊಟ್ಟಿರುವ ವರದಿ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಿ. ಯಾರು ₹ 8 ಸಾವಿರ ಕೋಟಿ ನಷ್ಟ ಆಗಲು ಹೊಣೆ ಎಂಬುದು ರಾಜ್ಯದ ಜನರಿಗೆ ಗೊತ್ತಾಗಲಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ₹ 8 ಸಾವಿರ ಕೋಟಿ ವಾಪಸ್ ಬರಲಿ’ ಎಂದು ತಿಳಿಸಿದರು.

ಮಹಿಳೆಗೆ ಲೈಂಗಿಕ ಕಿರುಕುಳ: ದೂರು

ಬೆಂಗಳೂರು: ವಿಮಾನ ನಿಲ್ದಾಣದಲ್ಲಿ ಕ್ಯಾಬ್‌ಗಾಗಿ ಕಾಯುತ್ತಿದ್ದ ಮುಂಬೈನ ಮಹಿಳೆಯನ್ನು ಪರಿಚಯಿಸಿಕೊಂಡು ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದ ಉದ್ಯಮಿ ಗಣೇಶ್ ನಾರಾಯಣ್ ವಿರುದ್ಧ ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಸಂಬಂಧ ಸಂತ್ರಸ್ತೆ ರಾಜ್ಯ ಮಹಿಳಾ ಆಯೋಗಕ್ಕೆ ನೀಡಿದ್ದರು. ಆಯೋಗದ ಸೂಚನೆ ಮೇರೆಗೆ ಉದ್ಯಮಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಸಂತ್ರಸ್ತೆ 2022ರ ಆ.14ರಂದು ರಾತ್ರಿ 12 ಗಂಟೆಗೆ ಮುಂಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಈ ವೇಳೆ ಕ್ಯಾಬ್ ಬುಕ್ ಮಾಡಿಕೊಂಡು ಮನೆಗೆ ಹೋಗಲು ನಿಲ್ದಾಣದ ಕ್ಯಾಬ್ ನಿಲ್ದಾಣದಲ್ಲಿ ಕಾಯುತ್ತಿದ್ದರು. ಆ ಸ್ಥಳಕ್ಕೆ ಬಂದ ಆರೋಪಿ ಸಂತ್ರಸ್ತೆಯನ್ನು ಪರಿಚಯಿಸಿಕೊಂಡಿದ್ದ. ಕೆಲ ಹೊತ್ತು ಇಬ್ಬರೂ ಮಾತುಕತೆ ನಡೆಸಿದ್ದರು. ಮೊಬೈಲ್ ನಂಬರ್ ಕೂಡ ಬದಲಾಯಿಸಿಕೊಂಡಿದ್ದರು. ಬಳಿಕ ಆಗಾಗ ಆಕೆಗೆ ಕಿರುಕುಳ ಕೊಡುತ್ತಿದ್ದರು. ಇದರಿಂದ ಬೇಸತ್ತು ಸಂತ್ರಸ್ತೆ ದೂರು ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ರೌಡಿ ಸುರೇಶ್ ಬಾಬು ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಯನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ರೌಡಿ ಚಟುವಟಿಕೆಯಲ್ಲಿ ಸಕ್ರಿಯವಾಗಿದ್ದ ‘ಅಲ್ಯೂಮಿನಿಯಂ’ ಬಾಬು ಅಲಿಯಾಸ್ ಸುರೇಶ್ ಬಾಬು (46) ಮೃತದೇಹ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆ ಸಮೀಪದ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ.

‘ದುಷ್ಕರ್ಮಿಗಳು ಕೊಲೆ ಮಾಡಿ ಮೃತದೇಹವನ್ನು ಅರಣ್ಯ ಪ್ರದೇಶಕ್ಕೆ ತಂದು ಪೊದೆ ಬಳಿಯಲ್ಲಿಟ್ಟು ಹೋಗಿದ್ದಾರೆ’ ಎಂದು ಪೊಲೀಸರು ಶಂಕಿಸಿದ್ದಾರೆ.

ಸುರೇಶ್ ಬಾಬು ಕೆಂಗೇರಿ ಸಮೀಪದ ಕೆಎಚ್‌ಬಿ ಕಾಲೊನಿಯ ಅಪಾರ್ಟ್‌ಮೆಂಟ್‌ನಲ್ಲಿ ಪತ್ನಿ ಚಂದನಾ ಮತ್ತು ಮಗಳ ಜತೆ ವಾಸವಾಗಿದ್ದ.

ದೇಹವು ಸುಟ್ಟ ಸ್ಥಿತಿಯಲ್ಲಿತ್ತು. ಸ್ಥಳೀಯರು ಅರಣ್ಯ ಪ್ರದೇಶದಲ್ಲಿದ್ದ ಮೃತದೇಹ ಕಂಡು ತಮಿಳುನಾಡು ಪೊಲೀಸರಿಗೆ ಮಾಹಿತಿ ನೀಡಿದ್ದರು. ಜೇಬಿನಲ್ಲಿ ಲಭಿಸಿದ ಗುರುತಿನ ಚೀಟಿಗಳನ್ನು ಆಧರಿಸಿ ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಬೆಂಗಳೂರು ಪೊಲೀಸರು ಮೃತದೇಹದ ಗುರುತು ಪತ್ತೆ ಮಾಡಿದ್ದಾರೆ.

ಸುರೇಶ್‌ಬಾಬು, ಮೇ 16ರಂದು ಬೆಳಿಗ್ಗೆ ಸ್ನೇಹಿತನ ಜತೆ ಕಾರಿನಲ್ಲಿ ಮನೆಯಿಂದ ಹೊರ ಹೋಗಿದ್ದ. ಬಳಿಕ 2 ದಿನ ಕಳೆದರೂ ವಾಪಸ್ ಬಂದಿರಲಿಲ್ಲ. ಅದರಿಂದ ಆತಂಕಗೊಂಡ ಕುಟುಂಬ ಸದಸ್ಯರು ಎಲ್ಲೆಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ. ಹೀಗಾಗಿ, ಸುರೇಶ್‌ಬಾಬು ಪತ್ನಿ ಚಂದನಾ ಮೇ 18 ರಂದು ಕೆಂಗೇರಿ ಠಾಣೆಯಲ್ಲಿ ಪತಿ ನಾಪತ್ತೆ ಬಗ್ಗೆ ದೂರು ದಾಖಲಿಸಿದ್ದರು.

ಬಾಬು ಅವರನ್ನು ದುಷ್ಕರ್ಮಿಗಳು ಅಪಹರಿಸಿ, ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಗುರುತು ಸಿಗದಂತೆ ಬೆಂಕಿ ಹಾಕಿದ್ದರು ಎನ್ನಲಾಗಿದೆ.

ಅಪರಾಧ ಹಿನ್ನೆಲೆಯುಳ್ಳ ಸುರೇಶ್‌ಬಾಬು ವಿರುದ್ಧ ಜಯನಗರ, ವಿಲ್ಸನ್‌ಗಾರ್ಡನ್, ತಿಲಕ್‌ನಗರ, ಬನಶಂಕರಿ ಸೇರಿ ನಗರದ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ಅಂಡರ್‌ಪಾಸ್‌ನಲ್ಲಿ ಅನಾಹುತ: ಎಚ್ಚರಿಕೆಯ ಗಂಟೆ

ಆದ್ಯತೆ ಮೇರೆಗೆ ತೆರವು ಕಾರ್ಯಾಚರಣೆ: ಸಿದ್ದರಾಮಯ್ಯ

‘ನಾವು ಹೊಸದಾಗಿ ಬಂದಿದ್ದೇವೆ. ಮುಂದೆ ಈ ರೀತಿ ಆಗ ದಂತೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಳ್ಳುತ್ತೇವೆ. ನೀರು ನಿಲ್ಲದಂತೆ ನೋಡಿಕೊಳ್ಳಬೇಕು, ಒಳಚರಂಡಿ, ಚರಂಡಿ ವ್ಯವಸ್ಥೆಯನ್ನು ಸರಿಪಡಿಸಬೇಕು. ಅವೆಲ್ಲ ಹೂಳು ತುಂಬಿಕೊಂಡಿವೆ. ರಾಜಕಾಲುವೆ ಒತ್ತುವರಿಯಾಗಿವೆ. ಅವೆಲ್ಲವನ್ನು ತೆಗೆಯಬೇಕು. ನಾವು ಇದ್ದಾಗ ತೆರವು ಕಾರ್ಯಾಚರಣೆ ಆರಂಭ ಮಾಡಿದ್ದೆವು. ಅರ್ಧಂಬರ್ಧಕ್ಕೆ ನಿಂತುಹೋಯಿತು. ಬಿಜೆಪಿ ಸರ್ಕಾರ ಬಂದಮೇಲೆ ಏನೂ ಮಾಡಿಲ್ಲ. ಹೀಗಾಗಿ ಆದ್ಯತೆ ಮೇರೆಗೆ ತೆರವು ಕಾರ್ಯಾಚರಣೆ ಮಾಡುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ವಿಜಯವಾಡ ಅವರು ಕಾರನ್ನು ಬಾಡಿಗೆಗೆ ಮಾಡ್ಕೊಂಡು ಬೆಂಗಳೂರು ನಗರ ನೋಡೋಕೆ ಬಂದಿದ್ದಾರೆ. ಬ್ಯಾರಿಕೇಡ್ ಹಾಕಿದ್ದರು, ಮಳೆ ಬಂದಾಗ ಅದು ಬಿದ್ದುಹೋಗಿದೆ. ಕಾರಿನ ಚಾಲಕ ಅಂಡರ್ ಪಾಸ್‌ನಲ್ಲಿ ಕಾರನ್ನು ಚಲಾಯಿಸಿದ್ದಾರೆ. ಗ್ಲಾಸ್‌ವರೆಗೂ ನೀರು ತುಂಬಿಕೊಂಡುಬಿಟ್ಟಿದೆ. ನೀರಿನಿಂದಾಗಿ ಬಾಗಿಲು ತೆಗೆಯಲು ಆಗಿಲ್ಲ. ಹೀಗಾಗಿ, ಭಾನುರೇಖಾ ಹೆಚ್ಚು ನೀರು ಕುಡಿದಿದ್ದಾರೆ. ಆಸ್ಪತ್ರೆಗೆ ಬರುವಾಗಲೇ ಅವರು ಮೃತಪಟ್ಟಿದ್ದರು ಎಂದರು.

ಬಿಬಿಎಂಪಿಗೆ ಆದೇಶಿಸಬೇಕು: ಬೊಮ್ಮಾಯಿ

‘ಹೊಸ ಸರ್ಕಾರ ತಕ್ಷಣವೇ ಕಾರ್ಯ ಪ್ರವೃತ ವಾಗಿ ಮಳೆಯಿಂದ ಉಂಟಾಗಬಹುದಾದ ಹಾನಿಯನ್ನು ತಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಬಿಬಿಎಂಪಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕು. ಮಳೆಯಿಂದ ಅಮಾಯಕರು ಜೀವ ಕಳೆದುಕೊಳ್ಳುವುದನ್ನು ತಪ್ಪಿಸಬೇಕು’ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

20 ಅಂಡರ್‌ಪಾಸ್ ಸರ್ವೆಗೆ ಸೂಚನೆ

ನಗರದಲ್ಲಿರುವ 20 ಅಂಡರ್‌ಪಾಸ್‌ಗಳ ಸರ್ವೆ ನಡೆಸಿ, ಅಲ್ಲಿನ ಪರಿಸ್ಥಿತಿಯ ಮೌಲ್ಯಮಾಪನ ನಡೆಸಿ ತಕ್ಷಣವೇ ವರದಿ ನೀಡಬೇಕೆಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ಯುವತಿ ಮೃತಪಟ್ಟ ಕೆ.ಆರ್. ವೃತ್ತದ ಅಂಡರ್‌ಪಾಸ್ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂಡರ್‌ಪಾಸ್‌ಗಳ ಸ್ಥಿತಿ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದರು. ಅದರಂತೆ ಮುಖ್ಯ ಆಯುಕ್ತರು ಕ್ರಮ ಕೈಗೊಂಡಿದ್ದಾರೆ.

‘ಒಂದೇ ಗಂಟೆಯಲ್ಲಿ 35 ಮಿ.ಮೀ ಮಳೆ ಬಂದಿದ್ದರಿಂದ ತೊಂದರೆಯಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಪ್ರವೀಣ್ ಸೂದ್‌ಗೆ ಬೀಳ್ಕೊಡುಗೆ ಸಮಾರಂಭ: ಆಯೋಜನೆ: ಕರ್ನಾಟಕ ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

ಮಹಾಶಕ್ತಿ ತಿಲಕನಗರ ಮಾರಿ ಅಮ್ಮನ ದೇವಸ್ಥಾನ ಕರಗ ಮತ್ತು ಮಹಾದೀಪೋತ್ಸವ: ಬೆಳಿಗ್ಗೆ 9ಕ್ಕೆ ಮಹಿಳೆಯರಿಂದ 108 ಹಾಲಿನ ಕೊಡದ ಸಾಮೂಹಿಕ ಮೆರವಣಿಗೆಯ ನಂತರ ಹಾಲಿನ ಅಭಿಷೇಕ, ಸಂಜೆ 6ಕ್ಕೆ ದೇವಿಗೆ ಬೆಣ್ಣೆ ಅಲಂಕಾರ, 6.30ಕ್ಕೆ ಸಾಮೂಹಿಕ ತಂಬಿಟ್ಟು ದೀಪೋತ್ಸವ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ಮಹಾಶಕ್ತಿ ಮಾರಿ ಅಮ್ಮನ ದೇವಸ್ಥಾನ ತಿಲಕನಗರ, ಜಯನಗರ

‘ದೃಶ್ಯೋತ್ಸವ’ದ ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿ: ಎಂ.ಎಸ್. ಮೂರ್ತಿ, ಆಯೋಜನೆ: ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಬೆಳಗೆರೆ ಕೃಷ್ಣಶಾಸ್ತ್ರಿ ಅವರ ಜನ್ಮದಿನಾಚರಣೆ, ಎಚ್. ಅಲ್ಲಿಸಾಬ್ ಅವರ ‘ಸಟೀಕ ಶಬ್ದಮಂಜರಿ ಕೋಶ’ ಪುಸ್ತಕ ಬಿಡುಗಡೆ: ಪುಸ್ತಕದ ಕುರಿತು: ಕೃಷ್ಣಮೂರ್ತಿ ಹನೂರು, ಅಧ್ಯಕ್ಷತೆ: ಎಸ್. ರಾಮಕೃಷ್ಣ, ಉಪಸ್ಥಿತಿ: ಎಚ್. ಎನ್. ಸುರೇಶ್, ‘ಬದಲಾಗುತ್ತಿರುವ ಸಮಾಜದಲ್ಲಿ ಮಾನವೀಯ ಮೌಲ್ಯಗಳು’ ಕುರಿತು ಉಪನ್ಯಾಸ: ಎಂ.ಎನ್. ವೆಂಕಟಾಚಲಯ್ಯ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನದ ಕೆ.ಆರ್.ಜಿ. ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಗೆಜ್ಜೆ ಪೂಜೆ ನೃತ್ಯ: ಮೀನಾಕ್ಷಿ ಶ್ಯಾಮ್, ಅಭಿರಾಮಿ ಶ್ಯಾಮ್, ಆಯೋಜನೆ: ನಾಟ್ಯಭೈರವಿ ನೃತ್ಯ ಶಾಲಾ, ಸ್ಥಳ: ದೇವಗಿರಿ ದೇವಸ್ಥಾನ, ಬನಶಂಕರಿ 2ನೇ ಹಂತ, ಸಂಜೆ 6.30

ಕಾಕನಕೋಟೆ ನಾಟಕ ಪ್ರದರ್ಶನ: ನಿರ್ದೇಶನ: ಸಿ.ಆರ್. ಸಿಂಹ, ಮರು ನಿರ್ದೇಶನ: ಋತ್ವಿಕ್ ಸಿಂಹ, ತಾಂತ್ರಿಕ ಸಂಯೋಜನೆ: ಜಸ್ಲಿನ ಸಿಂಹ, ಆಯೋಜನೆ: ನಟರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

‘ಆಶ್ಚರ್ಯ ಚೂಡಾಮಣಿ’ ನಾಟಕ ಪ್ರದರ್ಶನ: ರಚನೆ: ಶಕ್ತಿಭದ್ರ, ನಿರ್ದೇಶನ: ಚಿದಂಬರ ರಾವ್ ಜಂಬೆ, ಆಯೋಜನೆ: ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

‘ರುಕ್ಮಿಣೀಶ ವಿಜಯ’ ಪ್ರವಚನ: ಬ್ರಹ್ಮಣ್ಯಾಚಾರ್ ಭಾವೀಸಮೀರ, ಆಯೋಜನೆ ಮತ್ತು ಸ್ಥಳ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಕುಂದು ಕೊರತೆ — ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದುಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.



ನಗರದ ಮೈಸೂರು ರಸ್ತೆಯ ಈದ್ಗಾ ಮೈದಾನದ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

‘ರಸ್ತೆಯಲ್ಲಿರುವ ಗುಂಡಿ ಮುಚ್ಚಿ’

ಜಯನಗರದ 36ನೇ ಕ್ರಾಸ್‌ನ ಬನ್ನೇರುಘಟ್ಟ ಮುಖ್ಯರಸ್ತೆಯ ಮಧ್ಯದಲ್ಲಿಯೇ ಗುಂಡಿ ಬಿದ್ದಿದೆ. ಇದರಿಂದ ವಾಹನ ಸಂಚಾರಕ್ಕೆ ಅನಾನುಕೂಲವಾಗುತ್ತಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಒಂದು ತಿಂಗಳಿನಿಂದ ಈ ಗುಂಡಿ ಮುಚ್ಚುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಇದೇ ರಸ್ತೆಯ ಮುಂಭಾಗದಲ್ಲಿ ಆಸ್ಪತ್ರೆ ಇದ್ದು, ತುರ್ತು ಚಿಕಿತ್ಸೆಗೆ ಬರುವ ಆಂಬುಲೆನ್ಸ್ ಸಂಚಾರಕ್ಕೂ ಅಡಚಣೆಯಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು ವಾಹನದಟ್ಟಣೆ ಉಂಟಾಗುತ್ತಿದೆ. ಕೂಡಲೇ ರಸ್ತೆ ಸರಿಪಡಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಶ್ರೀಧರ್, ಸ್ಥಳೀಯ ನಿವಾಸಿ

ರಸ್ತೆ ಗುಂಡಿ ಅವಾಂತರ

ಮೈಸೂರು ರಸ್ತೆಯ ಈದ್ಗಾ ಮೈದಾನದ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಪ್ರತಿನಿತ್ಯ ಸಾವಿರಾರು ವಾಹನ ಈ ರಸ್ತೆಯ ಮೂಲಕವೇ ನಗರಕ್ಕೆ ಪ್ರವೇಶಿಸುತ್ತಿವೆ. ಆದರೆ, ಈ ರಸ್ತೆಯ ಬಹುತೇಕ ಭಾಗ ಗುಂಡಿಗಳಿಂದ ಕೂಡಿದೆ. ದ್ವಿಚಕ್ರ ವಾಹನ ಸವಾರರಂತೂ ಜೀವ ಕೈಯಲ್ಲಿ ಹಿಡಿದುಕೊಂಡು ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ಹಲವು ಬಾರಿ ದೂರುಗಳನ್ನು ನೀಡಿದ್ದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಧೀರಜ್, ವಾಹನ ಸವಾರ



ಜಯನಗರದ 36ನೇ ಕ್ರಾಸ್‌ನ ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಬಿದ್ದಿರುವ ಗುಂಡಿ

‘ವಿಶ್ವೇಶ್ವರಯ್ಯ ಬಡಾವಣೆ: ಸೇತುವೆ ಉದ್ಘಾಟಿಸಿ’

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 6ನೇ ಬ್ಲಾಕ್‌ಗೆ ಸಂಪರ್ಕ ಕಲ್ಪಿಸುವ ಸೇತುವೆಯನ್ನು ಉದ್ಘಾಟಿಸಬೇಕು. ಈ ಸೇತುವೆ ಮೂಲಕ ಉಲ್ಲಾಳ ಉಪನಗರದ ಬಸ್ ನಿಲ್ದಾಣದಿಂದ ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ ಮತ್ತು ಶಿವಾಜಿನಗರ ಸಂಪರ್ಕಿಸುತ್ತದೆ. ಈ ಸೇತುವೆಯ ಕಾಮಗಾರಿ ಮುಗಿದು ತಿಂಗಳಾದರೂ ಉದ್ಘಾಟಿಸಿಲ್ಲ. ಈ ಮಾರ್ಗದಲ್ಲಿ ಉಪಕಾರ್ ಬಡಾವಣೆಯ ಬಸ್ ನಿಲ್ದಾಣ ಮೂಲಕ ಸಂಚರಿಸುವ ಬಿಎಂಟಿಸಿ ಬಸ್ಸುಗಳೂ ಸಹ ಬದಲಿ ಮಾರ್ಗದಲ್ಲಿ ಸಂಚರಿಸುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಇದನ್ನು ಉದ್ಘಾಟಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಉಮೇಶ್, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ನಿವಾಸಿ



ಸರ್ ಎಂ. ವಿಶ್ವೇಶ್ವರಯ್ಯ 6ನೇ ಬ್ಲಾಕ್ ಬಡಾವಣೆಗೆ ಸಂಪರ್ಕಿಸುವ ಸೇತುವೆ

I, ARNAV Manoj Kamble S/O Manoj Kamble born on 05.06.2003 residing at M1403, Purva Venezia, Yelahanka New Town, Blr-64, have changed my name to Arnav Kamble vide affidavit 16.05.23 at Blr.





ಮಹಾಲಕ್ಷ್ಮಿ ಲೇಔಟ್‌ನ ಗಣೇಶ ಬ್ಲಾಕ್‌ನಲ್ಲಿ ಮಳೆಯಿಂದ ಹಾನಿಗೀಡಾಗಿರುವ ಮನೆಗಳಿಗೆ ಶಾಸಕ ಕೆ.ಗೋಪಾಲಯ್ಯ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು



ಮಳೆ ನೀರು ಅಪಾರ ಪ್ರಮಾಣದಲ್ಲಿ ಶೇಖರಣೆಗೊಂಡು ಹೊಳೆಯಂತಾಗಿದ್ದ ಅಶೋಕನಗರದ ಮೆಗ್ರಾತ್ ರಸ್ತೆಯಲ್ಲಿ ಭಾನುವಾರ ವಾಹನಗಳು ಸಾಗುತ್ತಿರುವುದು —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್



ಭಾನುವಾರ ರಭಸವಾಗಿ ಬೀಸಿದ ಗಾಳಿಯಿಂದಾಗಿ ಚಿತ್ರಕಲಾ ಪರಿಷತ್ತಿನ ಎದುರಿದ್ದ ಮರವೊಂದು ಕಾರು ಮತ್ತು ಬೈಕಿನ ಮೇಲೆ ಉರುಳಿ ಬಿದ್ದಿರುವುದು

45 ನಿಮಿಷ ಸುರಿದ ವರ್ಷಧಾರೆ • ಧರೆಗುರುಳಿದ ಮರಗಳು • ವಾಹನಗಳು ಜಖಂ • ಮನೆಗಳು ಜಲಾವೃತ

ಅಬ್ಬರದ ಮಳೆಗೆ ನಲುಗಿದ ನಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ 45 ನಿಮಿಷವಷ್ಟೇ ಅಬ್ಬರಿಸಿದ ಮಳೆಗೆ ಬೆಂಗಳೂರು ತತ್ತರಗೊಂಡಿದೆ. ಹಲವು ಬಡಾವಣೆಗಳು ಮುಳುಗಿದ್ದರೆ, ನೂರಾರು ಮರಗಳು ನೆಲಕ್ಕುರುಳಿವೆ. ಮಹಿಳೆಯೊಬ್ಬರು ಅಂಡರ್ ಪಾಸ್‌ನಲ್ಲಿ ಮೃತಪಟ್ಟಿದ್ದರೆ, ಹಲವು ವಾಹನಗಳು ಜಖಂಗೊಂಡಿವೆ. ಮನೆಗಳು ಜಲಾವೃತಗೊಂಡಿವೆ.

ಮಧ್ಯಾಹ್ನ 3ರ ವೇಳೆಗೆ ಕಪ್ಪನೆಯ ಮೋಡಗಳು ಸುತ್ತುವರಿದು ಕತ್ತಲಾದಂತಾಯಿತು. ಬಿರುಗಾಳಿ ಜತೆಯಲ್ಲಿ ಆರಂಭವಾದ ಮಳೆ ಸುಮಾರು 3.450ರ ತನಕ ಅಬ್ಬರಿಸಿತು. ನಗರದ ಎಲ್ಲಾ ಬಡಾವಣೆಗಳಲ್ಲೂ ಮಳೆ ಸುರಿದ್ದರೂ, ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಆರ್ಭಟ ಜೋರಾಗಿತ್ತು. ನಾಗರಬಾವಿ, ದಾಸರಹಳ್ಳಿ, ಪೀಣ್ಯ, ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ರಾಜಾಜಿನಗರ, ಮಲ್ಲೇಶ್ವರ, ಪ್ಯಾಲೇಸ್ ಗುಟ್ಟಹಳ್ಳಿ, ಮತ್ತಿಕೆರೆ, ಆರ್.ಟಿ.ನಗರ, ಹೆಬ್ಬಾಳ, ವಿದ್ಯಾರಣ್ಯಪುರ, ಕೊಡಿಗೇಹಳ್ಳಿ ಭಾಗದಲ್ಲಿ ವರುಣನ ಆರ್ಭಟ ಜೋರಾಗಿತ್ತು. ಕೆಲವೆಡೆ ಆಲಿಕಲ್ಲು ಸಹಿತ ಮಳೆ ಸುರಿಯಿತು.

ಮಳೆ ಆರಂಭವಾಗಿ ಅರ್ಧ ಗಂಟೆಯಾಗುವಷ್ಟರಲ್ಲೇ ಕೆಲ ರಸ್ತೆಯಲ್ಲಿ ನದಿಯಂತೆ ನೀರು ಹರಿಯಿತು. ಮಳೆಯೊಂದಿಗೆ ಬಿರುಗಾಳಿಯೂ ಆರ್ಭಟಿಸಿದ್ದರಿಂದ ಕೆಲವೆಡೆ ಮರಗಳು ಧರೆಗುರುಳಿದರೆ, ಹಲವೆಡೆ ಬಾಗಿದ್ದ ರೆಂಬೆಗಳು, ಒಣಗಿದ್ದ ಟೊಂಗೆಗಳು ಮುರಿದು ಬಿದ್ದವು. ರಸ್ತೆಯೇ ಕಾಣಿಸದಂತೆ ವಾಹನಗಳ ಮೇಲೆ ಮಳೆಯ ಜತೆಗೆ ರಸ್ತೆ ಬದಿಯ ಮರಗಳ ಎಲೆ ಮತ್ತು ಕಿರು ಟೊಂಗೆಗಳು ಉದುರಿದ್ದವು. ರಸ್ತೆಯಲ್ಲಿದ್ದ ವಾಹನಗಳ ಮೇಲೆಲ್ಲವೂ ಮರದ ಎಲೆಗಳು ಅಂಟಿಕೊಂಡಿದ್ದು ಸಾಮಾನ್ಯವಾಗಿತ್ತು.

ಬಹುತೇಕ ಅಂಡರ್ ಪಾಸ್‌ಗಳು ಜಲಾವೃತಗೊಂಡು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಮಳೆ ನಿಂತ ಬಳಿಕ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಇನ್ನಷ್ಟು ಹೆಚ್ಚಾಯಿತು. ಬಳ್ಳಾರಿ ರಸ್ತೆಯಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ಕಾವೇರಿ ಜಂಕ್ಷನ್ ಮತ್ತು ಮೇಖ್ರಿ ವೃತ್ತದಲ್ಲಿನ ಅಂಡರ್ ಪಾಸ್‌ನಲ್ಲಿ ನೀರು ತುಂಬಿಕೊಂಡಿದ್ದರಿಂದ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಎಲ್ಲ ವಾಹನಗಳು ಸರ್ವೀಸ್ ರಸ್ತೆಯಲ್ಲೇ ಸಾಗಲು ಪ್ರಯತ್ನಿಸಿದ್ದರಿಂದ ವಾಹನ ದಟ್ಟಣೆ ನಿಯಂತ್ರಿಸಲು ಪೊಲೀಸರು ಪರದಾಡಿದರು.



ನೀರಿನಲ್ಲಿ ಮುಳುಗಿ ಮೃತಪಟ್ಟ ಯುವತಿಯ ಸಂಬಂಧಿಕರಿಗೆ ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಂತ್ವನ ಹೇಳಿದರು

ಪ್ರದೇಶ	ಮಳೆ (ಮಿ.ಮೀ)
ರಾಜಮಹಲ್ ಗುಟ್ಟಹಳ್ಳಿ (ಪಶ್ಚಿಮ ವಲಯ)	66
ಕೊಟ್ಟಿಗೆಪಾಳ್ಯ (ಆರ್.ಆರ್. ನಗರ ವಲಯ)	54
ನಾಗಪುರ (ಪಶ್ಚಿಮ ವಲಯ)	49
ನಂದಿನಿ ಲೇಔಟ್ (ಪಶ್ಚಿಮ ವಲಯ)	48
ಪುಲಕೇಶಿನಗರ (ಪೂರ್ವ ವಲಯ)	44
ರಾಜಾಜಿನಗರ (ಪಶ್ಚಿಮ ವಲಯ)	37
ಕೃಷ್ಣರಾಜಪುರ (ಪೂರ್ವ ವಲಯ)	36.50
ಕುಶಾಲನಗರ (ಪೂರ್ವ ವಲಯ)	35
ಕಾಟನ್‌ಪೇಟೆ (ಪಶ್ಚಿಮ ವಲಯ)	33.50
ವಿದ್ಯಾರಣ್ಯಪುರ (ಯಲಹಂಕ ವಲಯ)	32.50
ಸಂಪಂಗಿರಾಮನಗರ (ಪೂರ್ವ ವಲಯ)	32
ಚಾಮರಾಜಪೇಟೆ (ಪಶ್ಚಿಮ ವಲಯ)	28
ಅಗ್ರಹಾರ ದಾಸರಹಳ್ಳಿ (ಪಶ್ಚಿಮ ವಲಯ)	27.50
ಮಾರಪ್ಪನಪಾಳ್ಯ (ಪಶ್ಚಿಮ ವಲಯ)	26
ವಿದ್ಯಾಪೀಠ (ದಕ್ಷಿಣ ವಲಯ)	25.50
ಬಸವನಪುರ (ಮಹದೇವಪುರ ವಲಯ)	23.50
ಹೆಮ್ಮಿಗೆಪುರ (ಆರ್.ಆರ್. ನಗರ ವಲಯ)	23.50

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಿ.ಎಂ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಮಳೆ ನೀರಲ್ಲಿ ಮುಳುಗಿ ಯುವತಿ ಮೃತಪಟ್ಟ ಘಟನಾ ಸ್ಥಳ ಹಾಗೂ ಆಸ್ಪತ್ರೆಗೆ ಭೇಟಿ ನೀಡಿದರು. ಅಸ್ವಸ್ಥರನ್ನು ಆಸ್ಪತ್ರೆಗೆ ತಕ್ಷಣ ದಾಖಲಿಸಿಕೊಳ್ಳದೆ ವಿಳಂಬ ತೋರಿದ ಆಸ್ಪತ್ರೆಯ ವಿರುದ್ಧ ತನಿಖೆಗೆ ಅವರು ಆದೇಶಿಸಿದರು.

ಭಾನುರೇಖಾ ಅವರ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ ನೀಡಲಾಗುವುದು ಎಂದು ಘೋಷಿಸಿದರು.

ಲಾಲ್‌ಬಾಗ್‌ನ ಪಶ್ಚಿಮ ದ್ವಾರದಲ್ಲಿ ಮಳೆಯಿಂದ ರಕ್ಷಣೆ ಪಡೆಯಲು ನಿಂತಿದ್ದ ಪಶ್ಚಿಮ ಬಂಗಾಳದ ಯುವತಿಯ ಮೇಲೆ ಮರ ಬಿದ್ದು ಆಕೆ ಗಾಯಗೊಂಡಿದ್ದಾರೆ. ಮಹಾಲಕ್ಷ್ಮಿ ಲೇಔಟ್‌ನ ಶಂಕರಮಠದ ಸಮೀಪ ಪ್ರವಾಹ ಸ್ಥಿತಿ ಉದ್ಭವಿಸಿತ್ತು. ನೂರಾರು ಮನೆಗಳಿಗೆ ನೀರು ನುಗ್ಗಿತ್ತು. ವಿದ್ಯಾರಣ್ಯಪುರಂನಲ್ಲಿ ಮನೆಯೊಂದು ಕುಸಿದಿದೆ.

‘ಗಾಳಿ, ಮಳೆಗೆ ಬಿದ್ದಿರುವ ಮರಗಳನ್ನು ತಕ್ಷಣ ತೆರವುಗೊಳಿಸಬೇಕು. ಮಳೆ ಅನಾಹುತದಿಂದ ಹಾನಿಗೆ ಒಳಗಾದ ಪ್ರದೇಶಗಳಲ್ಲಿ ತುರ್ತು ಪರಿಹಾರ ಕೈಗೊಳ್ಳಬೇಕು. ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಲಾಗುವುದು’ ಎಂದು ಮುಖ್ಯಮಂತ್ರಿ ಎಚ್ಚರಿಸಿದರು.

ಆಟೊ ಚಾವಣಿ ಹಿಡಿದೇ ಬದುಕುಳಿದ ಯುವತಿ

ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ, ಪೊಲೀಸರು ಸ್ಥಳಕ್ಕೆ ಬರುವುದಕ್ಕೂ ಮೊದಲೇ ಸ್ಥಳೀಯರ ತಂಡವೊಂದು ರೋಚಕ ಕಾರ್ಯಾಚರಣೆ ನಡೆಸಿ ಹಲವರ ಜೀವ ಕಾಪಾಡಿತ್ತು.

ಕಾರು, ಆಟೊರಿಕ್ಷಾಗಳು ಮಳೆ ನೀರಿನಲ್ಲಿ ಮುಳುಗಡೆಯಾಗಿದ್ದನ್ನು ಗಮನಿಸಿದ ಸ್ಥಳೀಯರು ಎಲ್ಲಿಂದಲೋ ಸೀರೆಗಳನ್ನು ತಂದರು. ಮತ್ತೊಬ್ಬರು ಹಗ್ಗವನ್ನು ಹೊಂದಿಸಿದರು. ಮೂವರು ಈಜಿ ಕಾರಿನ ಬಳಿಗೆ ತೆರಳಿ, ಅದರಲ್ಲಿದ್ದವರನ್ನು ಹೊರಗೆ ಕರೆತಂದರು.

ಅಬ್ಬರದ ಮಳೆಯಿಂದ ಅಂಡರ್‌ಪಾಸ್‌ನಲ್ಲಿ ನೀರಿನಮಟ್ಟ ಏರುತ್ತಿತ್ತು. ಅದ್ಯಾವುದನ್ನೂ ಲೆಕ್ಕಿಸದೇ ರಕ್ಷಣಾ ಕಾರ್ಯ ನಡೆಸಿದರು. ಎಲ್ಲರನ್ನು ಹೊರೆಗೆ ಕರೆತಂದರೂ ಭಾನು ರೇಖಾ ಮಾತ್ರ ಹೆಚ್ಚಿನ ನೀರು ಕುಡಿದು ಅಸುನೀಗಿದರು.

ಅದಾದ ಮೇಲೆ ಆಟೊದಲ್ಲಿ ತೆರಳುತ್ತಿದ್ದ ಯುವತಿಯೂ ನೀರಿನಲ್ಲಿ ಸಿಲುಕಿಕೊಂಡಿದ್ದಳು. ಒಂದು ಗಂಟೆ ಆಟೊ ಚಾವಣಿಯನ್ನೇ ಹಿಡಿದು ಜೀವ ಕಾಪಾಡಿಕೊಂಡಿದ್ದಳು. ಆಟೊ ಚಾಲಕ ಈಜಿ ದಡ ಸೇರಿದ್ದ. ಕೊನೆಯಲ್ಲಿ ಅಗ್ನಿ ಶಾಮಕದಳ ಸಿಬ್ಬಂದಿ ಆಕೆಯನ್ನು ರಕ್ಷಿಸಲು ಯಶಸ್ವಿಯಾದರು.

ಕ್ಯಾಬ್ ಚಾಲಕನ ನಿರ್ಲಕ್ಷ್ಯ?

ಅಂಡರ್‌ಪಾಸ್‌ನಲ್ಲಿ ಅಪಾರ ಪ್ರಮಾಣದ ಮಳೆ ನೀರು ಸಂಗ್ರಹಗೊಂಡಿದ್ದರೂ ಕ್ಯಾಬ್ ಚಾಲಕ ಅದೇ ಮಾರ್ಗದಲ್ಲಿ ಕಾರು ಕೊಂಡೊಯ್ದ ಪರಿಣಾಮ ಯುವತಿ ಸಾವನ್ನಪ್ಪಿದ್ದಾಳೆ ಎಂಬ ದೂರು ಕೇಳಿಬಂದಿದೆ.

ಚಾಲಕ ನೀರಿನಮಟ್ಟವನ್ನು ಗಮನಿಸಬೇಕಿತ್ತು. ದಟ್ಟೈಸಿದ ಮೋಡದಿಂದ ನಗರದಲ್ಲಿ ಮಧ್ಯಾಹ್ನವೇ ಕತ್ತಲು ಆವರಿಸಿತ್ತು. ಏನೂ ಆಗುವುದಿಲ್ಲ ಎಂದು ಭಾವಿಸಿ ಅಂಡರ್‌ಪಾಸ್ ಕಾರು ಚಲಾಯಿಸಿದ್ದೇ ಅನಾಹುತಕ್ಕೆ ಕಾರಣವಾಯಿತು ಎಂದು ಸ್ಥಳೀಯರು ಹೇಳಿದರು.

ಹೋಗಬಹುದು ಎಂದರು...

‘ನೀರು ಇದ್ದರೂ ಹೋಗಬಹುದು ಎಂದು ಡ್ರೈವರ್ ಹೇಳಿದರು. ಮುಂದೆ ಹೋದಾಗ ನೀರು ಕಾರಿನ ಒಳಗೆ ಬಂದಿತು. ಆಗಲೂ ಡ್ರೈವರ್ ಏನೂ ಆಗಲ್ಲ ಅಂದರು. ಎಲ್ಲರೂ ಮುಂದೆ ಬಂದು ಕುಳಿತುಕೊಳ್ಳಿ ಎಂದರು. ಆದರೆ, ನೀರು ಪೂರ್ಣವಾಗಿ ಒಳಗೆ ಪೂರ್ಣ ಬಂದುಬಿಟ್ಟಿತು. ಬಾಗಿಲು ತೆಗೆಯಲು ಸಾಧ್ಯವಾಗಲಿಲ್ಲ. ಯಾರೋ ನಮ್ಮನ್ನು ಹೊರಗೆ ಎಳೆದರು. ಭಾನು ಅಕ್ಕ ಒಳಗೇ ಇದ್ದಳು’ ಎಂದು ಪಾರಾದ ಬಾಲಕಿ ಅನುಭವ ಹಂಚಿಕೊಂಡರು.

ನಗರದಲ್ಲಿ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮುಂದಿನ ಒಂದು ವಾರ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ಏಳು ದಿನಗಳು ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ಇರಲಿದೆ. ಸೋಮವಾರ ನಗರದ ವಿವಿಧೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಮಹದೇವಪುರ ಹಾಗೂ ಬೊಮ್ಮನಹಳ್ಳಿ ವಲಯದಲ್ಲಿ ಮಳೆ ಹೆಚ್ಚಿನ ಪ್ರಮಾಣದಲ್ಲಿ ಆಗಬಹುದು. ಗರಿಷ್ಠ ತಾಪಮಾನ 34 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 19 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮಂಗಳವಾರ ಹಾಗೂ ಬುಧವಾರವೂ ಮಳೆ ಹೆಚ್ಚಿನ ಪ್ರಮಾಣದಲ್ಲಿ ಆಗುವ ಸಾಧ್ಯತೆಯಿದ್ದು, ಗುರುವಾರದಿಂದ ಮಳೆಯ ಪ್ರಮಾಣ ತಗ್ಗಲಿದೆ ಎಂದು ಇಲಾಖೆ ತಿಳಿಸಿದೆ.



ಭಾರಿ ಗಾಳಿಯಿಂದಾಗಿ ರಾಜಾಜಿನಗರದ 50ನೇ ತಿರುವಿನಲ್ಲಿ ಮರವೊಂದು ಧರೆಗೆ ಉರುಳಿಬಿದ್ದಿತ್ತು. ಇದರಿಂದ ಹಲವು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ

ವಿದ್ಯಾರಣ್ಯಪುರದಲ್ಲಿ ವಾಲಿದ ಮನೆ

ವಿದ್ಯಾರಣ್ಯಪುರದಲ್ಲಿ ಹಳೆಯ ಮನೆಯೊಂದು ವಾಲಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಎರಡು ಅಂತಸ್ತಿನ ಮನೆ ವಾಲುತ್ತಿರುವುದು ಅರಿವಾದ ಕೂಡಲೇ ಮನೆಯಲ್ಲಿದ್ದ ಎಲ್ಲರೂ ಹೊರಗೆ ಓಡಿ ಬಂದಿದ್ದಾರೆ.

ಯಾವುದೇ ಕ್ಷಣದಲ್ಲಾದರೂ ಮನೆ ಬೀಳುವ ಸಾಧ್ಯತೆ ಇರುವುದರಿಂದ ಮನೆ ಒಳಗೆ ಯಾರೂ ಹೋಗದಂತೆ ನಿರ್ಬಂಧಿಸಲಾಗಿದೆ. ಅಕ್ಕ–ಪಕ್ಕದ ಮನೆಗಳಿಗೆ ಹಾನಿಯಾಗದಂತೆ ವಾಲಿರುವ ಮನೆ ತೆರವುಗೊಳಿಸುವ ಸಾಧ್ಯತೆ ಇದೆ.



ಮಳೆ ನಡುವೆ ಎಸ್‌.ಪಿ ರಸ್ತೆಯಲ್ಲಿ ಕೆಟ್ಟುನಿಂತ ಪೊಲೀಸ್ ವಾಹನವನ್ನು ತಳ್ಳುತ್ತಿರುವ ಸಿಬ್ಬಂದಿ —ಪ್ರಜಾವಾಣಿ ಚಿತ್ರ

ಮಹಾಲಕ್ಷ್ಮಿ ಲೇಔಟ್‌ನಲ್ಲಿ 22 ಮನೆಗಳಿಗೆ ನುಗ್ಗಿದ ನೀರು

ಮಹಾಲಕ್ಷ್ಮಿ ಲೇಔಟ್ ಗಣೇಶ ಬ್ಲಾಕ್‌ನಲ್ಲಿ ರಾಜಕಾಲುವೆ ನೀರು ಬಡಾವಣೆಗೆ ನುಗ್ಗಿ 22 ಮನೆಗಳು ಜಲಾವೃತಗೊಂಡವು.

ರಾಜಕಾಲುವೆ ಮರು ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಸೆಂಟ್ರಿಂಗ್ ಹಾಕಲಾಗಿತ್ತು. ನೀರು ಹರಿದು ಹೋಗಲು ಅವಕಾಶ ಇರಲಿಲ್ಲ. ಇದರಿಂದ ನೀರು ಬಡಾವಣೆಗಳತ್ತ ನುಗ್ಗಿತು. ಮನೆಗಳ ನೆಲಮಹಡಿಗೆ ನೀರು ತುಂಬಿಕೊಂಡಿತು.

‘ಏಕಾಏಕಿ ಭಾರಿ ಮಳೆ ಸುರಿಯಿತು. ಮನೆಗಳ ಎದುರಿನಲ್ಲಿ ನಿಲುಗಡೆ ಮಾಡಿದ್ದ ವಾಹನಗಳು ಮುಳುಗಡೆಯಾದವು. ಮನೆಯೊಳಗೆ ನೀರು ನುಗ್ಗಿತ್ತು. ಪ್ರತಿಬಾರಿ ಮಳೆಗಾಲದಲ್ಲೂ ಇದೇ ಸಮಸ್ಯೆಯಾಗುತ್ತಿದೆ. ಬಿಬಿಎಂಪಿಗೆ ಹಲವಾರು ಮನವಿ ಸಲ್ಲಿಸಿದ್ದರೂ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿಲ್ಲ’ ಎಂದು ಮಹಾಲಕ್ಷ್ಮಿ ಲೇಔಟ್‌ನ ಲಾವಣ್ಯ ಬೇಸರ ವ್ಯಕ್ತಪಡಿಸಿದರು.

‘ಐದು ಅಡಿಯಷ್ಟು ನೀರು ಮನೆಯಲ್ಲಿದೆ. ಎಲ್ಲಾ ವಸ್ತುಗಳು ನೀರುಪಾಲಾಗಿವೆ. ಆಗಿರುವ ನಷ್ಟಕ್ಕೆ ಪರಿಹಾರ ಯಾರು ಕೊಡುತ್ತಾರೆ’ ಎಂದು ಪ್ರಶ್ನಿಸಿದರು.

ಸ್ಥಳಕ್ಕೆ ಶಾಸಕ ಕೆ.ಗೋಪಾಲಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು. ‘ರಾಜಕಾಲುವೆ ದುರಸ್ತಿ ಕಾಮಗಾರಿ ನಡೆಯುತ್ತಿರುವುದರಿಂದ ನೀರು ಹರಿದು ಹೋಗುತ್ತಿಲ್ಲ. ಬಡಾವಣೆಗಳಿಗೆ ನೀರು ನುಗ್ಗಿದ್ದು, ನಿವಾಸಿಗಳಿಗೆ ತೊಂದರೆಯಾಗಿದೆ’ ಎಂದು ಹೇಳಿದರು.



ಮಹಾಲಕ್ಷ್ಮಿ ಲೇಔಟ್‌ನ ಗಣೇಶ ಬ್ಲಾಕ್‌ನಲ್ಲಿ ಮನೆಗೆ ನುಗ್ಗಿರುವ ಕೆಸರು ತುಂಬಿದ ನೀರನ್ನು ನಿವಾಸಿಯೊಬ್ಬರು ಹೊರ ಹಾಕುತ್ತಿರುವುದು —ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

‘ನಾಗರಿಕರಿಗೆ ಆಗಿರುವ ನಷ್ಟಕ್ಕೆ ಪರಿಹಾರ ಕೊಡಿಸಲಾಗುವುದು. ರಾಜಕಾಲುವೆ ದುರಸ್ತಿ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಸೂಚನೆ ನೀಡಲಾಗುವುದು’ ಎಂದು ತಿಳಿಸಿದರು.

ಎಲ್ಲೆಲ್ಲಿ, ಏನೇನಾಯ್ತು?

- ವಿಂಡ್ಸರ್ ಮ್ಯಾನರ್ ವೃತ್ತದ ಬಳಿ ಕಬ್ಬಿಣದ ಕಾಂಪೌಂಡ್ ನೆಲಕ್ಕುರುಳಿ ಹಾನಿಯಾಗಿದೆ.
- ಚಾಲುಕ್ಯ ವೃತ್ತದಿಂದ ಹೆಬ್ಬಾಳ ಮಾರ್ಗದ ರಸ್ತೆ ಸಂಪೂರ್ಣವಾಗಿ ಹಾನಿಯಾಗಿದೆ
- ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯಲ್ಲಿ ಮಳೆಗೆ ಹಲವು ಮರ ಧರೆಗುರುಳಿವೆ.
- ಯಶವಂತಪುರ ಬಿಎಂಟಿಸಿ ಬಸ್ ನಿಲ್ದಾಣದ ಒಳಗೆ ಮಳೆ ನೀರು ನುಗ್ಗಿತ್ತು.
- ಬಳ್ಳಾರಿ ರಸ್ತೆಯ ಸಿಬಿಐ ಕಚೇರಿ ಬಳಿ ಮರಗಳು ರಸ್ತೆಗೆ ಉರುಳಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು.
- ಕಬ್ಬನ್ ರಸ್ತೆಯಲ್ಲಿ ರಸ್ತೆಗೆ ಅಡ್ಡವಾಗಿ ಮರ ರಸ್ತೆಗೆ ಉರುಳಿತು.
- ವಿಜಯನಗರದಲ್ಲಿ ವಿದ್ಯುತ್ ಕಂಬವೊಂದು ಬಿದ್ದು ವಾಹನ.
- ಬಸವನಗುಡಿ ಬಿಪಿ ವಾಡಿಯಾ ರಸ್ತೆಯಲ್ಲಿ ಮರವೊಂದು ರಸ್ತೆಗೆ ಬಿದ್ದು ಸಂಚಾರಕ್ಕೆ ತೊಂದರೆಯಾಗಿತ್ತು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವ ರಾಮಲಿಂಗಾರೆಡ್ಡಿ ಅವರು ಕೆ.ಆರ್‌.ವೃತ್ತದ ಬಳಿಯ ಅಂಡರ್‌ಪಾಸ್‌ಗೆ ಭೇಟಿ ನೀಡಿ ಪರಿಶೀಲಿಸಿದರು

ಅಂಡರ್‌ಪಾಸ್ ಸಮಸ್ಯೆಗೆ ಶಾಶ್ವತ ಪರಿಹಾರ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಡರ್‌ಪಾಸ್‌ಗಳಲ್ಲಿ ಉಂಟಾಗುತ್ತಿರುವ ಸಮಸ್ಯೆ ಪರಿಹಾರಕ್ಕೆ ಶಾಶ್ವತ ಯೋಜನೆ ರೂಪಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆ.ಆರ್ ವೃತ್ತದ ಬಳಿಯ ಅಂಡರ್ ಪಾಸ್‌ನಲ್ಲಿ ದುರಂತ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ‘ಮುನ್ನೆಚ್ಚರಿಕೆ ಕ್ರಮವಾಗಿ ಇಂತಹ ಅಂಡರ್‌ಪಾಸ್‌ಗಳಿಗೆ ಬ್ಯಾರಿಕೇಡ್ ಹಾಕಿ ಸಂಚಾರ ತಡೆಯಬೇಕಿದೆ. ಇಲ್ಲಿ ಕ್ಯಾಮೆರಾ ಅಳವಡಿಕೆಗೂ ಸೂಚನೆ ನೀಡಲಾಗುವುದು’ ಎಂದರು.

‘ಸರ್ಕಾರ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದೆ. ಯಾವ ರೀತಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬಹುದು ಎಂದು ಚರ್ಚಿಸಿ ಯೋಜನೆ ರೂಪಿಸಲಾಗುವುದು. ಈ ಘಟನೆಯಲ್ಲಿ ಸಾವಿನ ದವಡೆಯಲ್ಲಿದ್ದ ನಾಲ್ಕೈದು ಮಂದಿಯನ್ನು ರಕ್ಷಣೆ ಮಾಡಿದ ಮಾಧ್ಯಮದವರು, ಸಾರ್ವಜನಿಕರು ಹಾಗೂ ಪೊಲೀಸರಿಗೆ ಧನ್ಯವಾದ’ ಎಂದರು.

‘ಮಳೆ ಬಂದರೆ ಜನ ಸಾಯಬೇಕಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಂಡರ್‌ಪಾಸ್‌ಗಳಲ್ಲಿ ಕಸಕಡ್ಡಿ ತೆಗೆದು ಸರಾಗವಾಗಿ ನೀರು ಹರಿದು ಹೋಗುವಂತೆ ಮಾಡಬೇಕಾಗಿದ್ದ ಪಾಲಿಕೆ, ಮೈಮರೆತು ಕರ್ತವ್ಯ ಲೋಪ ಎಸಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿ ಸಲವೂ ಮಳೆ ಬಂದಾಗ ಅವಾಂತರ, ಪ್ರಾಣಹಾನಿ ಸಂಭವಿಸಿದ ಮೇಲೆ ಪಾಲಿಕೆ ಎಚ್ಚೆತ್ತುಕೊಳ್ಳುತ್ತದೆ. ಯಾಕೆ? ಮಳೆ ಬಂದರೆ ಜನರು ಸಾಯಲೇಬೇಕೆ ಎಂದು ಅವರು ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

ಭಾರಿ ಮಳೆ ಸುರಿಯುತ್ತಿದ್ದ ಅಪಾಯದ ಸಮಯದಲ್ಲಿಯೂ ವಾಹನ ಚಾಲಕರು ಅತ್ಯಂತ ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಬೇಕು. ಅಂಡರ್‌ಪಾಸ್‌ನಲ್ಲಿ ನೀರು ತುಂಬಿಕೊಂಡಿದ್ದನ್ನು ಕಂಡ ಮೇಲೂ ಚಾಲಕ ಕಾರನ್ನು ಅಂಡರ್‌ಪಾಸ್ ಮೂಲಕ ಚಾಲನೆ ಮಾಡಬಾರದಿತ್ತು. ಸಂಚಾರ ಪೊಲೀಸರು ಮೊದಲೇ ಮುನ್ನೆಚ್ಚರಿಕೆ ನೀಡಬೇಕಿತ್ತು ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಬಿಬಿಎಂಪಿ ಅಧಿಕಾರಿಗಳು ಕೂಡಲೇ ನಗರದ ಉದ್ದಗಲಕ್ಕೂ ಎಲ್ಲಾ ಅಂಡರ್‌ಪಾಸ್‌ಗಳನ್ನು ವಿಸ್ತೃತವಾಗಿ ಪರಿಶೀಲಿಸಿ, ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. ಇನ್ನೊಂದು ಪ್ರಾಣ ನಷ್ಟ ಆಗುವುದಕ್ಕೆ ಅವಕಾಶ ನೀಡಬಾರದು. ರಾಜ್ಯ ಸರ್ಕಾರ ಶಾಶ್ವತ ಪರಿಹಾರವನ್ನು ಒದಗಿಸಬೇಕು. ನತದೃಷ್ಟ ಯುವತಿ ಕುಟುಂಬಕ್ಕೆ ಪರಿಹಾರ ಘೋಷಿಸಿರುವುದು ಸ್ವಾಗತಾರ್ಹ ಎಂದೂ ತಿಳಿಸಿದ್ದಾರೆ.



ಆರ್‌.ಟಿ. ನಗರದ ಟಿ.ವಿ ಟವರ್ ಹತ್ತಿರ ರಸ್ತೆ ಮೇಲೆ ಉರುಳಿದ್ದ ಮರದ ಅಡಿಯಲ್ಲಿ ಆಟೊರಿಕ್ಷಾವೊಂದು ಸಿಲುಕಿತ್ತು

ದಾಸರಹಳ್ಳಿಯಲ್ಲಿ ನೆಲಕ್ಕೆ ಅಪ್ಪಳಿದ ವಿದ್ಯುತ್ ಕಂಬ

ದಾಸರಹಳ್ಳಿಯ ಶಾರದಾಂಬ ನಗರದಲ್ಲಿ ವಿದ್ಯುತ್ ಕಂಬವೊಂದು ಸ್ಕೂಟರ್ ಮತ್ತು ಕಾರಿನ ಮೇಲೆ ಅಪ್ಪಳಿಸಿತು. ಸ್ಕೂಟರ್ ಜಖಂಗೊಂಡಿದ್ದರೆ, ಕಾರಿನ ಗಾಜು ಪುಡಿಯಾಗಿದೆ. ಅದೃಷ್ಟವಶಾತ್ ಯಾರಿಗೂ ಪೆಟ್ಟಾಗಿಲ್ಲ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.





1. ಶಿಡ್ಲಘಟ್ಟ ತಾಲ್ಲೂಕಿನ ಕೊತ್ತನೂರು ಗ್ರಾಮದಲ್ಲಿ ಆಲಿಕಲ್ಲು ಮಳೆಗೆ ಮಾವಿನಕಾಯಿಗಳು ಉದುರಿವೆ 2. ಬೆಂಗಳೂರು ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಮಳೆಯ ನೀರಿನಲ್ಲಿ ಮುಳುಗಿದ್ದ ಆಟೊದ ಚಾವಣಿ ಹಿಡಿದುಕೊಂಡೇ ಪ್ರಾಣ ಉಳಿಸಿಕೊಂಡ ಯುವತಿ. ಅವರನ್ನು ಸ್ಥಳೀಯರು ರಕ್ಷಿಸಿದರು —ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಮಳೆ ಆರ್ಭಟ: ಯುವತಿ ಸಾವು

ಬೆಂಗಳೂರು: ಬೆಂಗಳೂರಿನಲ್ಲಿ ಭಾನುವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಸುರಿದ ಆಲಿಕಲ್ಲು ಸಹಿತ ಧಾರಾಕಾರ ಮಳೆಗೆ ಯುವತಿಯೊಬ್ಬರು ಮೃತಪಟ್ಟಿದ್ದಾರೆ. ಬಿರುಗಾಳಿಗೆ ಹಲವೆಡೆ ನೂರಾರು ಮರಗಳು ಧರೆಗುರುಳಿದ್ದು, ಕಾರು, ಬೈಕ್‌ಗಳು ಜಖಂಗೊಂಡಿವೆ.

ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಸಂಗ್ರಹಗೊಂಡಿದ್ದ ಮಳೆಯ ನೀರಿನಲ್ಲಿ ಕಾರು ಮುಳುಗಿ ಇನ್ಫೊಸಿಸ್ ಉದ್ಯೋಗಿ, ಆಂಧ್ರಪ್ರದೇಶದ ವಿಜಯವಾಡದ ಭಾನುರೇಖಾ (23) ಅವರು ಮೃತಪಟ್ಟಿದ್ದಾರೆ. ಇದೇ ಸ್ಥಳದಲ್ಲಿ ಇನ್ನೂ ಎರಡು ಆಟೊಗಳು ಸಿಲುಕಿದ್ದವು. ಅದರಲ್ಲಿದ್ದವರು ಪಾರಾಗಿದ್ದಾರೆ. 45 ನಿಮಿಷಗಳ ಕಾಲ ಆರ್ಭಟಿಸಿದ ಮಳೆಗೆ ವಿಧಾನಸೌಧದ ಸಮೀಪದ ಕೆ.ಆರ್. ವೃತ್ತದ ಅಂಡರ್‌ಪಾಸ್‌ನಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿತ್ತು. ಒಮ್ಮೆಲೇ ನಗರದಲ್ಲಿ ಕಾರ್ಗತ್ತಲು ಆವರಿಸಿತ್ತು. ನೀರಿನ ಮಟ್ಟ ಅರಿಯದೆ ಅಂಡರ್‌ಪಾಸ್‌ನಲ್ಲಿ ಚಲಾಯಿಸಿದ್ದರಿಂದ ಕಾರು ಮುಳುಗಿತು.

ಸಿಡಿಲು ಬಡಿದು ಹಸು, ಕುರಿ, ಎತ್ತು ಸಾವು • ಧರೆಗುರುಳಿದ ಮರಗಳು • ಮನೆಗಳಿಗೆ ನುಗ್ಗಿದ ನೀರು

ಆಲಿಕಲ್ಲು ಮಳೆ: ನೆಲಕಚ್ಚಿದ ಮಾವು, ತೆಂಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ದಿನಗಳಿಂದ ಭಾರಿ ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರಿಗೆ ರಾಜ್ಯದ ವಿವಿಧೆಡೆ ಭಾನುವಾರ ಸುರಿದ ಮಳೆ ತಂಪೆರೆದಿದೆ. ಮಳೆಯ ಜೊತೆಗೆ ಗುಡುಗು, ಸಿಡಿಲು ಮತ್ತು ಜೋರು ಗಾಳಿಯೂ ಇತ್ತು. ಅಲ್ಲಲ್ಲಿ ಆಲಿಕಲ್ಲುಗಳು ಬಿದ್ದಿವೆ. ಹೀಗಾಗಿ ಕೆಲವು ಕಡೆ ಬೆಳೆಗಳಿಗೂ ಹಾನಿಯಾಗಿದೆ.

ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆ ಆರ್ಭಟ ಜೋರಾಗಿತ್ತು. ಒಂದು ತಾಸಿಗೂ ಹೆಚ್ಚು ಮಳೆ ಸುರಿಯಿತು. ರೈತರು ಭೂಮಿ ಹದ ಮಾಡಿಕೊಳ್ಳಲು ಮುಂದಾಗಿದ್ದಾರೆ.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ವಿಠಲಾಪುರ ಗ್ರಾಮದ ಹೊಲದಲ್ಲಿ ಮೇಯುತ್ತಿದ್ದ ಎರಡು ಹಸು ಸಿಡಿಲು ಬಡಿದು ಮೃತಪಟ್ಟಿವೆ. ಮಾಗಡಿ ತಾಲ್ಲೂಕಿನ ಗುಡ್ಡಹಳ್ಳಿಯಲ್ಲಿ ಮನೆಯೊಂದರ ಮೇಲೆ ದೊಡ್ಡ ಮರವೊಂದು ಬುಡ ಸಮೇತ ಬಿದ್ದಿದೆ. ಮಾವು, ಅಡಿಕೆ, ತೆಂಗಿನ ಮರಗಳು ನೆಲ ಕಚ್ಚಿವೆ. ತಿಪಟೂರು ತಾಲ್ಲೂಕಿನ ನೊಣವಿನಕೆರೆಯಲ್ಲಿ ದೊಡ್ಡ ಮರದ ಕೊಂಬೆ ಹಾಲಿನ ವಾಹನದ ಮೇಲೆ ಬಿದ್ದಿದೆ. ಪ್ರಾಣ ಹಾನಿ ಸಂಭವಿಸಿಲ್ಲ.

ಕೋಲಾರ ಮತ್ತು ರಾಮನಗರ ಜಿಲ್ಲೆಯಲ್ಲಿ ಕೊಯ್ಲಿಗೆ ಬಂದಿದ್ದ ಸಾವಿರಾರು ಮಾವಿನ ಕಾಯಿಗಳು ಉದುರಿದ್ದು, ತುಮಕೂರು ಜಿಲ್ಲೆಯಲ್ಲಿ ಅಡಿಕೆ ಹರಳು ಉದುರುವ ಆತಂಕ ಎದುರಾಗಿದೆ. ಹಿಪ್ಪುನೇರಳೆ ಸೊಪ್ಪು, ಟೊಮೆಟೊ, ತರಕಾರಿ, ದಾಳಿಂಬೆ ಬೆಳೆಗೆ ಅಪಾರ ಹಾನಿಯಾಗಿದೆ. ವಿದ್ಯುತ್ ಕಂಬ, ದೊಡ್ಡ ಮರಗಳು ಬುಡಮೇಲಾಗಿವೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಅಪ್ಪೇನಹಳ್ಳಿ ಬಳಿ ದೇವರಹಟ್ಟಿ ಚಂದ್ರಪ್ಪ ಎಂಬುವವರಿಗೆ ಸೇರಿದ ಮೂರು ಕುರಿಗಳು ಸಿಡಿಲಿಗೆ ಮೃತಪಟ್ಟಿವೆ. ನಡುವಲಹಟ್ಟಿ ಗ್ರಾಮದಲ್ಲಿ ಸಿಡಿಲು ಬಡಿದು ಆಕಳು, ಎತ್ತು ಸಾವನ್ನಪ್ಪಿವೆ.

ಹುಬ್ಬಳ್ಳಿ ನಗರದ ಹಾಗೂ ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ ರಭಸದ ಮಳೆಯಾಗಿದೆ. ಹಾವೇರಿ ಜಿಲ್ಲೆಯಲ್ಲಿ ಗಾಳಿ ರಭಸಕ್ಕೆ ತಾಲ್ಲೂಕಿನ ಹೊಸರಿತ್ತಿ, ಕೋಡಬಾಳ ಗ್ರಾಮದಲ್ಲಿ ಮನೆಗಳ ಚಾವಣಿ, ಹೆಂಚುಗಳು ಹಾರಿ ಹೋಗಿವೆ. ನೀರು ನುಗ್ಗಿ ಮನೆ ಸಾಮಗ್ರಿಗಳೆಲ್ಲ ನೀರು ಪಾಲಾಗಿವೆ.

ಸವಣೂರ ತಾಲ್ಲೂಕಿನ ಬರದೂರ ಹಾಗೂ ಚಳ್ಳಾಳ ಗ್ರಾಮದ ನಡುವಿನ ರಸ್ತೆಯಲ್ಲಿ ವಿದ್ಯುತ್ ಕಂಬ ಹಾಗೂ ಮರ ಧರೆಗೆ ಉರುಳಿದ್ದರಿಂದ ಕೆಲಹೊತ್ತು ಸಂಚಾರಕ್ಕೆ ತೊಂದರೆ ಉಂಟಾಯಿತು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಟ್ಟಿಗೆಹಾರ, ಬಾಳೂರು, ಚಾರ್ಮಾಡಿ ಘಾಟಿ, ಕಳಸ ಭಾಗದಲ್ಲಿ ಬಿರುಸಾಗಿ ಮಳೆ ಸುರಿದಿದೆ.

ಮೈಸೂರು ನಗರ, ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಜೋರು ಮಳೆಯಾಗಿದೆ. ಬೆಟ್ಟದಪುರ ಸಮೀಪದ ಬಾರಸೆ ಗ್ರಾಮದ ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಸಮೀಪದ ಕೆ.ದೊಡ್ಡಕೊಪ್ಪಲು ಗ್ರಾಮದ ಹರೀಶ್ (42) ಮತ್ತು ಸಂಜಯ್ (19) ಗಾಯಗೊಂಡಿದ್ದಾರೆ.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ, ಹನೂರು ವ್ಯಾಪ್ತಿಯಲ್ಲಿ ಮಳೆ ಬಿದ್ದಿದೆ. ಕೊಡಗು ಜಿಲ್ಲೆಯ ಕುಶಾಲನಗರ, ಮಡಿಕೇರಿ, ಸೋಮವಾರಪೇಟೆ, ನಾಪೋಕ್ಲು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಕುಶಾಲನಗರದಿಂದ ಮಡಿಕೇರಿಗೆ ವಿದ್ಯುತ್ ಪೂರೈಸುವ ಕೇಂದ್ರದಲ್ಲಿ ಸಿಡಿಲಿನಿಂದಾಗಿ ತೊಂದರೆ ಕಾಣಿಸಿಕೊಂಡಿತ್ತು.

ಹಾಸನ ನಗರ, ಸಕಲೇಶಪುರ, ಕೊಣನೂರು, ಆಲೂರು ಮಳೆಯಾಗಿದೆ. ದಾವಣಗೆರೆ ಜಿಲ್ಲೆಯ ಜಗಳೂರು, ಹೊನ್ನಾಳಿ ಮಾಯಕೊಂಡ, ತ್ಯಾವಣಗಿ ಹಾಗೂ ಸಂತೇಬೆನ್ನೂರು ಭಾಗಗಳಲ್ಲಿ ಮಳೆ ಬಿದ್ದಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಆರನಕಟ್ಟೆ ಗ್ರಾಮದ ವೃತ್ತದಲ್ಲಿದ್ದ ದೊಡ್ಡ ಬೇವಿನ ಮರವೊಂದು ಉರುಳಿ ರಸ್ತೆಗೆ ಬಿದ್ದಿದ್ದರಿಂದ ಹಿರಿಯೂರು– ಕೋಡಿಹಳ್ಳಿ ಮಾರ್ಗದ ವಾಹನ ಸಂಚಾರ ಮಾರ್ನಾಲ್ಕು ಗಂಟೆ ಸ್ಥಗಿತಗೊಂಡಿತ್ತು.

ಹಿರಿಯೂರು, ಬೀರೇನಹಳ್ಳಿ, ಹೇಮದಳ, ದಿಂಡಾವರ ಭಾಗದಲ್ಲಿ 23 ವಿದ್ಯುತ್ ಕಂಬ ಮುರಿದು ಬಿದ್ದು, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.



ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ಬಂದ ಗಾಳಿ ಮತ್ತು ಮಳೆಗೆ ಕಟ್ಟಡ ಕುಸಿದಿದೆ

‘ಮಳೆ ಸಮಸ್ಯೆ ಸರಿ ಮಾಡ್ತೀವಿ’

ಬೆಂಗಳೂರಿನಲ್ಲಿ ಮಳೆ ಅವಾಂತರದಿಂದ ಯುವತಿ ಮೃತಪಟ್ಟಿರುವುದಕ್ಕೆ ಆದಿಚುಂಚನಗಿರಿ ಮಠದಲ್ಲಿ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ‘ಮಳೆ ಸಮಸ್ಯೆಯನ್ನು ಸರಿ ಮಾಡುವ ಕಾಲ ಬಂದಿದೆ. ಯುವತಿ ಸಾವಿಗೆ ₹ 5, ₹ 10 ಲಕ್ಷ ಪರಿಹಾರ ಕೊಡುವುದು ದೊಡ್ಡದಲ್ಲ, ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಬೇಕು, ಆ ಕೆಲಸ ಮಾಡುತ್ತೇವೆ’ ಎಂದರು.

‘ಪ್ರಕೃತಿ ಯಾರ ಕೈಯಲ್ಲೂ ಇಲ್ಲ, ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ಬೆಂಗಳೂರಿನ ಸಮಸ್ಯೆ ಸರಿಪಡಿಸಲು ಕ್ರಮ ವಹಿಸಲಾಗುವುದು’ ಎಂದರು.

ಸುದ್ದಿ 2 ನಿಮಿಷ

ಗುಂಡಿಕ್ಕಿ ಗರ್ಭಿಣಿ ಆನೆ ಹತ್ಯೆ

ಕುಶಾಲನಗರ (ಕೊಡಗು ಜಿಲ್ಲೆ): ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ಮೀನುಕೊಲ್ಲಿ ಮೀಸಲು ಅರಣ್ಯ ಪ್ರದೇಶ ವ್ಯಾಪ್ತಿಯ ಬಾಳುಗೋಡು ಗ್ರಾಮದಲ್ಲಿ ಗುಂಡೇಟಿನಿಂದ ಗರ್ಭಿಣಿ ಆನೆಯೊಂದು ಮೃತಪಟ್ಟಿದೆ.

ಸುಮಾರು 18 ವರ್ಷ ವಯಸ್ಸಿನ ಹೆಣ್ಣಾನೆಯ ಕಳೇಬರ ಜಗದೀಶ್ ಎಂಬುವವರ ಕಾಫಿ ತೋಟದಲ್ಲಿ ಪತ್ತೆಯಾಗಿದೆ. ಆಹಾರ ಹುಡುಕುತ್ತಾ ಕಾಡಿನಿಂದ ಹೊರ ಬಂದ ಆನೆಗೆ ಶನಿವಾರ ರಾತ್ರಿ ಕಿಡಿಗೇಡಿಗಳು ಗುಂಡು ಹಾರಿಸಿರುವ ಶಂಕೆ ವ್ಯಕ್ತವಾಗಿದೆ. ಕಿವಿಯ ಪಕ್ಕದಲ್ಲಿಯೇ ಗುಂಡು ಹೊಕ್ಕಿದ್ದು, ಸ್ಥಳದಲ್ಲೇ ಆನೆ ಮೃತಪಟ್ಟಿದೆ. ಮರಣೋತ್ತರ ಪರೀಕ್ಷೆ ನಡೆಸಿದಾಗ ಅದರ ಹೊಟ್ಟೆಯಲ್ಲಿ ಗಂಡು ಭ್ರೂಣವಿರುವುದು ಪತ್ತೆಯಾಗಿದ್ದು, ಅದೂ ಮೃತಪಟ್ಟಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮಡಿಕೇರಿ ಉಪ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಮ್ ಬಾಬು, ವಲಯ ಅರಣ್ಯಾಧಿಕಾರಿ ಶಿವರಾಮ್ ಹಾಗೂ ಉಪವಲಯ ಅರಣ್ಯಾಧಿಕಾರಿಗಳ ಅನಿಲ್ ಡಿಸೋಜಾ, ದೇವಯ್ಯ, ರಂಜನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಕಿಡಿಗೇಡಿಗಳು ಕಾಡಾನೆಗೆ ಗುಂಡು ಹೊಡೆದು ಹತ್ಯೆ ಮಾಡಿದ್ದಾರೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದ್ದು, ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಲಾಗುವುದು’ ಎಂದು ಶಿವರಾಮ್ ಬಾಬು ತಿಳಿಸಿದರು.

ಕದಂಬ ನೌಕಾನೆಲೆಗೆ ಐ.ಎನ್.ಎಸ್.ವಿಕ್ರಾಂತ್



ಕಾರವಾರ: ದೇಶೀಯ ನಿರ್ಮಿತ ಮೊದಲ ವಿಮಾನ ವಾಹಕ ಯುದ್ಧನೌಕೆ ಇಲ್ಲಿನ ಕದಂಬ ನೌಕಾನೆಲೆಗೆ ಭಾನುವಾರ ಬಂದಿದೆ.

ನೌಕಾನೆಲೆಯಲ್ಲಿ ನಿರ್ಮಿಸಲಾದ ವಿಶೇಷ ಹಡಗು ಕಟ್ಟೆಯಲ್ಲಿ 262 ಮೀ. ಉದ್ದದ ಯುದ್ಧ ನೌಕೆ ಅಡೆತಡೆ ಇಲ್ಲದೆ ಬಂದು ಲಂಗರು ಹಾಕಿತು. 65 ಮೀ. ಅಗಲ ಮತ್ತು 59 ಮೀ. ಎತ್ತರದ ಈ ಯುದ್ಧ ನೌಕೆಯನ್ನು ಕಳೆದ ವರ್ಷ (2022) ಸೆಪ್ಟೆಂಬರ್‌ನಲ್ಲಿ ಕೊಚ್ಚಿನ್ ನೌಕಾನೆಲೆಯಲ್ಲಿ ಲೋಕಾರ್ಪಣೆಗೊಳಿಸಿ ಭಾರತೀಯ ನೌಕಾದಳಕ್ಕೆ ಹಸ್ತಾಂತರಿಸಲಾಗಿತ್ತು.

‘ನೌಕಾನೆಲೆಯ ಎರಡನೇ ಹಂತದ ವಿಸ್ತರಣೆ ಕಾಮಗಾರಿಯಲ್ಲಿ (ಪ್ರಾಜೆಕ್ಟ್ ಸೀಬರ್ಡ್) ವಿಮಾನ ವಾಹಕ ಯುದ್ಧನೌಕೆ ನಿಲುಗಡೆಯ ಹಡಗುಕಟ್ಟೆ ನಿರ್ಮಿಸಲಾಗಿದೆ. ಈ ಹಡಗುಕಟ್ಟೆಯಲ್ಲಿ ಐ.ಎನ್.ಎಸ್. ವಿಕ್ರಾಂತ್ ಮೊದಲ ಬಾರಿಗೆ ನಿಲುಗಡೆಯಾಗಿದೆ. ನೌಕಾನೆಲೆಯಲ್ಲಿ ಹೆಚ್ಚಿನ ಹಡಗು ನಿಲುಗಡೆಗೆ ವ್ಯವಸ್ಥೆ ಕಲ್ಪಿಸಿದಂತಾಗಿದೆ’ ಎಂದು ನೌಕಾನೆಲೆ ಅಧಿಕಾರಿಗಳು ತಿಳಿಸಿದ್ದಾರೆ.



ಡಿಸಿಎಂ ಡಿ.ಕೆ.ಶಿವಕುಮಾರ್ ಭಾನುವಾರ ಆದಿಚುಂಚನಗಿರಿ ಮಠಕ್ಕೆ ತೆರಳಿ ಕಾಲಭೈರವೇಶ್ವರನಿಗೆ ಪೂಜೆ ಸಲ್ಲಿಸಿದರು. ನಿರ್ಮಲಾನಂದನಾಥ ಸ್ವಾಮೀಜಿ ಇದ್ದರು

ಚುಂಚಶ್ರೀ– ಡಿಕೆಶಿ ಗೋಪ್ಯ ಮಾತುಕತೆ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆದಿಚುಂಚನಗಿರಿ ಮಠಕ್ಕೆ ಭಾನುವಾರ ಭೇಟಿ ನೀಡಿ ಕಾಲಭೈರವೇಶ್ವರ ಸ್ವಾಮಿ ದರ್ಶನ ಪಡೆದರು. ನಂತರ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಜೊತೆ ಅರ್ಧಗಂಟೆ ಗೋಪ್ಯ ಮಾತುಕತೆ ನಡೆಸಿದರು.

ಶಿವಕುಮಾರ್ ಅವರಿಗೆ ಮಂಗಳವಾದ್ಯಗಳೊಂದಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಸ್ವಾಮೀಜಿ ನೇತೃತ್ವದಲ್ಲಿ ಪೂಜಾ ಕೈಂಕರ್ಯ ನಡೆಯಿತು. ನಂತರ ಶಿವಕುಮಾರ್ ಅವರು ಶ್ರೀಗಳ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು. ಶಾಸಕರಾದ ಎನ್.ಚಲುವರಾಯಸ್ವಾಮಿ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಇದ್ದರು. ಪೂಜೆಯ ನಂತರ, ಶಿವಕುಮಾರ್ ಅವರು ಸ್ವಾಮೀಜಿ ಕೊಠಡಿಗೆ ತೆರಳಿ ಮಾತುಕತೆ ನಡೆಸಿದರು.

ನೊಣವಿನಕೆರೆ ಅಜ್ಜಯ್ಯ ಗದ್ದುಗೆಗೆ ಪೂಜೆ

ತಿಪಟೂರು: ತಾಲ್ಲೂಕಿನ ನೊಣವಿನಕೆರೆ ಕಾಡಸಿದ್ಧೇಶ್ವರ ಮಠಕ್ಕೆ ಡಿ.ಕೆ.ಶಿವಕುಮಾರ್ ಭಾನುವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಗಂಗಾಧರ ಅಜ್ಜಯ್ಯನವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದ ಅವರು, ಉಪಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಮಠಕ್ಕೆ ತೆರಳಿ ಗಂಗಾಧರ ಅಜ್ಜಯ್ಯ ಗದ್ದುಗೆಗೆ ಪೂಜೆ ಸಲ್ಲಿಸಿದರು. ಬಳಿಕ ಡಾ.ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಆಶೀರ್ವಾದ ಪಡೆದರು.

ಅಭಿನವ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಚಲುವರಾಯ ಸ್ವಾಮಿ ಇದ್ದರು.

‘ನಾಯಕರ ಮನೆ ಸುತ್ತಿ ಪ್ರಯೋಜನವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರಕ್ಕಾಗಿ ಸಿದ್ದರಾಮಯ್ಯ ಮನೆ ಅಥವಾ ನನ್ನ ಮನೆ ಸುತ್ತಿ ಪ್ರಯೋಜನವಿಲ್ಲ. ಸಿದ್ದರಾಮಯ್ಯ, ಎಂ.ಬಿ. ಪಾಟೀಲ ಅಥವಾ ಬೇರೆ ನಾಯಕರು ಈರೀತಿ ಹೇಳುತ್ತಿದ್ದರು ಎಂದು ಚಾಡಿ ಹೇಳುವುದೂ ಬೇಡ. ನಮ್ಮ ನಡುವೆ ಯಾವ ಮಧ್ಯವರ್ತಿಯೂ ಬೇಡ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವ ಸ್ಥಾನವೂ ಸೇರಿದಂತೆ ಹೊಸ ಸರ್ಕಾರದಲ್ಲಿ ಸ್ಥಾನ ನಿರೀಕ್ಷಿಸುವ ಆಕಾಂಕ್ಷಿಗಳಿಗೆ ಖಡಕ್ ಸೂಚನೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ರಾಜೀವ್ ಗಾಂಧಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಮ್ಮ ಮುಂದೆ ಲೋಕಸಭೆ, ಪಾಲಿಕೆ ಚುನಾವಣೆ ಗೆಲ್ಲುವ ಜವಾಬ್ದಾರಿ ಇದೆ. ವಿಧಾನಸಭೆ ಚುನಾವಣೆಯಲ್ಲಿ 135 ಕ್ಷೇತ್ರಗಳಲ್ಲಿ ಗೆದ್ದರೂ ನನಗೆ ತೃಪ್ತಿ ಇಲ್ಲ. ಕಾರ್ಯಕರ್ತರು ಶಕ್ತಿಶಾಲಿಯಾಗಬೇಕು. ಬೂತ್ ಮಟ್ಟದ ಕಾರ್ಯಕರ್ತರ ಧ್ವನಿ ಗಟ್ಟಿಯಾಗಿದ್ದರೆ ಮಾತ್ರ ನಾಯಕರಾಗುತ್ತೀರಿ’ ಎಂದರು.

‘ಮುಂದಿನ ಐದು ವರ್ಷ ಸರ್ಕಾರ ನೆಮ್ಮದಿಯಿಂದ ಕೆಲಸ ಮಾಡುವಂತಾಗಬೇಕು. ಖರ್ಗೆಯವರು, ಗಾಂಧಿ ಕುಟುಂಬದವರು ನೀಡಿರುವ ಸಲಹೆಯೇ ನಮಗೆ ವೇದವಾಕ್ಯ. ರಾಜೀವ್ ಗಾಂಧಿ ಮತ್ತು ಗಾಂಧಿ ಕುಟುಂಬದ ಜತೆಗೆ ನನಗೆ ಇರುವ ಸಂಬಂಧ, ಭಕ್ತ ಹಾಗೂ ಭಗವಂತನ ನಡುವಣ ಸಂಬಂಧ. ನೀವು ಹುಲ್ಲುಕಡ್ಡಿಯಂತಿದ್ದರೂ ನಿಮಗೆ ಅಧಿಕಾರ ಸಿಗಬೇಕಾದಾಗ ಸಿಕ್ಕೇ ಸಿಗುತ್ತದೆ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ’ ಎಂದು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ‘ಬಿಜೆಪಿ ಇರುವವರೆಗೂ ಸಮಾಜದಲ್ಲಿ ಶಾಂತಿ, ನೆಮ್ಮದಿ, ಸಾಮರಸ್ಯ ಇರುವುದಿಲ್ಲ. ದ್ವೇಷದ ರಾಜಕಾರಣವನ್ನು ಕೊನೆಗಾಣಿಸುವುದೇ ನಾವು ರಾಜೀವ್ ಗಾಂಧಿ ಅವರಿಗೆ ಸಲ್ಲಿಸುವ ನಿಜವಾದ ಗೌರವ’ ಎಂದರು.

‘ಕಾಂಗ್ರೆಸ್‌ನವರು ಭಯೋತ್ಪಾದನೆಯನ್ನು ಬೆಂಬಲಿಸುತ್ತಾರೆ ಎಂದು ಮಾತನಾಡುವ ಬಿಜೆಪಿಯವರು ಯಾರೂ ಭಯೋತ್ಪಾದನೆಯಲ್ಲಿ ಪ್ರಾಣ ಕಳೆದು ಕೊಂಡಿಲ್ಲ. ಭಯೋತ್ಪಾದನೆಗೆ ರಾಜೀವ್ ಗಾಂಧಿ ಹಾಗೂ ಇಂದಿರಾ ಗಾಂಧಿ ಬಲಿಯಾಗಿದ್ದಾರೆ. ಜನರ ನೆಮ್ಮದಿ, ಶಾಂತಿಯನ್ನು ಹಾಳು ಮಾಡುವ ಭಯೋತ್ಪಾದನೆಯನ್ನು ತೊಡೆದುಹಾಕಲು ಕಾಂಗ್ರೆಸ್ ಮೊದಲಿನಿಂದಲೂ ಹೋರಾಟ ಮಾಡುತ್ತಿದೆ’ ಎಂದರು.

‘ಪಾಟೀಲರ ಆರೋಗ್ಯದ ಬಗ್ಗೆ ತಿಳಿಸಿದ್ದೆ– ಡಿಕೆಶಿ

‘ಹಿಂದೆ ರಾಮನಗರ, ಚನ್ನಪಟ್ಟಣದಲ್ಲಿ ಗಲಾಟೆ ನಡೆದ ಸಂದರ್ಭದಲ್ಲಿ ಅಲ್ಲಿ ರಾಜೀವ್ ಗಾಂಧಿ ಶಾಂತಿ ಸಭೆ ಮಾಡಿದ್ದರು. ನಂತರ, ಇಲ್ಲಿ (ಕರ್ನಾಟಕದಲ್ಲಿ) ಏನಾಗುತ್ತಿದೆ ಎಂದು ಅವರು ನನ್ನಲ್ಲಿ ಕೇಳಿದರು. ವೀರೇಂದ್ರ ಪಾಟೀಲರ ಆರೋಗ್ಯ ಹದಗೆಟ್ಟಿದ್ದನ್ನು ತಿಳಿಸಿದ್ದೆ. ಮರುದಿನ ಕುಮಾರಕೃಪಾ ಅತಿಥಿಗೃಹದಲ್ಲಿ, ಮುಂದೆ ಯಾರಿಗೆ ನಾಯಕತ್ವ ನೀಡಬೇಕೆಂದು ಚರ್ಚೆ ನಡೆದಾಗ, ನಾವು ಕೆಲವರು ಬಂಗಾರಪ್ಪನವರ ಹೆಸರು ಪ್ರಸ್ತಾಪಿಸಿದ್ದೆವು. ವೀರೇಂದ್ರ ಪಾಟೀಲರ ಸ್ಥಿತಿ ನೋಡಿದ ಬಳಿಕ ರಾಜೀವ್ ಗಾಂಧಿ ಅವರು ವಿಮಾನ ನಿಲ್ದಾಣದ ಬಳಿ ಮಾಧ್ಯಮಗಳಿಗೆ, ಸದ್ಯದಲ್ಲೇ ನೂತನ ಮುಖ್ಯಮಂತ್ರಿ ನೇಮಿಸಲಾಗುವುದು ಎಂದಿದ್ದರು. ಪಾಟೀಲರ ಆರೋಗ್ಯ ಸ್ಥಿತಿ ನೋಡಿದ ಬಳಿಕ ರಾಜ್ಯದ ಹಿತದೃಷ್ಟಿಯಿಂದ ರಾಜೀವ್ ಗಾಂಧಿಯವರು ಮುಖ್ಯಮಂತ್ರಿ ಬದಲಾವಣೆ ಮಾಡಿದ್ದರು’ ಎಂದು ಶಿವಕುಮಾರ್ ನೆನಪಿಸಿಕೊಂಡರು.

ಸಿದ್ದರಾಮಯ್ಯಗೆ ಪತ್ನಿಯಿಂದ ರ‍್ಯಾಡೊ ವಾಚ್ ಗಿಫ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮುಖ್ಯಮಂತ್ರಿಯಾಗಿ ಎರಡನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ ಸಿದ್ದರಾಮಯ್ಯ ಅವರಿಗೆ, ಅವರ ಪತ್ನಿ ರ‍್ಯಾಡೊ ವಾಚ್ ಉಡುಗೊರೆಯಾಗಿ ನೀಡಿದ್ದಾರೆ. ಅದೇ ವಾಚ್ ಧರಿಸಿದ್ದ ಸಿದ್ದರಾಮಯ್ಯ, ಅದನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಎಂ.ಬಿ. ಪಾಟೀಲ ಅವರಿಗೆ ತೋರಿಸಿ ಸಂತಸ ಹಂಚಿಕೊಂಡಿದ್ದಾರೆ.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಪುಣ್ಯತಿಥಿ ಅಂಗವಾಗಿ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ, ಸಿದ್ದರಾಮಯ್ಯ ಅವರು ವಾಚ್ ಅನ್ನು ತಮ್ಮ ಎಡಭಾಗದಲ್ಲಿ ಕುಳಿತಿದ್ದ ಎಂ.ಬಿ. ಪಾಟೀಲ ಅವರಿಗೆ ತೋರಿಸಿದರು.




ಪತ್ನಿ ಉಡುಗೊರೆಯಾಗಿ ನೀಡಿದ್ದ ರ‍್ಯಾಡೊ ವಾಚ್ ಅನ್ನು ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರಿಗೆ ತೋರಿಸಿದರು —ಪಿಟಿಐ ಚಿತ್ರ

ಇದೇ ವೇಳೆ ಬಲಭಾಗದಲ್ಲಿ ಕುಳಿತಿದ್ದ ಶಿವಕುಮಾರ್ ಅವರೂ ಸಿದ್ದರಾಮಯ್ಯ ಅವರ ಕೈಯನ್ನು ಹಿಡಿದು ಹತ್ತಿರಕ್ಕೆ ಎಳೆದುಕೊಂಡು ಆ ವಾಚ್ ಅನ್ನು ಕುತೂಹಲದಿಂದ ನೋಡಿದರು.

‘ಸಿದ್ದರಾಮಯ್ಯ ಅವರಿಗೆ ಅವರ ಪತ್ನಿ ವಾಚ್ ಅನ್ನು ಉಡುಗೊರೆಯಾಗಿ ನೀಡಿದ್ದಾರೆ. ಆ ಕಾರಣಕ್ಕೆ ಅದನ್ನು ತುಂಬಾ ಪ್ರೀತಿಯಿಂದ ನೋಡುತ್ತಿದ್ದರು. ಇನ್ನು ಮುಂದೆ ಅದೇ ವಾಚ್ ಮಾತ್ರ ಧರಿಸುವಂತೆ ಅವರಿಗೆ ನಾನು ಹೇಳಿದ್ದೇನೆ’ ಎಂದು ಪಾಟೀಲ ಹೇಳಿದರು. 2016ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಗೆ ದುಬೈಯ ಡಾ. ಗಿರೀಶ್ ಚಂದ್ರ ವರ್ಮಾ ಅವರು ಉಡುಗೊರೆಯಾಗಿ ನೀಡಿದ್ದರು ಎನ್ನಲಾದ ವಜ್ರಖಚಿತ ಹ್ಯೂಬ್ಲೊ ವಾಚ್ ವಿವಾದಕ್ಕೆ ಕಾರಣವಾಗಿತ್ತು.

ಹಂಗಾಮಿ ಸಭಾಧ್ಯಕ್ಷರಾಗಿ ಆರ್.ವಿ. ದೇಶಪಾಂಡೆ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಾಂಗ್ರೆಸ್‌ನ ಹಿರಿಯ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ವಿಧಾನಸಭೆಯ ಹಂಗಾಮಿ ಸಭಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

16ನೇ ವಿಧಾನಸಭೆಯ ಮೊದಲ ಅಧಿವೇಶನ ಸೋಮವಾರ (ಮೇ 22) ಬೆಳಿಗ್ಗೆ 11 ಗಂಟೆಗೆ ವಿಧಾನಸೌಧದಲ್ಲಿರುವ ವಿಧಾನಸಭೆ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ.

‘ಸದನದಿಂದ ಸಭಾಧ್ಯಕ್ಷರು ಆಯ್ಕೆ ಆಗುವವರೆಗೆ ವಿಧಾನಸಭಾಧ್ಯಕ್ಷರ ಕರ್ತವ್ಯವನ್ನು ನಿರ್ವಹಿಸಲು ದೇಶಪಾಂಡೆ ಅವರನ್ನು ರಾಜ್ಯಪಾಲರು ನೇಮಕ ಮಾಡಿ ದ್ದಾರೆ’ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಶನಿವಾರ ಅಸ್ತಿತ್ವಕ್ಕೆ ಬಂದ ಹೊಸ ಸರ್ಕಾರದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಆರ್.ವಿ. ದೇಶಪಾಂಡೆ ಅವರನ್ನು ಹಂಗಾಮಿ ಸಭಾಧ್ಯಕ್ಷರನ್ನಾಗಿ ನೇಮಿಸುವಂತೆ ರಾಜ್ಯಪಾಲರಿಗೆ ಮನವಿ ಮಾಡಲು ನಿರ್ಧರಿಸಲಾಗಿತ್ತು.

ಮೂರು ದಿನ ನಡೆಯಲಿರುವ ಅಧಿವೇಶನದಲ್ಲಿ ನೂತನ ಶಾಸಕರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಇದೇ ಅಧಿವೇಶನದಲ್ಲಿ ಪೂರ್ಣಾವಧಿ ಸಭಾಧ್ಯಕ್ಷರ ಆಯ್ಕೆಯೂ ನಡೆಯಲಿದೆ. ವಿಧಾನಸಭಾಧ್ಯಕ್ಷರ ಸ್ಥಾನಕ್ಕೆ ಟಿ.ಬಿ. ಜಯಚಂದ್ರ, ಎಚ್.ಕೆ. ಪಾಟೀಲ, ಬಸವರಾಜ ರಾಯರೆಡ್ಡಿ ಸೇರಿದಂತೆ ಕೆಲವರ ಹೆಸರು ಕೇಳಿಬರುತ್ತಿದೆ. ಆದರೆ, ಅವರೆಲ್ಲರೂ ಸಚಿವ ಸ್ಥಾನದ ಮೇಲೂ ಕಣ್ಣಿಟ್ಟಿದ್ದಾರೆ. ಹೀಗಾಗಿ, ಯಾರಾಗಲಿದ್ದಾರೆ ಸಭಾಧ್ಯಕ್ಷರು ಎಂಬ ಕುತೂಹಲ ಮೂಡಿದೆ.

‘ಸಮನ್ವಯ ಕೊರತೆ ಸೋಲಿಗೆ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಚುನಾವಣೆಯಲ್ಲಿ ಸೋಲಿಗೆ ನಾಯಕರ ಮಧ್ಯೆ ಸಮನ್ವಯದ ಕೊರತೆ, ಒಳ ಏಟುಗಳು, ಕಾರ್ಯಕರ್ತರನ್ನು ನಿರ್ಲಕ್ಷಿಸಿದ್ದು ಮತ್ತು ಜೆಡಿಎಸ್ ಮತಗಳು ಕಾಂಗ್ರೆಸ್‌ಗೆ ವರ್ಗಾವಣೆ ಆಗಿದ್ದೇ ಪ್ರಮುಖ ಕಾರಣ’ ಎಂಬ ಅಭಿಪ್ರಾಯ ಬಿಜೆಪಿ ಆತ್ಮಾವಲೋಕನ ಸಭೆಯಲ್ಲಿ ವ್ಯಕ್ತವಾಯಿತು.

ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಮುಖ ನಾಯಕರ ಸಭೆ ಮತ್ತು ಜಿಲ್ಲಾ ಅಧ್ಯಕ್ಷರು ಹಾಗೂ ಜಿಲ್ಲಾ ಪ್ರಭಾರಿಗಳ ಸಭೆಯಲ್ಲಿ ಈ ಮಾತುಗಳು ಕೇಳಿ ಬಂದವು ಎಂದು ಮೂಲಗಳು ತಿಳಿಸಿವೆ.

> **ಕಾಂಗ್ರೆಸ್‌ನಲ್ಲಿ ಆರಂಭದಲ್ಲೇ ಭಿನ್ನಮತ ಇದೆ. ಅವರು ತಪ್ಪುಗಳನ್ನು ಮಾಡುತ್ತಾರೆ. ಆ ಸಂದರ್ಭದಲ್ಲಿ ನಾವು ಆಕ್ರಮಣಕಾರಿಯಾಗಿರಬೇಕು**
> **ಬಸವರಾಜ ಬೊಮ್ಮಾಯಿ,** ಮಾಜಿ ಮುಖ್ಯಮಂತ್ರಿ

ಕೆಲವು ಕ್ಷೇತ್ರಗಳಲ್ಲಿ ಪಕ್ಷದ ಒಳಗಿನವರೇ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಕೆಲಸ ಮಾಡಿದರು ಅಥವಾ ತಟಸ್ಥರಾಗಿ ಉಳಿದರು. ಒಳ ಏಟುಗಳೂ ಸೋಲಿನಲ್ಲಿ ಪ್ರಮುಖ ಪಾತ್ರ ವಹಿಸಿವೆ. ಕಾಂಗ್ರೆಸ್ ಪಕ್ಷ ಸಾಕಷ್ಟು ಮೊದಲೇ ಚುನಾವಣೆ ತಯಾರಿ ನಡೆಸಿಕೊಂಡಿತ್ತು. ಶೇ 40 ಲಂಚದ ಪ್ರಚಾರ ಕಾಂಗ್ರೆಸ್‌ನ ಟೂಲ್‌ಕಿಟ್‌ನ ಭಾಗ ಎಂಬುದು ಗೊತ್ತಿದ್ದರೂ ಅದಕ್ಕೆ ತಿರುಗೇಟು ನೀಡುವ ಕೆಲಸವನ್ನೂ ಮಾಡಲಿಲ್ಲ. ಕಾಂಗ್ರೆಸ್‌ನದು ಅಪಪ್ರಚಾರ ಎಂಬುದನ್ನು ಸಾಬೀತು ಮಾಡುವ ಪ್ರಾಮಾಣಿಕ ಪ್ರಯತ್ನ ನಡೆಯಲೇ ಇಲ್ಲ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿವೆ.

ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ್ದು, ಲಿಂಗಾಯತರ ನಿರ್ಲಕ್ಷ್ಯದ ವಿಚಾರದಲ್ಲಿ ಕಾಂಗ್ರೆಸ್ ಮಾತುಗಳನ್ನೇ ಜನರು ನಂಬುವಂತಾಯಿತು. ಈ ವಿಚಾರದಲ್ಲೂ ಕಾಂಗ್ರೆಸ್ ಅನ್ನು ಕಟ್ಟಿ ಹಾಕುವ ಪ್ರಯತ್ನ ನಡೆಯಲಿಲ್ಲ. ಕಾಂಗ್ರೆಸ್‌ನ ಗ್ಯಾರಂಟಿಗಳು ಮತದಾರರ ಮೇಲೆ ಪ್ರಭಾವ ಬೀರಿರುವುದನ್ನು ಒಪ್ಪಲೇ ಬೇಕು ಎಂಬ ಮಾತುಗಳೂ ಸಭೆಯಲ್ಲಿ ಕೇಳಿ ಬಂದವು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸಭೆಯಲ್ಲಿ ಇದ್ದರು. ಪ್ರತಿಯೊಬ್ಬ ಜಿಲ್ಲಾ ಅಧ್ಯಕ್ಷರಿಂದ ಮಾಹಿತಿ ಪಡೆದ ಕಾರಣ ತಡ ರಾತ್ರಿಯವರೆಗೆ ಸಭೆ ನಡೆಯಿತು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
‘Deccan Herald-Prajavani Relief Trust’
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು


ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅನಿಸಿಕೆ

‘ಪುಸ್ತಕ, ವಸ್ತ್ರ ಖರೀದಿ’



ಎಸ್‌ಎಸ್‌ಎಲ್‌ಸಿಯಲ್ಲಿ ಮಂಚೇನಹಳ್ಳಿ ತಾಲ್ಲೂಕಿಗೆ ಟಾಪರ್ ಆಗಿದ್ದೆ. ಯಾರೂ ಸಹ ವಿದ್ಯಾರ್ಥಿ ವೇತನ ನೀಡಲಿಲ್ಲ. ‘ಪ್ರಜಾವಾಣಿ’ ಮಾತ್ರ ವಿದ್ಯಾರ್ಥಿ ವೇತನ ನೀಡಿತು. ಇದರಿಂದ ನಮಗೆ ಅನುಕೂಲವಾಯಿತು. ಪುಸ್ತಕ ಮತ್ತು ಬಟ್ಟೆ ಖರೀದಿಸಿದೆ.

ಎಸ್.ಎಂ. ಶರಣ್ಯ ಯಾದವ್, ಮಂಚೇನಹಳ್ಳಿ, ಚಿಕ್ಕಬಳ್ಳಾಪುರ

‘ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ’



ವಿದ್ಯಾರ್ಥಿ ವೇತನದ ಹಣದಿಂದ ಸಮವಸ್ತ್ರ ಮತ್ತು ನೋಟ್‌ಪುಸ್ತಕ ಖರೀದಿಸಿದೆ. ಗ್ರಾಮೀಣ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವ ರೀತಿ ‘ಪ್ರಜಾವಾಣಿ’ ವಿದ್ಯಾರ್ಥಿ ವೇತನ ನೀಡುತ್ತಿದೆ. ಇದಕ್ಕಾಗಿ ಪತ್ರಿಕೆಗೆ ಧನ್ಯವಾದ ಸಲ್ಲಿಸುತ್ತೇನೆ.

ಎಂ.ಬಿಂದು, ಭಕ್ತರಹಳ್ಳಿ, ಶಿಡ್ಲಘಟ್ಟ ತಾ, ಚಿಕ್ಕಬಳ್ಳಾಪುರ

ನಿಧನವಾರ್ತೆ

ಮಾಜಿ ಶಾಸಕ ಯು.ಆರ್.ಸಭಾಪತಿ



ಉಡುಪಿ: ಉಡುಪಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಯು.ಆರ್. ಸಭಾಪತಿ (71) ಭಾನುವಾರ ಸ್ವಗೃಹದಲ್ಲಿ ನಿಧನರಾದರು. ಅಲ್ಪಕಾಲದಿಂದ ಅಸೌಖ್ಯದಿಂದ ಬಳಲುತ್ತಿದ್ದರು.

ಪತ್ನಿ, ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ. 1994ರ ವಿಧಾನಸಭಾ ಚುನಾವಣೆಯಲ್ಲಿ ಉಡುಪಿ ಕ್ಷೇತ್ರದಿಂದ ಬಂಗಾರಪ್ಪ ಅವರ ಕೆಸಿಪಿ ಪಕ್ಷದಿಂದ ಹಾಗೂ 1999ರಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಸಭಾಪತಿ, ಶಾಸಕರಾಗಿ ಆಯ್ಕೆಯಾಗಿದ್ದರು. 2004ರ ಚುನಾವಣೆಯಲ್ಲಿ ಪರಾಭವಗೊಂಡಿದ್ದರು.

ಕರಾವಳಿಯ ಪ್ರಭಾವಿ ನಾಯಕರಾಗಿದ್ದ ಯು.ಆರ್. ಸಭಾಪತಿ ಉತ್ತಮ ವಾಗ್ಮಿಯೂ ಆಗಿದ್ದರು. ಅಂತ್ಯಕ್ರಿಯೆಯು ನಗರದ ಬೀಡಿನಗುಡ್ಡೆಯ ರುದ್ರಭೂಮಿಯಲ್ಲಿ ಭಾನುವಾರ ನಡೆಯಿತು.

ಶಿಕ್ಷಣ



ಬೆಂಗಳೂರು ನಗರ ವಿ.ವಿಯಲ್ಲಿ ಎನ್‌ಇಪಿ–ಪದವಿ ಕೋರ್ಸ್

ಸ್ನಾತಕೋತ್ತರ ಪದವಿಗಳನ್ನಷ್ಟೇ ಬೋಧಿಸುತ್ತಿದ್ದ ಬೆಂಗಳೂರು ನಗರ ವಿಶ್ವವಿದ್ಯಾಲಯ ವ್ಯಾಪ್ತಿಯ ಸೆಂಟ್ರಲ್ ಕಾಲೇಜಿನಲ್ಲಿ ಹೊಸ ಶಿಕ್ಷಣ ನೀತಿ ಅನ್ವಯ ಹೊಸ ಪದವಿ ಕೋರ್ಸ್‌ಗಳನ್ನೂ ಆರಂಭಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಈ ಕುರಿತು ವಿವರ ಇಲ್ಲಿದೆ.

ಎ.ಎಂ.ಸುರೇಶ್

ಬೆಂಗಳೂರು ನಗರ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿರುವ ಸೆಂಟ್ರಲ್ ಕಾಲೇಜು ಹಾಗೂ ಮಲ್ಲೇಶ್ವರದ ಮಹಿಳಾ ಮಹಾವಿದ್ಯಾಲಯದಲ್ಲಿ 'ಹೊಸ ಶಿಕ್ಷಣ ನೀತಿ (ಎನ್‌ಇಪಿ)' ಅನ್ವಯ ಪದವಿ ಹಂತದಲ್ಲಿ ವಿಭಿನ್ನ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. 2023–24ನೇ ಸಾಲಿನ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ವಿಭಜನೆಯಾಗಿ ಮೂರು ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದ ಬಳಿಕ, ಸೆಂಟ್ರಲ್ ಕಾಲೇಜು ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದೆ. ಈ ಐತಿಹಾಸಿಕ ಸೆಂಟ್ರಲ್ ಕಾಲೇಜಿನಲ್ಲಿ ಸರ್.ಎಂ.ವಿಶ್ವೇಶ್ವರಯ್ಯ, ಸ್ವಾತಂತ್ರ್ಯ ಹೋರಾಟಗಾರ ಸಿ.ವಿ.ರಾಜಗೋಪಾಲಚಾರಿ, ವಿಜ್ಞಾನಿ ಸಿ.ಎನ್.ಆರ್.ರಾವ್ ಅವರಂತಹ ಹಲವು ಗಣ್ಯರು ವ್ಯಾಸಂಗ ಮಾಡಿದ್ದಾರೆ.

ಹೊಸ ಶಿಕ್ಷಣ ನೀತಿಗೆ ಅನುಗುಣವಾಗಿ ವಿವಿ ವ್ಯಾಪ್ತಿಯ ಎರಡೂ ಕಾಲೇಜುಗಳಲ್ಲಿ ಕಳೆದ ವರ್ಷದಿಂದ ಪದವಿ ಹಂತದಲ್ಲಿ ಬೇಸಿಕ್/ಆನರ್ಸ್ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ವಿದೇಶಗಳಲ್ಲಿ ಈಗಾಗಲೇ ಇರುವ ಬಹುಶಿಸ್ತೀಯ ಅಧ್ಯಯನ ಮಾದರಿಯ ಕೋರ್ಸ್‌ಗಳನ್ನು ಮೊದಲ ಬಾರಿಗೆ ಇಲ್ಲಿ ಪರಿಚಯಿಸಲಾಗಿದೆ.

ಹೊಸ ಮಾದರಿಯ ಶಿಕ್ಷಣ

ಪದವಿ ಹಂತದಲ್ಲಿ ಕಲಾ, ವಿಜ್ಞಾನ, ವಾಣಿಜ್ಯ ವಿಭಾಗದಲ್ಲಿ ಬೇಸಿಕ್/ಆನರ್ಸ್ ಕೋರ್ಸ್ ಆರಂಭಿಸಲಾಗಿದೆ. ವಿದ್ಯಾರ್ಥಿಯು ಪದವಿಗೆ ಪ್ರವೇಶ ಪಡೆದ ನಂತರ ಅನಿವಾರ್ಯ ಕಾರಣಗಳಿಂದ ಕೋರ್ಸ್ ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಮಧ್ಯದಲ್ಲೇ ಬಿಡಬಹುದು. ಒಂದು ವೇಳೆ ಕೆಲ ವರ್ಷಗಳ ನಂತರ ಮತ್ತೆ ಕೋರ್ಸ್ ಮುಂದುವರಿಸಲು ಬಯಸಿದರೆ ಅದಕ್ಕೂ ಅವಕಾಶವಿದೆ.

ಉದಾಹರಣೆಗೆ ಪ್ರಥಮ ವರ್ಷ ಪೂರ್ಣಗೊಳಿಸಿದ ಬಳಿಕ ಶಿಕ್ಷಣವನ್ನು ಮೊಟಕುಗೊಳಿಸಿದರೆ, ಪ್ರಥಮ ವರ್ಷ ಪೂರೈಸಿದ್ದಕ್ಕೆ ಸರ್ಟಿಫಿಕೇಟ್ ನೀಡಲಾಗುತ್ತದೆ. ದ್ವಿತೀಯ ವರ್ಷ ಮುಗಿದ ಬಳಿಕ ಡಿಪ್ಲೊಮಾ ಪ್ರಮಾಣ ಪತ್ರ, ತೃತೀಯ ವರ್ಷ ಪೂರ್ಣಗೊಳಿಸಿದರೆ ಪದವಿ ಪ್ರಮಾಣ ಪತ್ರ ನೀಡಲಾಗುತ್ತದೆ. ನಾಲ್ಕನೇ ವರ್ಷ ಪೂರ್ಣಗೊಂಡ ಬಳಿಕ ಆನರ್ಸ್ ಪದವಿ ನೀಡಲಾಗುತ್ತದೆ.

ಆನರ್ಸ್ ನಂತರ ಒಂದು ವರ್ಷದ ಸ್ನಾತಕೋತ್ತರ ಪದವಿ ಪಡೆಯಬಹುದು. ಅಲ್ಲದೆ ಆನರ್ಸ್‌ನಲ್ಲಿ ಕನಿಷ್ಠ ಶೇಕಡ 75ರಷ್ಟು ಅಂಕಗಳನ್ನು ಪಡೆದಿದ್ದು, ಹೆಚ್ಚಿನ ಕ್ರೆಡಿಟ್‌ಗಳನ್ನು ಹೊಂದಿದ್ದರೆ ಸ್ನಾತಕೋತ್ತರ ಪದವಿ ಬದಲು ನೇರವಾಗಿ ಪಿಎಚ್.ಡಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಅಂತರರಾಷ್ಟ್ರೀಯ ಶಿಕ್ಷಣ ಕ್ರಮಕ್ಕೆ ಅನುಗುಣವಾಗಿ ಹೊಸ ಶಿಕ್ಷಣ ನೀತಿ ಇದೆ. ಕೋರ್ಸ್‌ಗೆ ಪ್ರವೇಶ ಪಡೆದ ನಂತರ ಮಧ್ಯದಲ್ಲಿ ಹೊರ ಹೋಗುವ ಮತ್ತು ವಾಪಸ್ ಬರುವ (ಬಹು ನಿರ್ಗಮನ ಮತ್ತು ಬಹು ಆಗಮನ) ಅವಕಾಶ ಕಲ್ಪಿಸಿರುವುದರಿಂದ, ಈ ವ್ಯವಸ್ಥೆ ಹೆಚ್ಚು ವಿದ್ಯಾರ್ಥಿಸ್ನೇಹಿಯಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎನ್ನುತ್ತಾರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ.



ಯಾವುದೇ ಖಾಸಗಿ ಕಾಲೇಜಿಗೂ ಕಡಿಮೆ ಇಲ್ಲದ ಅತ್ಯುತ್ತಮ ಮೂಲಸೌಕರ್ಯಗಳು ಇಲ್ಲಿವೆ. ಅಲ್ಲದೆ ಸರ್ಕಾರಿ ಕಾಲೇಜು ಆಗಿರುವುದರಿಂದ ಶುಲ್ಕವೂ ಕಡಿಮೆ ಇದೆ. ಅಮೆರಿಕ, ಕೆನಡಾ ಸೇರಿದಂತೆ ವಿದೇಶಗಳಲ್ಲಿನ ವಿಶ್ವವಿದ್ಯಾಲಯಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಅಲ್ಲಿನ ವಿ.ವಿಗಳ ಸಂಶೋಧನೆಯ ಲಾಭ ನಮ್ಮ ವಿದ್ಯಾರ್ಥಿಗಳಿಗೂ ಸಿಗಲಿದೆ.

ಪ್ರೊ.ಲಿಂಗರಾಜ ಗಾಂಧಿ
ಕುಲಪತಿ, ಬೆಂಗಳೂರು ನಗರ ವಿಶ್ವವಿದ್ಯಾಲಯ



ವಿಷಯಗಳ ಆಯ್ಕೆಗೆ ಅವಕಾಶ

ಕಲಾ ವಿಭಾಗದ ವಿದ್ಯಾರ್ಥಿಯು ವಿಜ್ಞಾನ ವಿಷಯಗಳನ್ನು ಕಲಿಯಲು ಹಾಗೂ ವಿಜ್ಞಾನ ವಿಭಾಗದ ವಿದ್ಯಾರ್ಥಿಯು ಕಲಾ ವಿಷಯಗಳನ್ನು ಕಲಿಯಲು ಮುಕ್ತ ಅವಕಾಶ ಕಲ್ಪಿಸಿರುವುದು ಎನ್‌ಇಪಿಯ ಮತ್ತೊಂದು ವಿಶೇಷತೆ ಎನ್ನುತ್ತಾರೆ ವಿಶ್ವವಿದ್ಯಾಲಯದ ಪ್ರವೇಶಾತಿ ಸಂಯೋಜಕ ಶಿವಕುಮಾರ್.

ಉದಾಹರಣೆಗೆ ಬಿಎಸ್ಸಿ ವ್ಯಾಸಂಗ ಮಾಡುವ ವಿದ್ಯಾರ್ಥಿ, ವಿಜ್ಞಾನ ವಿಭಾಗದಲ್ಲಿ ಎರಡು ಕೋರ್ ವಿಷಯಗಳನ್ನು ಆಯ್ಕೆ ಮಾಡಿಕೊಂಡು, ಇನ್ನುಳಿದ ಎರಡು ವಿಷಯಗಳನ್ನು ನಾನ್‌ಕೋರ್‌ನಲ್ಲಿ (ಕಲಾ ವಿಭಾಗ) ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಅದೇ ರೀತಿ ಕಲಾ ವಿಭಾಗದ ವಿದ್ಯಾರ್ಥಿ ವಿಜ್ಞಾನ ವಿಷಯಗಳನ್ನು ಕಲಿಯಬಹುದು.

ಬಿಎಸ್ಸಿ ವಿದ್ಯಾರ್ಥಿ ಭೌತವಿಜ್ಞಾನ, ರಸಾಯನ ವಿಜ್ಞಾನದ ಜೊತೆಗೆ ಇತಿಹಾಸ, ಅರ್ಥಶಾಸ್ತ್ರ ಓದಲು ಬಯಸಿದರೆ, ಅದಕ್ಕೂ ಅವಕಾಶವಿದೆ. ಇದು ಉದಾಹರಣೆ ಅಷ್ಟೇ. ಇತಿಹಾಸ, ಅರ್ಥಶಾಸ್ತ್ರ ಅಲ್ಲದೆ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಇತ್ಯಾದಿ ವಿಷಯಗಳನ್ನು ಆಯ್ಕೆ ಮಾಡಿ ಕೊಳ್ಳಬಹುದು. ಇದರ ಜೊತೆಗೆ ಭಾಷಾ ವಿಷಯಗಳನ್ನು ಕಲಿಯಬೇಕಾಗಿದ್ದು, ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಫ್ರೆಂಚ್, ಜರ್ಮನ್ ಭಾಷೆಗಳಲ್ಲಿ ಯಾವುದಾದರೂ ಎರಡನ್ನು ಆಯ್ಕೆ ಮಾಡಿಕೊಳ್ಳಬಹುದು.

ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ, ಬಿಎಸ್‌ಡಬ್ಲ್ಯು, ಬಿ.ಎಸ್ಸಿ, ಬಿಸಿಎ, ಬಿಕಾಂ, ಬಿಬಿಎ ಕೋರ್ಸ್‌ಗಳಿವೆ. ಬಿಎಸ್ಸಿ ವಿಭಾಗದಲ್ಲಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಗಣಿತ, ಕಂಪ್ಯೂಟರ್ ವಿಜ್ಞಾನ, ಪರಿಸರ ವಿಜ್ಞಾನ ಜೊತೆಗೆ ಫ್ಯಾಷನ್ ಆ್ಯಂಡ್ ಅಪರೆಲ್ ಡಿಸೈನ್, ಇಂಟೀರಿಯಲ್ ಡಿಸೈನ್ ಆ್ಯಂಡ್ ಡೆಕೊರೇಷನ್ ಕೋರ್ಸ್‌ಗಳೂ ಇವೆ.

ಮಹಿಳಾ ಕಾಲೇಜಿನಲ್ಲಿ..

ಮಲ್ಲೇಶ್ವರದ ಮಹಿಳಾ ಕಾಲೇಜಿನಲ್ಲಿ ಬಿ.ಕಾಂ, ಬಿಎಸ್ಸಿ, ಬಿಎ, ಬಿಸಿಎ, ಬಿವಿಎ ಕೋರ್ಸ್‌ಗಳಿವೆ. ಬಿವಿಎನಲ್ಲಿ ಅನಿಮೇಷನ್, ಗ್ರಾಫಿಕ್ ಡಿಸೈನ್‌ಗೂ ಅವಕಾಶವಿದೆ. ಒಂದು ಕೋರ್ಸ್‌ನಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಇರಬೇಕು. ಒಂದು ವೇಳೆ ಅಷ್ಟು ಸಂಖ್ಯೆಯಲ್ಲಿ ಅರ್ಜಿಗಳು ಬರದೆ ಇದ್ದರೆ ಪ್ರಸಕ್ತ ಸಾಲಿನಲ್ಲಿ ಕೋರ್ಸ್ ಪ್ರಾರಂಭಿಸುವುದಿಲ್ಲ.

ಕಡಿಮೆ ಶುಲ್ಕ

ಖಾಸಗಿ ಕಾಲೇಜುಗಳಿಗೆ ಹೋಲಿಸಿದರೆ ಇಲ್ಲಿ ಶುಲ್ಕ ಕಡಿಮೆ ಇದೆ. ಕೋರ್ಸ್‌ಗೆ ಅನುಗುಣವಾಗಿ ಕನಿಷ್ಠ ₹15 ಸಾವಿರದಿಂದ ಗರಿಷ್ಠ ₹28 ಸಾವಿರ ಶುಲ್ಕವಿದೆ. ಖಾಸಗಿ ಕಾಲೇಜುಗಳಲ್ಲಿ ಸಿಗುವ ಸೌಲಭ್ಯಗಳಿಗಿಂತ ಹೆಚ್ಚಿನ ಸೌಲಭ್ಯಗಳು ಇಲ್ಲಿ ಲಭ್ಯ ಇವೆ. ವಿದೇಶಿ ವಿಶ್ವವಿದ್ಯಾಲಯಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದು, ತಂತ್ರಜ್ಞಾನದ ವಿನಿಮಯಕ್ಕೆ ಅವಕಾಶವಿದೆ. 150 ವರ್ಷಗಳಷ್ಟು ಹಳೆಯದಾದ ಕಟ್ಟಡವನ್ನು ನವೀಕರಣಗೊಳಿಸಲಾಗಿದೆ. ಗ್ರಂಥಾಲಯ, ಪ್ರಯೋಗಾಲಯಗಳನ್ನು ಉನ್ನತೀಕರಿಸಲಾಗಿದೆ ಎನ್ನುತ್ತಾರೆ ಪ್ರೊ.ಗಾಂಧಿ

ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲೇ ಕೌಶಲಕ್ಕೆ ಒತ್ತು ನೀಡಿದರೆ ಕೋರ್ಸ್ ಮುಗಿದ ಬಳಿಕ ಉದ್ಯೋಗಾವಕಾಶ ಪಡೆಯಲು ಸುಲಭವಾಗಲಿದೆ. ಅಲ್ಲದೆ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. 14 ವಿದೇಶಿ ಭಾಷೆಗಳ ವಿಭಾಗವಿದೆ. ಕೋರ್ಸ್ ಜೊತೆಗೆ ವಿದೇಶಿ ಭಾಷೆ ಕಲಿಯುವುದರಿಂದ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಅವಕಾಶಗಳು ಹೇರಳವಾಗಿರುತ್ತವೆ ಎನ್ನುತ್ತಾರೆ ಅವರು.

ಈಗಾಗಲೇ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ www.bcu.ac.in ಸಂಪರ್ಕಿಸಬಹುದು.

ಸೈಬರ್ ಸೆಕ್ಯುರಿಟಿ

ಸೈಬರ್ ಸೆಕ್ಯುರಿಟಿ ಎಂಬ ಹೊಸ ಶಾಖೆಯೇ ವಿಸ್ತಾರವಾಗಿ ಬೆಳೆಯುತ್ತಿದೆ. ಸೈಬರ್ ಕಳ್ಳರ ಉಪಟಳದಿಂದ ವಿವಿಧ ವಲಯಗಳನ್ನು, ಕಂಪನಿಗಳನ್ನು ಕಾಪಾಡುವ ಕೌಶಲಪೂರ್ಣ ಉದ್ಯೋಗಿಗಳ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.



ಸಿಬಂತಿ ಪದ್ಮನಾಭ ಕೆ. ವಿ.,

ಕಂಪ್ಯೂಟರ್, ಇಂಟರ್‌ನೆಟ್ ಮತ್ತು ಸ್ಮಾರ್ಟ್ ಫೋನುಗಳು ಆಧುನಿಕ ಬದುಕಿನ ಆಧಾರಸ್ತಂಭಗಳಾಗಿರುವ ಹೊತ್ತಿನಲ್ಲೇ ಅವು ದಿನನಿತ್ಯದ ಜೀವನದ ಸವಾಲುಗಳಾಗಿಯೂ ಪರಿಣಮಿಸಿವೆ. ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಟ್ಟ ಲಕ್ಷಾಂತರ ರೂಪಾಯಿ ಹಣ ಕ್ಷಣಾರ್ಧದಲ್ಲಿ ಮಾಯವಾಗುವುದುಂಟು. ಭದ್ರತಾ ಪಡೆಗಳ ಜಾಲತಾಣಗಳಲ್ಲೇ ಭಯೋತ್ಪಾದಕ ಸಂಘಟನೆಗಳ ಬಾವುಟ ಹಾರಾಡುವುದುಂಟು. ಬೃಹತ್ ಕಾರ್ಪೋರೇಟ್ ಕಂಪನಿಗಳ ಅಮೂಲ್ಯ ದತ್ತಾಂಶಗಳು ರಾತೋರಾತ್ರಿ ವಂಚಕರ ಪಾಲಾಗುವುದುಂಟು. ತಂತ್ರಜ್ಞಾನ ವಿಕಾಸದ ವೇಗದಲ್ಲೇ ವಂಚಕರೂ ಬೆಳೆಯುತ್ತಿದ್ದಾರೆ. ಬುದ್ಧಿವಂತ ತಂತ್ರಜ್ಞರು ಚಾಪೆಯ ಕೆಳಗೆ ತೂರಿದರೆ ಸೈಬರ್ ಕಳ್ಳರು ರಂಗೋಲಿ ಕೆಳಗೆ ತೂರುತ್ತಿದ್ದಾರೆ. ಹೀಗಾಗಿ ಸೈಬರ್ ಸೆಕ್ಯುರಿಟಿ ಎಂಬ ಹೊಸ ಶಾಖೆಯೇ ವಿಸ್ತಾರವಾಗಿ ಬೆಳೆಯುತ್ತಿದೆ. ಸೈಬರ್ ಕಳ್ಳರ ಉಪಟಳದಿಂದ ವಿವಿಧ ವಲಯಗಳನ್ನು, ಕಂಪನಿಗಳನ್ನು ಕಾಪಾಡುವ ಕೌಶಲಪೂರ್ಣ ಉದ್ಯೋಗಿಗಳ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಸಾಕಷ್ಟು ಔಪಚಾರಿಕ ಹಾಗೂ ಆನ್‌ಲೈನ್ ಕೋರ್ಸುಗಳೂ ಈಗ ಧಾರಾಳವಾಗಿ ದೊರೆಯುತ್ತಿವೆ.

ಏನಿದು ಕೋರ್ಸ್?

ಸೈಬರ್ ಸೆಕ್ಯುರಿಟಿಯನ್ನು ಕಂಪ್ಯೂಟರ್ ಸೆಕ್ಯುರಿಟಿ, ಡಿಜಿಟಲ್ ಸೆಕ್ಯುರಿಟಿ, ಐಟಿ ಸೆಕ್ಯುರಿಟಿ ಇತ್ಯಾದಿ ಹೆಸರುಗಳಿಂದ ಗುರುತಿಸುವುದುಂಟು. ಕಂಪ್ಯೂಟರ್ ಹಾಗೂ ಅದರ ಜಾಲಗಳನ್ನು ವಂಚಕರ ದಾಳಿಗಳಿಂದ ಕಾಪಾಡುವುದು ಸೈಬರ್ ಸೆಕ್ಯುರಿಟಿಯ ಪ್ರಧಾನ ಉದ್ದೇಶ. ವಂಚಕರ ಹ್ಯಾಕಿಂಗ್ ತಂತ್ರಗಳಿಗೆ ಪ್ರತಿತಂತ್ರಗಳನ್ನು ರೂಪಿಸಿ, ದತ್ತಾಂಶಗಳನ್ನು ಸಂರಕ್ಷಿಸುವ ಕೌಶಲಗಳನ್ನು ಕಲಿಸುವುದು ಸೈಬರ್ ಸೆಕ್ಯುರಿಟಿ ಕೋರ್ಸುಗಳ ಕೆಲಸ. ಇವು ಅನೇಕ ಕೌಶಲಗಳ ಗುಚ್ಛಗಳಾಗಿರುವುದರಿಂದ, ಇವುಗಳನ್ನು ಆಸಕ್ತರು ತಮ್ಮ ಅನುಕೂಲಕ್ಕನುಗುಣವಾಗಿ ಪ್ರತ್ಯೇಕವಾಗಿಯೂ ಕಲಿಯಬಹುದು; ಒಟ್ಟಾಗಿಯೂ ಕಲಿಯಬಹುದು. ಔಪಚಾರಿಕ ತಾಂತ್ರಿಕ ಕೋರ್ಸುಗಳಲ್ಲಿ ಇಂದು ಸೈಬರ್ ಸೆಕ್ಯುರಿಟಿ ಒಂದು ಸ್ಪೆಶಲೈಸೇಶನ್ ವಿಷಯವಾಗಿ ಲಭ್ಯವಿದೆ. ಇದನ್ನು ವಿವಿಧ ಉಪವಿಷಯಗಳನ್ನಾಗಿ ವಿಂಗಡಿಸಿದ ಹತ್ತಾರು ಕೋರ್ಸುಗಳು ಆನ್‌ಲೈನ್ ಮಾದರಿಯಲ್ಲಿಯೂ ಲಭ್ಯವಿವೆ.



ಎಲ್ಲೆಲ್ಲಿ ಕೋರ್ಸ್?

'ಭಾರತ ಸರ್ಕಾರ ಶಿಕ್ಷಣ ಸಚಿವಾಲಯದ 'ಸ್ವಯಂ'ಆನ್‌ಲೈನ್ ತಾಣದಲ್ಲಿ ಸೈಬರ್ ಸೆಕ್ಯುರಿಟಿಗೆ ಸಂಬಂಧಿಸಿದ ಅನೇಕ ಕೋರ್ಸುಗಳಿವೆ. ಇವು ವಿವಿಧ ವಿಶ್ವವಿದ್ಯಾನಿಲಯಗಳಿಂದ ಹಾಗೂ ಉನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ರೂಪಿಸಲ್ಪಟ್ಟಿದ್ದು, ವಿಡಿಯೊ ಹಾಗೂ ಪಠ್ಯರೂಪದಲ್ಲಿವೆ. ಸರ್ಟಿಫಿಕೇಟ್ ಇನ್ ಸೈಬರ್ ಸೆಕ್ಯುರಿಟಿ, ಇನ್‌ಫಾರ್ಮೇಶನ್ ಸೆಕ್ಯುರಿಟಿ ಸೈಬರ್ ಫಾರೆನ್ಸಿಕ್ಸ್, ಹಾರ್ಡ್‌ವೇರ್ ಸೆಕ್ಯುರಿಟಿ, ಆನ್‌ಲೈನ್ ಪ್ರೈವಸಿ, ಸೈಬರ್ ಕ್ರೈಂ ಅಡ್ಮಿನಿಸ್ಟ್ರೇಶನ್- ಮುಂತಾದ ಕೋರ್ಸುಗಳನ್ನು ಪದವಿ ವ್ಯಾಸಂಗ ಮಾಡುತ್ತಿರುವವರು ತೆಗೆದುಕೊಳ್ಳಬಹುದು. ವಿವರಗಳನ್ನು ಇಲ್ಲಿ ಗಮನಿಸಿ:
https://onlinecourses.swayam2.ac.in/

- ಸಿಸ್ಕೋ ನೆಟ್‌ವರ್ಕಿಂಗ್ ಅಕಾಡೆಮಿಯು 15 ಗಂಟೆಗಳ ಸೈಬರ್ ಸೆಕ್ಯುರಿಟಿ ಕೋರ್ಸನ್ನು ಉಚಿತವಾಗಿ ನೀಡುತ್ತಿದೆ. ಕೊಂಡಿ ಇಲ್ಲಿದೆ: https://www.netacad.com/courses/cybersecurity/introduction-cybersecurity
- ಆರಂಭಿಕ ಹಂತದ ಕಲಿಕೆಗೆ ಗ್ರೇಟ್ ಲರ್ನಿಂಗ್ ಅಕಾಡೆಮಿ ಒದಗಿಸುವ ಸೈಬರ್ ಭದ್ರತೆಯ ಕೋರ್ಸ್ ಅನುಕೂಲಕರವಾಗಿದೆ. ಇದು ಉಚಿತವಾಗಿ ಲಭ್ಯವಿದೆ. ಈ ಲಿಂಕ್ ಗಮನಿಸಿ: https://www.mygreatlearning.com/academy/learn-for- free/courses/introduction-to-cyber-security
- ಗೂಗಲ್ ಕಂಪನಿಯು ಈ ಕ್ಷೇತ್ರಕ್ಕೆ ಸಂಬಂಧಿಸಿದ ಉನ್ನತ ಗುಣಮಟ್ಟದ ಕೋರ್ಸ್‌ಗಳನ್ನು ಒದಗಿಸುತ್ತಿದೆ. ಆದರೆ ಇದಕ್ಕೆ ನಿರ್ದಿಷ್ಟ ಶುಲ್ಕ ಪಾವತಿಸಬೇಕಿರುತ್ತದೆ. ಪ್ರತಿದಿನ ಒಂದು ಗಂಟೆಯಂತೆ, ಆರು ತಿಂಗಳು ಇದಕ್ಕೆ ಮೀಸಲಿಟ್ಟರೆ ವಿವಿಧ ಹಂತಗಳ ಎಂಟು ಕೋರ್ಸುಗಳನ್ನು ಮುಗಿಸಿಕೊಳ್ಳಬಹುದು. ವಿವರಗಳನ್ನು ಇಲ್ಲಿ ನೋಡಿ: https://grow.google/certificates/cybersecurity/

ಯಾರು ಕಲಿಯಬಹುದು?

'ಇಂಟ್ರೊಡಕ್ಷನ್ ಟು ಸೈಬರ್ ಸೆಕ್ಯುರಿಟಿ', 'ಆನ್‌ಲೈನ್ ಪ್ರೈವಸಿ', 'ಸೈಬರ್ ಕ್ರೈಂ ಅಡ್ಮಿನಿಸ್ಟ್ರೇಶನ್' ನಂತಹ ಕೋರ್ಸುಗಳನ್ನು ತಾಂತ್ರಿಕ ವಿದ್ಯಾಭ್ಯಾಸದ ಹಿನ್ನೆಲೆ ಇಲ್ಲದವರೂ ತೆಗೆದುಕೊಳ್ಳಬಹುದು. ಕಂಪ್ಯೂಟರ್ ಹಾಗೂ ಇಂಟರ್ನೆಟ್ ಬಳಕೆಯ ಉತ್ತಮ ತಿಳಿವಳಿಕೆ ಇದ್ದರೆ ಸಾಕು. ಪೈಥಾನ್, ಲಿನಕ್ಸ್, ಎಸ್‌ಕ್ಯೂಎಲ್ ಭಾಷೆಗಳಿಗೆ ಸಂಬಂಧಿಸಿದ ಕೋರ್ಸುಗಳನ್ನು ಮಾಡಬೇಕಾದರೆ ಮಾತ್ರ ವಿಜ್ಞಾನ ಇಲ್ಲವೇ ತಾಂತ್ರಿಕ ವಿಷಯಗಳನ್ನು (ಡಿಪ್ಲೊಮಾ/ ಬಿಎಸ್ಸಿ) ಓದಿದ್ದರೆ ಒಳ್ಳೆಯದು.


ಉದ್ಯೋಗ ಕ್ಷೇತ್ರ: ಎಲ್ಲ ಕಾರ್ಪೋರೇಟ್ ಕಂಪನಿಗಳೂ ಇಂದು ಸೈಬರ್ ಭದ್ರತಾ ವಿಶ್ಲೇಷಕರನ್ನು ನೇಮಕ ಮಾಡಿಕೊಳ್ಳುತ್ತಿವೆ. ಇ-ಕಾಮರ್ಸ್, ಹಣಕಾಸು, ಆರೋಗ್ಯ, ತಂತ್ರಜ್ಞಾನ, ಸರ್ಕಾರಿ ಸಂಸ್ಥೆಗಳಲ್ಲಿ ಈ ಹುದ್ದೆಗಳ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಈ ಉದ್ಯೋಗಗಳಲ್ಲಿ ಆರಂಭಿಕ ಹಂತದಲ್ಲೇ ಆಕರ್ಷಕ ವೇತನ ದೊರೆಯುವುದು ಒಂದು ವೈಶಿಷ್ಟ್ಯ.

(ಮುಂದಿನವಾರ: ಗ್ರಾಫಿಕ್ ಡಿಸೈನಿಂಗ್)

ಸಹಾಯಕ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ

ಎಂಬಿಎಗೆ ಪ್ರವೇಶಕ್ಕೆ ಸಿಇಟಿ ಕಡ್ಡಾಯವೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ
ಪ್ರದೀಪ್ ಕುಮಾರ್ ವಿ.



1. ನಾನು ಅಂತಿಮ ವರ್ಷದ ಬಿಕಾಂ ಮಾಡುತ್ತಿದ್ದೇನೆ. ಎಂಬಿಎ (ದೂರಶಿಕ್ಷಣ) ಮಾಡಲು ಸಿಇಟಿ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯಬೇಕೇ?

ಹೆಸರು, ಊರು ತಿಳಿಸಿಲ್ಲ.

ಎಂಬಿಎ (ದೂರಶಿಕ್ಷಣ) ಮಾಡಲು ಪಿಜಿಸಿಇಟಿ ಪರೀಕ್ಷೆಯ ಅಗತ್ಯವಿಲ್ಲ. ಆದರೆ, ಕೆಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಅಭ್ಯರ್ಥಿಗಳಿಗೆ ಮ್ಯಾನೇಜ್‌ಮೆಂಟ್ ಶಿಕ್ಷಣಕ್ಕೆ ಬೇಕಾಗುವ ಆಸಕ್ತಿ, ಅಭಿರುಚಿ ಇದೆಯೇ ಎಂದು ತಿಳಿಯಲು ಆಪ್ಟಿಟ್ಯೂಡ್ ಟೆಸ್ಟ್ ಆಯೋಜಿಸುತ್ತವೆ. ಹಾಗಾಗಿ, ಪ್ರವೇಶ ಪ್ರಕ್ರಿಯೆ, ನೀವು ಸೇರಲು ಬಯಸುವ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಅವಲಂಬಿತವಾಗಿರುತ್ತದೆ.

2. ನಾನು ದ್ವಿತೀಯ ಪಿಯುಸಿಯಲ್ಲಿ 2015ರಲ್ಲಿ ಅನುತ್ತೀರ್ಣವಾಗಿ 2020ರಲ್ಲಿ ಉತ್ತೀರ್ಣನಾಗಿದ್ದೇನೆ. ಈಗ ಬಿ.ಎಸ್ಸಿ ಮಾಡಬಹುದೇ?

ಹೆಸರು, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ ನೀವು ಬಿ.ಎಸ್ಸಿ ಕೋರ್ಸ್ ಮಾಡಬಹುದು. ಆದರೆ, ನಿಮ್ಮ ಸ್ವಾಭಾವಿಕ ಆಸಕ್ತಿ, ಅಭಿರುಚಿಯಂತೆ ಯಾವ ವೃತ್ತಿ ನಿಮಗೆ ಸರಿಹೊಂದುತ್ತದೆ ಎಂದು ಪರಿಶೀಲಿಸಿ, ಅದರಂತೆ ವೃತ್ತಿಯೋಜನೆಯನ್ನು ಮಾಡಿ, ನಂತರ ಕೋರ್ಸ್ ಆಯ್ಕೆ ಮಾಡುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

3. ನನಗೀಗ 33 ವರ್ಷಗಳಾಗಿದ್ದು, ಎಂಬಿಎ ಮಾಡಿ ಕಳೆದ 7 ವರ್ಷಗಳಿಂದ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ. ಆದರೆ, ಗುತ್ತಿಗೆ ಆಧಾರಿತ ಕೆಲಸಗಳಷ್ಟೇ ಸಿಗುತ್ತಿದ್ದು, ಜನವರಿಯಿಂದ ಕೆಲಸವಿಲ್ಲ. ಈ ಕಾರಣದಿಂದ ಖಿನ್ನತೆಗೆ ಒಳಗಾಗಿದ್ದೇನೆ. ಸರ್ಕಾರಿ ಅಥವಾ ಖಾಸಗಿ ವೃತ್ತಿಯನ್ನು ಅರಸಲು, ನಿಮ್ಮ ಮಾರ್ಗದರ್ಶನ ಬೇಕಾಗಿದೆ.

ಉದಯ್, ಬೆಂಗಳೂರು.

ಉದ್ಯೋಗಾರ್ಹತೆಯನ್ನು ವೃದ್ಧಿಸುವ ಎಂಬಿಎ ಪದವಿಯ ನಂತರವೂ ನೀವು ಸೂಕ್ತವಾದ ವೃತ್ತಿಯಲ್ಲಿ ತೊಡಗಿಸಿಕೊಳ್ಳದಿರುವುದಕ್ಕೆ ಕಾರಣಗಳೇನು ಎಂದು ವಿಶ್ಲೇಷಿಸಬೇಕು. ನೀವು ನೀಡಿರುವ ಕಿರುಮಾಹಿತಿಯಿಂದ ಇದು ಸಾಧ್ಯವಿಲ್ಲ; ಮೇಲ್ನೋಟಕ್ಕೆ, ಸರಿಯಾದ ಯೋಜನೆಯನ್ನು ಮಾಡದಿರುವುದು ಕಾರಣವಾಗಿರಬಹುದು.

ನಿಮ್ಮ ಈವರೆಗಿನ ಅನುಭವ ಯಾವ ಕ್ಷೇತ್ರದಲ್ಲಿದೆ ಎಂದು ತಿಳಿಸಿಲ್ಲ. ಸದ್ಯಕ್ಕೆ, ಹಲವಾರು ಉದ್ದಿಮೆಗಳ (ಐಟಿ, ಐಟಿಇಎಸ್, ಸಾಮಾಜಿಕ ಮಾಧ್ಯಮ, ಇ-ಕಾಮರ್ಸ್, ನವೋದ್ಯಮಗಳು ಇತ್ಯಾದಿ) ಆರ್ಥಿಕ ಹಿನ್ನಡೆಯಿಂದ ಉದ್ಯೋಗ ಮಾರುಕಟ್ಟೆ ಸಂಕಷ್ಟದಲ್ಲಿದೆ. ಹಾಗಾಗಿ, ಖಾಸಗಿ ವಲಯದ ಈ ಕ್ಷೇತ್ರಗಳನ್ನು ಬಿಟ್ಟು ಇನ್ನಿತರ ಕ್ಷೇತ್ರಗಳಲ್ಲಿ (ಮೂಲಭೂತ ಸೌಕರ್ಯಗಳು, ಆರೋಗ್ಯ, ಫಾರ್ಮ, ಬ್ಯಾಂಕಿಂಗ್, ಇನ್ವೆಸ್ಟ್‌ಮೆಂಟ್, ರೀಟೈಲ್, ಎಫ್‌ಎಂಜಿಸಿ ಇತ್ಯಾದಿ) ಪ್ರಯತ್ನಿಸಬಹುದು.

ಸರ್ಕಾರಿ ವಲಯದ ಕೆಪಿಎಸ್‌ಸಿ ಸೇರಿದಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇನ್ನೂ ನಿಮಗೆ ಅವಕಾಶವಿದೆ. ಯುಪಿಎಸ್‌ಸಿ ಪರೀಕ್ಷೆಗೆ, ಕೆಲವು ಜಾತಿ, ಪಂಗಡದವರಿಗೆ ವಯೋಮಿತಿಯಲ್ಲಿ ರಿಯಾಯಿತಿಯಿದೆ (ಗರಿಷ್ಠ ವಯೋಮಿತಿ 37 ವರ್ಷಗಳು) ಎನ್ನುವುದು ನಿಮ್ಮ ಗಮನದಲ್ಲಿರಲಿ. ನಿಮಗೆ ಆಸಕ್ತಿಯಿರುವ ಸರ್ಕಾರಿ ವಲಯದ ಇನ್ನಿತರ ಅವಕಾಶಗಳ ಮಾಹಿತಿಯನ್ನು ಕಲೆಹಾಕಿ, ಸಾಧ್ಯತೆಗಳನ್ನು ಪರಿಶೀಲಿಸಿ.

ಪ್ರಮುಖವಾಗಿ, ಎಂಬಿಎ ಪದವಿಯಲ್ಲಿ ಜೀವನಕ್ಕೂ, ವೃತ್ತಿಗೂ ಅಗತ್ಯವಾದ ಅನೇಕ ಮೂಲಭೂತ ಮೌಲ್ಯಗಳು, ಸೂತ್ರಗಳ ಮನದಟ್ಟಾಗುತ್ತದೆ. ಉದಾಹರಣೆಗೆ, ತರ್ಕಬದ್ಧ ಆಲೋಚನೆ, ಯೋಜನಾ ಶಕ್ತಿ, ಶಿಸ್ತು, ಸಮಯ ಪ್ರಜ್ಞೆ, ಸಕಾರಾತ್ಮಕ ಧೋರಣೆ, ಸ್ವಯ-ಪ್ರೇರಣೆ ಇತ್ಯಾದಿಗಳ ಸದುಪಯೋಗದಿಂದ ಖಿನ್ನತೆಯಿಂದ ಹೊರಬಂದು, ಸೂಕ್ತವಾದ ವೃತ್ತಿಯೋಜನೆಯಿಂದ, ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನ ಅಥವಾ ವೈಯಕ್ತಿಕ ಸಂದರ್ಶನ ಅಗತ್ಯವೆನಿಸಿದರೆ, ಈ ಅಂಕಣದ ಮೂಲಕ ಸಂಪರ್ಕಿಸಿ. ನಿಮ್ಮ ವ್ಯಕ್ತಿತ್ವವನ್ನು ಪರಿಣಾಮಕಾರಿಯಾಗಿ ಹೊರಹೊಮ್ಮುವ ಬಯೋಡೇಟಾ ರಚಿಸಿ ಮತ್ತು ಆತ್ಮವಿಶ್ವಾಸದಿಂದ ವೃತ್ತಿಯ ಸಂದರ್ಶನವನ್ನು ಎದುರಿಸಿ. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊಗಳನ್ನು ವೀಕ್ಷಿಸಿ: https://www.youtube.com/watch?v=WHZTFCmu3zg, https://www.youtube.com/watch?v=T_z3ngIeyWk

4. ನಾನು ಪಿಯುಸಿ ಮುಗಿಸಿದ್ದೇನೆ. ಫೊರೆನ್ಸಿಕ್ ಸೈನ್ಸ್ ಕ್ಷೇತ್ರದ ಅವಕಾಶಗಳು ಮತ್ತು ಕಾಲೇಜುಗಳ ಬಗ್ಗೆ ಮಾಹಿತಿ ನೀಡಿ.
ಹೆಸರು, ಊರು ತಿಳಿಸಿಲ್ಲ.

ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಬೇಡಿಕೆಯಲ್ಲಿರುವ ಕ್ಷೇತ್ರ. ಈ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ, ಬಿ.ಎಸ್ಸಿ (ವಿಧಿ ವಿಜ್ಞಾನ) ಕೋರ್ಸ್ ಮಾಡಬಹುದು.

ಈ ಕ್ಷೇತ್ರದಲ್ಲಿ ವೃತ್ತಿಯ ಯಶಸ್ಸಿಗೆ ಬೇಕಾಗುವ ಕೌಶಲಗಳೆಂದರೆ ತಾರ್ಕಿಕ ಯೋಚನಾ ಶಕ್ತಿ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ವಿವರಗಳ ಕಡೆ ಗಮನ, ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸಮಯದ ನಿರ್ವಹಣೆ ಇತ್ಯಾದಿ. ಹೆಚ್ಚಿನ ತಜ್ಞತೆಗಾಗಿ, ಎಂ.ಎಸ್ಸಿ ಮಾಡಬಹುದು. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು. ಬಿ.ಎಸ್ಸಿ (ವಿಧಿವಿಜ್ಞಾನ) ಕೋರ್ಸ್ ಮಾಡಬಹುದಾದ ಕಾಲೇಜುಗಳ ವಿವರಕ್ಕಾಗಿ ಗಮನಿಸಿ: https://collegedunia.com/bsc/forensic-science/karnataka-colleges

5. ನಾನು ಎಂಜಿನಿಯರಿಂಗ್ (ಮೆಕ್ಯಾನಿಕಲ್) ಮುಗಿಸಿ ಕೆಪಿಎಸ್‌ಸಿ ಪರೀಕ್ಷೆಗೆ ತಯಾರಾಗುತ್ತಿದ್ದೇನೆ. ನಾನು ಈಗ ಎಂಎ ಪದವಿ ಮಾಡಬಹುದೇ?
ಹೆಸರು, ಊರು ತಿಳಿಸಿಲ್ಲ.

ಕೆಪಿಎಸ್‌ಸಿ ಕಠಿಣವಾದ ಸ್ಪರ್ಧಾತ್ಮಕ ಪರೀಕ್ಷೆ. ಪರೀಕ್ಷೆಯ ಹಂತಗಳು, ಮಾದರಿ, ವಿಷಯಗಳು, ಪಠ್ಯಕ್ರಮ ಇತ್ಯಾದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸಂಬಂಧಪಟ್ಟ ಮತ್ತು ನಿಮಗಿಷ್ಟವಿರುವ ವಿಷಯದಲ್ಲಿ ಎಂಎ (ದೂರಶಿಕ್ಷಣ) ಮಾಡುವುದರಿಂದ, ಕೆಪಿಎಸ್‌ಸಿ ಪರೀಕ್ಷೆಗೆ ಅನುಕೂಲವಾಗಬಹುದು.

ಹೆಚ್ಚಿನ ಪ್ರಶ್ನೆಗಳಿಗೆ www.prajavani.net/career ನೋಡಿ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ವೈಸ್ ಇಂಟರ್ನ್‌ಶಿಪ್ (WISE-IPR) 2023

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಮಹಿಳಾ ವಿಜ್ಞಾನಿಗಳಿಗಾಗಿ ರೂಪಿಸಿರುವ ಒಂದು ವರ್ಷದ ಇಂಟರನ್‌ಶಿಪ್ ಕಾರ್ಯಕ್ರಮ 'ವೈಸ್ ಇಂಟರನ್‌ಶಿಪ್ (WISE-IPR)–2023'. ಈ ಒಂದು ವರ್ಷದ ಕಾರ್ಯಕ್ರಮ ಐಪಿಆರ್ ಬಗೆಗಿನ ಸೈದ್ಧಾಂತಿಕ(ಥಿಯಾರಿಟಿಕಲ್) ಜ್ಞಾನದ ಜೊತೆಗೆ, ದೇಶದಾದ್ಯಂತವಿರುವ ಕೇಂದ್ರಗಳಲ್ಲಿ ಉದ್ಯೋಗ ತರಬೇತಿಯನ್ನು ಕೊಡಿಸಲಿದೆ.

ಅರ್ಹತೆ: ಅಭ್ಯರ್ಥಿಗಳು ಎಂ.ಎಸ್ಸಿ (ಅನ್ವಯಿಕ ಅಥವಾ ಮೂಲ ವಿಜ್ಞಾನ)/ಬಿ.ಟೆಕ್/ಎಂಬಿಬಿಎಸ್ ಅಥವಾ ತತ್ಸಮಾನ ಪದವಿ/ಎಂ.ಫಿಲ್/ಎಂ.ಟೆಕ್/ ಎಂ.ಫಾರ್ಮ್/ಎಂ.ವಿ.ಎಸ್ಸಿ ಅಥವಾ ತತ್ಸಮಾನ ಪದವಿ/ಪಿ.ಎಚ್‌ಡಿ ಡಿಗ್ರಿ (ಮೂಲ ಅಥವಾ ಅನ್ವಯಿಕ ವಿಜ್ಞಾನ ಅಥವಾ ತತ್ಸಮಾನ)– ಇವುಗಳಲ್ಲಿ ಯಾವುದಾದರೂ ಒಂದರಲ್ಲಿ ಕೋರ್ಸ್ ಪೂರ್ಣಗೊಳಿಸಿ ಡಿಗ್ರಿಪಡೆದಿರಬೇಕು. ಈ ಪದವಿ ಪಡೆದಿರುವ 25 ರಿಂದ 45 ವರ್ಷದ ವಯೋಮಾನದವರು ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ಮಾಸಿಕ ₹35 ಸಾವಿರ

ಅರ್ಜಿ ಸಲ್ಲಿಸಲು ಕೊನೆ ದಿನ: ಮೇ 31, 2023

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ: www.b4s.in/praja/WSIE7

ಡಾ. ರೆಡ್ಡೀಸ್ ಫೌಂಡೇಶನ್ ಸಶಕ್ತ್ ಸ್ಕಾಲರ್‌ಶಿಪ್ 2023

ವಿವರ: ಡಾ. ರೆಡ್ಡೀಸ್ ಫೌಂಡೇಶನ್ ಸಶಕ್ತ್ ಸ್ಕಾಲರ್‌ಶಿಪ್ 2023, ವಿಜ್ಞಾನದಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಭಾರತದಾದ್ಯಂತ ಯುವತಿಯರನ್ನು ಪ್ರೋತ್ಸಾಹಿಸಲು ಡಾ. ರೆಡ್ಡೀಸ್ ಫೌಂಡೇಶನ್ (ಎನ್‌ಜಿಒ) ನೀಡುತ್ತಿರುವ ಅವಕಾಶವಾಗಿದೆ.


ಅರ್ಹತೆ: ಬಿ.ಟೆಕ್, ಎಂ.ಬಿ.ಬಿ.ಎಸ್. ಅಥವಾ ನ್ಯಾಚುರಲ್/ಪ್ಯೂರ್ ಸೈನ್ಸ್‌ನಲ್ಲಿ ಬಿ.ಎಸ್‌ಸಿ ಪದವಿಯನ್ನು ಆಯ್ಕೆ ಮಾಡಿಕೊಂಡ ಭಾರತೀಯ ವಿದ್ಯಾರ್ಥಿನಿಯರಿಗೆ ಮುಕ್ತವಾಗಿದೆ. ಅರ್ಜಿದಾರರು ಶೈಕ್ಷಣಿಕ ಶ್ರೇಷ್ಠತೆಯ ಉತ್ತಮ ದಾಖಲೆಯನ್ನು ಹೊಂದಿರಬೇಕು

ಆರ್ಥಿಕ ನೆರವು: 3 ವರ್ಷಗಳಿಗೆ ವಾರ್ಷಿಕ ₹ 80,000.

ಅರ್ಜಿ ಸಲ್ಲಿಸಲು ಕೊನೆ ದಿನ: 30-11-2023

ಅರ್ಜಿ ಸಲ್ಲಿಸಲು ಕೊನೆ ದಿನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.


ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: Short Url: www.b4s.in/praja/RFTS3



❦ ಸುಭಾಷಿತ ❦
ಶಿಕ್ಷಣ ಎಂಬುದು ಜ್ಞಾನದ ಮರದಿಂದ ಹಣ್ಣನ್ನು ಸಂಗ್ರಹಿಸಲು ಇರುವ ಏಣಿಯೇ ವಿನಾ ಅದೇ ಹಣ್ಣಲ್ಲ.
-ಆಲ್ಬರ್ಟ್ ಐನ್‌ಸ್ಟೀನ್

ಕಾಶ್ಮೀರದಲ್ಲಿ ಜಿ20 ಸಭೆ ಸರಿದಾರಿಯಲ್ಲಿ ಸ್ಪಷ್ಟ ಸಂದೇಶ

ಜಮ್ಮು ಮತ್ತು ಕಾಶ್ಮೀರ, ಲಡಾಖ್ ಹಾಗೂ ಅರುಣಾಚಲ ಪ್ರದೇಶದಲ್ಲಿ ಜಿ-20 ಗುಂಪಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಭಾರತವು ಇಡೀ ವಿಶ್ವಕ್ಕೆ ಬಲವಾದ ಸಂದೇಶವೊಂದನ್ನು ರವಾನಿಸುತ್ತಿದೆ. ಈ ಕೇಂದ್ರಾಡಳಿತ ಪ್ರದೇಶಗಳು ಹಾಗೂ ರಾಜ್ಯದ ವಿಚಾರದಲ್ಲಿ ತಾನು ಸಾರ್ವಭೌಮ ಎಂಬುದನ್ನು ದೇಶವು ಸ್ಪಷ್ಟವಾಗಿ ಹೇಳುತ್ತಿದೆ. ಈ ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯದ ವಿಚಾರದಲ್ಲಿ ಪಾಕಿಸ್ತಾನ ಹಾಗೂ ಚೀನಾ ಹಿಂದಿನಿಂದಲೂ ತಗಾದೆ ತೆಗೆಯುತ್ತಿವೆ. ಹೀಗಾಗಿ, ಭಾರತ ರವಾನಿಸಿರುವ ಈ ಸಂದೇಶವು ಬಹಳ ಮಹತ್ವದ್ದು. ಜಿ-20 ಗುಂಪಿನ ಈ ವರ್ಷದ ಅಧ್ಯಕ್ಷತೆಯನ್ನು ಹೊಂದಿರುವ ಭಾರತವು ಸರಿಸುಮಾರು 200 ಸಭೆಗಳನ್ನು, ಕಾರ್ಯಕ್ರಮಗಳನ್ನು ದೇಶದ ಬೇರೆ ಬೇರೆ ನಗರಗಳಲ್ಲಿ ಆಯೋಜಿಸುತ್ತಿದೆ. ಅರುಣಾಚಲ ಪ್ರದೇಶದ ಇಟಾನಗರದಲ್ಲಿ, ಲಡಾಖ್‌ನಲ್ಲಿ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಸಭೆಗಳು ನಡೆದಿವೆ. ಶ್ರೀನಗರದಲ್ಲಿ ಸೋಮವಾರದಿಂದ ಸಭೆಯೊಂದು ನಡೆಯಲಿದೆ. ಈ ಸಭೆಗಳಿಗೆ ಚೀನಾ ಮತ್ತು ಪಾಕಿಸ್ತಾನ ತಕರಾರು ಎತ್ತಿವೆ. ಅರುಣಾಚಲ ಪ್ರದೇಶದ ಸರಿಸುಮಾರು 90 ಸಾವಿರ ಚದರ ಕಿ.ಮೀ. ಪ್ರದೇಶವನ್ನು ಚೀನಾ ತನ್ನದೆಂದು ಹೇಳುತ್ತಿದೆ. ಅಲ್ಲದೆ, ಲಡಾಖ್‌ನ ಅಕ್ಸಾಯ್ ಚಿನ್ ಪ್ರದೇಶವನ್ನು ಆಕ್ರಮಿಸಿಕೊಂಡಿದೆ. ಲಡಾಖ್‌ನಲ್ಲಿ 2020ರ ನಂತರ ತಾನು ಕಬಳಿಸಿಕೊಂಡಿರುವ ಹಲವು ಪ್ರದೇಶಗಳಿಂದ ಹಿಂದೆ ಸರಿಯಲು ಒಪ್ಪುತ್ತಿಲ್ಲ.



ಜಮ್ಮು ಮತ್ತು ಕಾಶ್ಮೀರ, ಲಡಾಖ್ ಹಾಗೂ ಅರುಣಾಚಲ ಪ್ರದೇಶದಲ್ಲಿನ ಜನರ ಹೃದಯವನ್ನು ಗೆಲ್ಲುವುದಕ್ಕೆ ಆಳುವವರು ಹೆಚ್ಚಿನ ಗಮನ ನೀಡಬೇಕು

ಜಮ್ಮು ಮತ್ತು ಕಾಶ್ಮೀರದ ಮೇಲೆ ಹಕ್ಕು ಸಾಧಿಸಲು ಪಾಕಿಸ್ತಾನ ನಡೆಸುತ್ತಿರುವ ಪ್ರಯತ್ನ ಗುಟ್ಟಾಗಿರುವಂಥದ್ದಲ್ಲ. ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ತಾನ ಆಕ್ರಮಿಸಿಕೊಂಡಿದೆ. ಜಿ-20 ಗುಂಪಿನ ಸದಸ್ಯ ದೇಶವಾಗಿರುವ ಚೀನಾ, ಅರುಣಾಚಲ ಪ್ರದೇಶ ಮತ್ತು ಲಡಾಖ್‌ನಲ್ಲಿ ನಡೆದ ಸಭೆಗಳಿಂದ ದೂರ ಉಳಿಯಲು ತೀರ್ಮಾನಿಸಿತು. ಶ್ರೀನಗರದಲ್ಲಿ ನಡೆಯಲಿರುವ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಜಂಟಿ ಕಾರ್ಯಪಡೆಯ ಸಭೆಯಲ್ಲಿಯೂ ಭಾಗವಹಿಸುವುದಿಲ್ಲ ಎಂದು ಅದು ಹೇಳಿದೆ. ಅದೇ ರೀತಿ, ಪಾಕಿಸ್ತಾನಕ್ಕೆ ಬೆಂಬಲ ಸೂಚಿಸುವ ಉದ್ದೇಶದಿಂದ, ಶ್ರೀನಗರದ ಸಭೆಯಲ್ಲಿ ಟರ್ಕಿ ಕೂಡ ಭಾಗವಹಿಸುತ್ತಿಲ್ಲ. ಭಾರತವು ಸಭೆಯನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಆಯೋಜಿಸಿದ್ದಕ್ಕೆ ಸೌದಿ ಅರೇಬಿಯಾ ದೇಶವು ಆರಂಭಿಕ ಹಂತದಲ್ಲಿ ಆಕ್ಷೇಪ ಎತ್ತಿತ್ತು ಎನ್ನಲಾಗಿದೆ. ಆದರೆ ಅದು ಈಗ ಮನಸ್ಸು ಬದಲಾಯಿಸಿದೆ ಎಂಬ ವರದಿಗಳು ಇವೆ. ಜಾಗತಿಕ ಮಟ್ಟದ ಕಾರ್ಯಕ್ರಮಗಳನ್ನು ಜಮ್ಮು ಮತ್ತು ಕಾಶ್ಮೀರ, ಲಡಾಖ್, ಅರುಣಾಚಲ ಪ್ರದೇಶದಲ್ಲಿ ಆಯೋಜಿಸುವ ಮೂಲಕ ಭಾರತವು ಸರಿಯಾದ ಹೆಜ್ಜೆಯನ್ನು ಇರಿಸಿದೆ. ಭಾರತದ ಭೂಭಾಗವೊಂದನ್ನು ಅನ್ಯ ರಾಷ್ಟ್ರಗಳು ತಮ್ಮದೆಂದು ಹೇಳಿಕೊಂಡ ಮಾತ್ರಕ್ಕೆ, ಭಾರತವು ತಾನು ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದನ್ನು, ಅಂತರರಾಷ್ಟ್ರೀಯ ಅತಿಥಿಗಳನ್ನು ಆಹ್ವಾನಿಸಿ ಅಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವುದನ್ನು ನಿಲ್ಲಿಸಲಾಗದು ಎಂಬ ಸಂದೇಶವು ರವಾನೆಯಾಗಿದೆ.

ಈ ಪ್ರದೇಶಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಇನ್ನೂ ಹಲವು ಸಂದೇಶಗಳನ್ನು ಕೇಂದ್ರ ಸರ್ಕಾರ ರವಾನಿಸಿದೆ. ಈ ಕಾರ್ಯಕ್ರಮಗಳ ನೆವದಲ್ಲಿ ಈ ಪ್ರದೇಶಗಳಲ್ಲಿ ಮೂಲಸೌಕರ್ಯ ಉತ್ತಮಗೊಳ್ಳುತ್ತದೆ. ಆತಿಥ್ಯ ವಹಿಸುವ ನಗರಗಳು ಹಾಗೂ ಆ ನಗರಗಳ ಸುತ್ತಲಿನ ಕೆಲವು ಪ್ರದೇಶಗಳು ಇದುವರೆಗೆ 'ಸಂಘರ್ಷಮಯ ಪ್ರದೇಶಗಳು' ಎಂಬ ಚಿತ್ರಣ ಪಡೆದುಕೊಂಡಿದ್ದರೂ, ಕಾರ್ಯಕ್ರಮಗಳ ಕಾರಣದಿಂದಾಗಿ ಮಾಧ್ಯಮಗಳ ಮೂಲಕ ಒಳ್ಳೆಯ ಪ್ರಚಾರ ಪಡೆಯಬಹುದು. ಆಗ ಅಲ್ಲಿ ಪ್ರವಾಸೋದ್ಯಮ ಚಿಗುರುತ್ತದೆ. ಅದು ಸ್ಥಳೀಯರಿಗೆ ಒಳ್ಳೆಯ ಆದಾಯ ಮೂಲವಾಗುತ್ತದೆ. ಸ್ಥಳೀಯ ಅರ್ಥ ವ್ಯವಸ್ಥೆಗೆ ಬಲ ಸಿಗುತ್ತದೆ. ಜಮ್ಮು ಮತ್ತು ಕಾಶ್ಮೀರ, ಅರುಣಾಚಲ ಪ್ರದೇಶ ಮತ್ತು ಲಡಾಖ್‌ನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಭಾರತವು ತನ್ನ ನಿಲುವನ್ನು ಇನ್ನಷ್ಟು ದೃಢವಾಗಿ ಜಗತ್ತಿಗೆ ಸಾರಿದೆ. ಆದರೆ, ಇದರ ಜೊತೆಯಲ್ಲೇ ಭಾರತವು ಅಲ್ಲಿ ತನ್ನ ಸಾರ್ವಭೌಮತ್ವವನ್ನು ಬಲಪಡಿಸಿಕೊಳ್ಳಲು ಇನ್ನೂ ಹಲವು ಕೆಲಸಗಳನ್ನು ಮಾಡಬೇಕಿದೆ. ಈ ಪ್ರದೇಶಗಳಲ್ಲಿನ ಜನರ ಹೃದಯವನ್ನು ಗೆಲ್ಲುವುದಕ್ಕೆ ಆಳುವವರು ಹೆಚ್ಚಿನ ಗಮನ ನೀಡಬೇಕು. ದೇಶದ ಮುಖ್ಯವಾಹಿನಿಯಲ್ಲಿ ಈ ಪ್ರದೇಶಗಳ ಜನರ ಪಾಲ್ಗೊಳ್ಳುವಿಕೆ ಇನ್ನಷ್ಟು ಹೆಚ್ಚಬೇಕು. ಹೀಗಾಗಿ, ಅಂತರರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುವುದು ಸರಿದಾರಿಯಲ್ಲಿ ಇರಿಸಿರುವ ಸಣ್ಣ ಹೆಜ್ಜೆ ಮಾತ್ರ.

ದಿನದ ಟ್ವೀಟ್


ಇರಲಿ ಬದ್ಧತೆ



ಕೊರೊನಾ ಸೋಂಕಿನ ಅವೈಜ್ಞಾನಿಕ ನಿಭಾವಣೆಯಿಂದ ಜನತೆ ನರಳಿದ್ದಕ್ಕೆ, ಆರ್ಥಿಕತೆಯೂ ಹೊಡೆತಕ್ಕೀಡಾದುದಕ್ಕೆ ಚುನಾವಣೆಯಲ್ಲಿ ತಕ್ಕ ಉತ್ತರವನ್ನು ನೀಡಿರುವುದು ಸ್ಪಷ್ಟ. ಈ ಪಾಠವನ್ನು ಹೊಸ ಸರ್ಕಾರವು ನೆನಪಿನಲ್ಲಿಟ್ಟುಕೊಂಡು, ವೈಜ್ಞಾನಿಕವಾಗಿ ವರ್ತಿಸುವ ಬದ್ಧತೆಯನ್ನು ತೋರಬೇಕು.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ



ಬೆಂಗಳೂರು ನಗರದಲ್ಲಿ ಸುರಿದ ಭಾರೀ ಮಳೆಯಿಂದ ಕೆ.ಆರ್.ವೃತ್ತದ ಅಂಡರ್ ಪಾಸ್‌ನಲ್ಲಿ ಮಳೆನೀರಿಗೆ ಸಿಲುಕಿ ಇನ್ಫೊಸಿಸ್ ಉದ್ಯೋಗಿ ಭಾನುರೇಖಾ ಎಂಬ ಯುವತಿ ಸಾವನ್ನಪ್ಪಿರುವ ಸುದ್ದಿ ತಿಳಿದು ತೀವ್ರ ಆಘಾತವಾಯಿತು. ರಭಸ ಮಳೆಯ ಮುನ್ನೆಚ್ಚರಿಕೆ ಇದ್ದರೂ ಬಿಬಿಎಂಪಿ ಆಡಳಿತ ಎಚ್ಚೆತ್ತುಕೊಳ್ಳದೇ ಇರುವುದು ನಿರ್ಲಕ್ಷ್ಯದ ಪರಮಾವಧಿ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಮುಖಂಡ

25 ವರ್ಷಗಳ ಹಿಂದೆ
ಶುಕ್ರವಾರ, 22-5-1998

- **ಉಪಚುನಾವಣೆ: ಬಂಡಾಯದ ಅಲೆ**

ಬೆಂಗಳೂರು, ಮೇ 21– ರಾಜ್ಯದ ಏಳು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಹುರಿಯಾಳುಗಳ ಹೋರಾಟಕ್ಕೆ ಈಗ ಕಣ ಸಿದ್ಧವಾಗಿದೆ.

ಜೂನ್ 3ರಂದು ನಡೆಯಲಿರುವ ಈ ಚುನಾವಣೆಗೆ ನಾಮಪತ್ರ ಹಿಂತೆಗೆದುಕೊಂಡ ನಂತರ ಮೂವರು ಮಹಿಳೆಯರೂ ಸೇರಿದಂತೆ ಒಟ್ಟು 41 ಮಂದಿ ಅಭ್ಯರ್ಥಿಗಳು ಅಂತಿಮವಾಗಿ ಸ್ಪರ್ಧೆಯಲ್ಲಿ ಉಳಿದಿದ್ದಾರೆ.

ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಹಾಗೂ ಪಕ್ಷೇತರರು ಕಣದಲ್ಲಿರುವುದರಿಂದ ಮೇಲ್ನೋಟಕ್ಕೆ ಬಹುಕೋನ ಸ್ಪರ್ಧೆ ಕಂಡುಬಂದರೂ, ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಜನತಾದಳ ಹಾಗೂ ಬಿಜೆಪಿ-ಲೋಕಶಕ್ತಿ ಮೈತ್ರಿಯ ಉಮೇದುವಾರರು ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧೆಯಲ್ಲಿರುವುದರಿಂದ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

- **ಚೀನಾ-ಪಾಕ್ ಜತೆ ಉತ್ತಮ ಬಾಂಧವ್ಯಕ್ಕೆ ಭಾರತ ಒಲವು**

ನವದೆಹಲಿ, ಮೇ 21– ಭಾರತವು ಅಣ್ವಸ್ತ್ರ ಸಾಧನಗಳ ಪರೀಕ್ಷೆ ನಡೆಸುವುದನ್ನು ಸ್ಥಗಿತಗೊಳಿಸುತ್ತಿದೆ. ಪಾಕಿಸ್ತಾನದ ಜತೆ ಯುದ್ಧ ಮಾಡುವ ಉದ್ದೇಶವು ಭಾರತಕ್ಕಿಲ್ಲ. ಅದೇ ಹೊತ್ತಿಗೆ ಚೀನಾದ ಜತೆ ಉತ್ತಮ ಬಾಂಧವ್ಯವನ್ನು ಬಯಸುತ್ತದೆ ಎಂದು ಭಾರತ ಇಂದು ಸ್ಪಷ್ಟಪಡಿಸಿತು.

ಅಣ್ವಸ್ತ್ರ ಪರೀಕ್ಷೆಯ ನಂತರ ವಿದೇಶಗಳಿಂದ ವಿಶೇಷವಾಗಿ ಚೀನಾ ಮತ್ತು ಪಾಕಿಸ್ತಾನದ ಪ್ರತಿಕ್ರಿಯೆಗಳ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಪ್ರಿನ್ಸಿಪಲ್ ಸೆಕ್ರೆಟರಿ ಬ್ರಿಜೇಶ್ ಮಿಶ್ರ ಪತ್ರಿಕಾಗೋಷ್ಠಿ ಕರೆದು ಮಾತನಾಡಿದರು.

50 ವರ್ಷಗಳ ಹಿಂದೆ
ಮಂಗಳವಾರ, 22-5-1973

- **ಲಖನೌ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳಿಂದ ಅಗ್ನಿಸ್ಪರ್ಶ**

ಲಖನೌ, ಮೇ 21– ವಿಶ್ವವಿದ್ಯಾನಿಲಯದ ಹಲವು ಕಟ್ಟಡಗಳು, ಇಂದು ಬೆಳಿಗ್ಗೆ ವಿದ್ಯಾರ್ಥಿ ತಂಡಗಳು ಹಚ್ಚಿದ ಬೆಂಕಿಯಿಂದ ಉರಿಯುತ್ತಿದ್ದಂತೆ, ಲಖನೌ ವಿಶ್ವವಿದ್ಯಾನಿಲಯದ ಆವರಣಕ್ಕೆ ಸೇನೆ ಪ್ರವೇಶಿಸಿ, ಪಹರೆ ಕೈಗೊಂಡಿತು.

ಬೆಂಕಿ ಆರಿಸಲು ಆರೇಳು ಅಗ್ನಿ ಶಾಮಕಗಳು ಶ್ರಮಿಸುತ್ತಿದ್ದಾಗ ಉಪಕುಲಪತಿ ಗೋಪಾಲ್ ತ್ರಿಪಾಠಿ ಅವರು ಇಂದು ಮಧ್ಯಾಹ್ನ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ವಿಶ್ವವಿದ್ಯಾನಿಲಯವನ್ನು ಅನಿರ್ದಿಷ್ಟ ಕಾಲ ಮುಚ್ಚುವುದಾಗಿ ಪ್ರಕಟಿಸಿದರು.

ಪರೀಕ್ಷೆಗಾಗಿ ಬೆಳಿಗ್ಗೆ ಬಂದ ವಿದ್ಯಾರ್ಥಿಗಳು, ಹತ್ತಿರದ ದೇವಸ್ಥಾನವೊಂದರಲ್ಲಿ ನಡೆಯುತ್ತಿದ್ದ ಜಾತ್ರೆಗಾಗಿ ರಜವಿತ್ತು, ಪರೀಕ್ಷೆಯನ್ನು ಮುಂದೆ ಹಾಕಲಾಗಿದೆ ಎಂದು ತಿಳಿಸಿದಾಗ ಗಲಭೆ ಪ್ರಾರಂಭವಾಯಿತು.

- **ರೇಷನ್‌ಕಾರ್ಡುಗಳ ಮೂಲಕ ಸೀಮೆಎಣ್ಣೆ ಹಂಚಿಕೆ ಶೀಘ್ರದಲ್ಲೇ**

ಬೆಂಗಳೂರು, ಮೇ 21– ಬೆಂಗಳೂರಿನಲ್ಲಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸೀಮೆಎಣ್ಣೆಯನ್ನು ರೇಷನ್ ಕಾರ್ಡುಗಳ ಮೂಲಕ ಹಂಚಲು ಇಷ್ಟರಲ್ಲೇ ವ್ಯವಸ್ಥೆ ಮಾಡುವುದಾಗಿ ಆಹಾರ ಮತ್ತು ನಿತ್ಯೋಪಯೋಗಿ ವಸ್ತುಗಳ ಪೂರೈಕೆ ಖಾತೆಯ ರಾಜ್ಯ ಸಚಿವೆ ಶ್ರೀಮತಿ ಇ.ಇ.ವಾಜ್ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು. ಹಳ್ಳಿಗಳಲ್ಲಿ ಕೂಡ ಪ್ರತಿಯೊಂದು ಮನೆಗೂ ಕನಿಷ್ಠ ಪ್ರಮಾಣದಲ್ಲಿ ಸೀಮೆಎಣ್ಣೆ ದೊರೆಯುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಲೈಂಗಿಕ ದೌರ್ಜನ್ಯದ ಆರೋಪಿಯ ವಿರುದ್ಧ ತೊಡೆ ತಟ್ಟಿದ ವಿಶ್ವಮಾನ್ಯ ಪೈಲ್ವಾನರು

ಕ್ರೀಡೆಗಂಟಿದ ಪೀಡೆಗೆ ಇಲ್ಲವೇ ಮುಕ್ತಿ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಹರಿಯಾಣ ರಾಜ್ಯದ ಝಜ್ಜರ್ ಎಂಬ ಹಳ್ಳಿಯ ಹುಡುಗ ಬಜರಂಗ್ ಪೂನಿಯಾ. ರೈತಾಪಿ ಕುಟುಂಬದಲ್ಲಿ ಕ್ರೀಡಾಪಟುವಾಗಿ ಬೆಳೆಯುವಷ್ಟು ದುಡ್ಡು ಇರದಿದ್ದರೂ ಬಜರಂಗ್ ಎತ್ತರದ ಸಾಧನೆ ಮಾಡಿದರು. ಭಾರತಕ್ಕೆ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್, 2020ರ ಟೋಕಿಯೊ ಒಲಿಂಪಿಕ್ಸ್ ಸೇರಿದಂತೆ ಹಲವು ಪ್ರತಿಷ್ಠಿತ ಕೂಟಗಳ ಪದಕಗಳನ್ನು ಗೆದ್ದುಕೊಟ್ಟರು. ಆದರೆ ಇದೀಗ ಆ ಪದಕಗಳನ್ನೇ ಹಿಂತಿರುಗಿಸುವುದಾಗಿ ಹೇಳಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ನಡೆದಿರುವ ಧರಣಿಯ ಮುಂಚೂಣಿಯಲ್ಲಿ ಬಜರಂಗ್ ಇದ್ದಾರೆ. ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಬ್ರಿಜ್ ಭೂಷಣ್ ಹಾಗೂ ಕೆಲವು ಕೋಚ್‌ಗಳ ಮೇಲೆ ಇದೆ. ಒಂದು ತಿಂಗಳಿನಿಂದ ನವದೆಹಲಿಯಲ್ಲಿ ಒಲಿಂಪಿಯನ್ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ವಿನೇಶಾ ಫೋಗಟ್, ರವಿ ದಹಿಯಾ ಹಾಗೂ ಬಜರಂಗ್ ನೇತೃತ್ವದಲ್ಲಿ ಕುಸ್ತಿಪಟುಗಳು ಧರಣಿ ನಡೆಸುತ್ತಿದ್ದಾರೆ. ಸುಪ್ರೀಂ ಕೋರ್ಟ್ ಸೂಚನೆಯ ಮೇರೆಗೆ ಪೊಲೀಸರು ಬ್ರಿಜ್ ಭೂಷಣ್ ಮೇಲೆ ಎರಡು ಎಫ್‌ಐಆರ್ ದಾಖಲಿಸಿ ಹದಿನೈದು ದಿನಗಳೇ ಕಳೆದಿವೆ. ಅದರಲ್ಲಿ ಒಂದು ದೂರು ಪೋಕ್ಸೊ ಕಾಯ್ದೆಯಡಿ ದಾಖಲಾಗಿದೆ. ಆದರೂ ಬಿಜೆಪಿಯ ಪ್ರಭಾವಿ ಸಂಸದರಾಗಿರುವ ಬ್ರಿಜ್ ಭೂಷಣ್ ಅವರನ್ನು ದೆಹಲಿ ಪೊಲೀಸರು ಈವರೆಗೆ ಬಂಧಿಸಿಲ್ಲ.

ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತಿದೆ. ಅಷ್ಟೇ ಅಲ್ಲದೆ ಧರಣಿನಿರತರಲ್ಲಿ ಕೆಲವರು ಬಿಜೆಪಿಯ ಪ್ರತಿನಿಧಿಗಳೇ ಆಗಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ವಿಶ್ವಮಟ್ಟದಲ್ಲಿ ಪದಕ ಗೆದ್ದಿರುವ ಪೈಲ್ವಾನರು ಬೀದಿಗಿಳಿದರೂ ಆರೋಪಿಯನ್ನು ಬಂಧಿಸದಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ. ಹೋದ ಜನವರಿಯಲ್ಲಿಯೇ ನಾಲ್ಕು ದಿನಗಳ ಕಾಲ ಈ ಕುಸ್ತಿಪಟುಗಳು ಜಂತರ್ ಮಂಥರ್‌ನಲ್ಲಿ ಧರಣಿ ನಡೆಸಿದ್ದರು. ಆಗ ಸರ್ಕಾರಕ್ಕೆ ಆಗುವ ಮುಜುಗರ ತಪ್ಪಿಸಲು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ತನಿಖೆ ನಡೆಸುವ ಭರವಸೆ ನೀಡಲಾಗಿತ್ತು. ಮೇರಿ ಕೋಮ್ ನೇತೃತ್ವದ ಸಮಿತಿಯು ನೀಡಿರುವ ವರದಿಯನ್ನು ಕೇಂದ್ರ ಕ್ರೀಡಾ ಸಚಿವಾಲಯ ಇನ್ನೂ ಬಹಿರಂಗಗೊಳಿಸಿಲ್ಲ.

ಬಹುಶಃ ಕ್ರೀಡಾಪಟುಗಳ ಸಮುದಾಯವು ರಾಜಕೀಯ ಪಕ್ಷಗಳ ಭವಿಷ್ಯವನ್ನು ನಿರ್ಧರಿಸುವ ಮತಬ್ಯಾಂಕ್ ಅಲ್ಲದಿರುವುದು ಕೂಡ ಇಂತಹ ಅಸೀಮ ನಿರ್ಲಕ್ಷ್ಯಕ್ಕೆ ಕಾರಣವಿರಬಹುದು. ಅಲ್ಲದೆ ಈ ಹಿಂದೆ ಬೇರೆ ಬೇರೆ ಕ್ಷೇತ್ರಗಳಲ್ಲಿ ನಡೆದಂತಹ ಲೈಂಗಿಕ ದೌರ್ಜನ್ಯ ಪ್ರಕರಣಗಳಂತೆ ಇದೂ ಒಂದು ಎಂಬ ಉಡಾಫೆಯೂ ಆಡಳಿತಾರೂಢರಲ್ಲಿ ಇರಬಹುದು.

ಆದರೆ ಕ್ರೀಡಾಪಟುಗಳು ದೇಶದ ಸಾಂಸ್ಕೃತಿಕ ರಾಯಭಾರಿಗಳಾಗಿರುವುದರಿಂದ ಮತಬ್ಯಾಂಕ್‌ಗಿಂತಲೂ ಪರಿಣಾಮಕಾರಿಯಾಗಬಲ್ಲರು. ದೇಶದ ಆಡಳಿತ ವ್ಯವಸ್ಥೆ ಹಾಗೂ ಮಹಿಳಾ ಕ್ರೀಡಾಪಟುಗಳು ಅಸುರಕ್ಷಿತರಾಗಿದ್ದಾರೆ ಎಂಬ ಸಂದೇಶ ಈಗಾಗಲೇ ಹೋಗಿದೆ. ಇನ್ನು ಬೇರೆ ಪ್ರಕರಣಗಳಂತೆ ಇದು ಕೂಡ ಮೂಲೆಗುಂಪಾದರೆ ದೇಶದ ಕುಸ್ತಿ ಕ್ರೀಡೆಯು ಮಣ್ಣುಮುಕ್ಕುವ ಅಪಾಯವಿದೆ. ಹೆಣ್ಣುಮಕ್ಕಳು ಕ್ರೀಡೆಯಿಂದ ವಿಮುಖರಾಗುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಭಾರತಕ್ಕೆ ಒಲಿಂಪಿಕ್ ಕೂಟಗಳಲ್ಲಿ ಹಾಕಿ ಕ್ರೀಡೆ ಬಿಟ್ಟರೆ ಅತಿ ಹೆಚ್ಚು ಪದಕಗಳನ್ನು ಗೆದ್ದುಕೊಟ್ಟ ಶ್ರೇಯ ಕುಸ್ತಿಪಟುಗಳದ್ದು. ಎರಡು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಜಯಿಸಿದ್ದಾರೆ. ಇದರಲ್ಲಿ ಮಹಿಳೆಯರ ವಿಭಾಗದಲ್ಲಿರುವುದು ಒಂದು ಕಂಚು ಮಾತ್ರ.

ಹರಿಯಾಣದಲ್ಲಿ ಮಹಿಳೆಯರ ಮೇಲಿದ್ದ ಅತ್ಯಂತ ಕಠಿಣ ಕಟ್ಟುಪಾಡುಗಳನ್ನು ಮೀರಿದ ಫೋಗಟ್ ಕುಟುಂಬದ ಕುಡಿಗಳಾದ ಗೀತಾ, ಬಬಿತಾ, ವಿನೇಶಾ, ಸಂಗೀತಾ ಅವರು ದಂತಕಥೆಯೇ ಆಗಿದ್ದಾರೆ. ಅವರ 'ದಂಗಲ್' ಯಶೋಗಾಥೆಯಿಂದ ಪ್ರಭಾವಿತರಾದ ಹೆಣ್ಣುಮಕ್ಕಳು ಕುಸ್ತಿಯತ್ತ ಆಕರ್ಷಿತರಾದರು. ಇದರಲ್ಲಿ ಗ್ರಾಮೀಣ ಪ್ರತಿಭೆಗಳ ಸಂಖ್ಯೆ ಹೆಚ್ಚು. ಆದರೆ ಸುರಕ್ಷತೆ, ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆ ಇಲ್ಲದ ಕಡೆ ಪಾಲಕರು ತಮ್ಮ ಮಕ್ಕಳನ್ನು ಕಳಿಸಲು ಒಪ್ಪುತ್ತಾರೆಯೇ?

ಕಳೆದ ಹತ್ತು ವರ್ಷಗಳಿಂದ ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಲೈಂಗಿಕ ಶೋಷಣೆಗೊಳಗಾಗಿರುವ 10–20 ಹುಡುಗಿಯರು ತಮಗೆ ಗೊತ್ತಿದ್ದಾರೆ, ಆದರೆ ತಮ್ಮ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ದನಿಯೆತ್ತುವಷ್ಟು ಶಕ್ತಿ ಈ ಮಕ್ಕಳಿಗೆ ಇಲ್ಲ, ಲಖನೌನಲ್ಲಿ ನಡೆದ ರಾಷ್ಟ್ರೀಯ ತರಬೇತಿ ಶಿಬಿರಗಳಲ್ಲಿ ಕೆಲವು ಕೋಚ್‌ಗಳೂ ಮಹಿಳಾ ಪಟುಗಳನ್ನು ಲೈಂಗಿಕವಾಗಿ ಶೋಷಣೆ ಮಾಡಿರುವ ಸಾಕ್ಷ್ಯಾಧಾರಗಳು ತಮ್ಮ ಬಳಿ ಇವೆ ಎಂದೂ ವಿನೇಶಾ ಫೋಗಟ್ ಆರೋಪಿಸಿದ್ದಾರೆ.

ಇನ್ನೊಂದೆಡೆ, ಕ್ರೀಡಾಕ್ಷೇತ್ರದಲ್ಲಿ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಹಲವಾರು ವರ್ಷಗಳಿಂದ ನಡೆಯುತ್ತಲೇ ಇವೆ. ಕ್ರೀಡಾಪಟುಗಳನ್ನು ಪೋಷಿಸಿ ಬೆಳೆಸಬೇಕಾದ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ವ್ಯಾಪ್ತಿಯಲ್ಲಿಯೇ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗಿವೆ.



2010ರಿಂದ 2019ರವರೆಗೆ 24 ಸಾಯ್ ಕೇಂದ್ರಗಳಲ್ಲಿ 45 ಪ್ರಕರಣಗಳು ವರದಿಯಾಗಿದ್ದವು. ಆ ಪೈಕಿ 29 ದೂರುಗಳು ಕೋಚ್‌ಗಳ ವಿರುದ್ಧ ದಾಖಲಾಗಿದ್ದವು. ಅಸ್ಸಾಂನ ಸಾಯ್ ವಸತಿ ನಿಲಯದಲ್ಲಿ ತರಬೇತಿ ಪಡೆಯುತ್ತಿರುವ ಬಾಲಕಿಯರು ಈಜು ಕೋಚ್ ಮೃಣಾಲ್ ಬಸುಮಾತ್ರೆ ತಮ್ಮನ್ನು ಲೈಂಗಿಕವಾಗಿ ಶೋಷಿಸಿದ್ದಾರೆ ಎಂದು ಎರಡು ದಿನಗಳ ಹಿಂದಷ್ಟೇ ಪೊಲೀಸರಿಗೆ ದೂರು ನೀಡಿದ್ದಾರೆ.

ಇಂತಹ ಪ್ರಕರಣಗಳು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ಅಮೆರಿಕದಂತಹ ದೇಶದಲ್ಲಿಯೂ ಇವೆ. ಅಲ್ಲಿಯೂ ಇಂತಹ ಪ್ರಕರಣಗಳಲ್ಲಿ ಪೊಲೀಸ್ ವ್ಯವಸ್ಥೆಯು ನಿರ್ಲಕ್ಷ್ಯ ಧೋರಣೆ ತೋರಿದ ಉದಾಹರಣೆಗಳು ಇವೆ. ಒಲಿಂಪಿಕ್ಸ್ ಜಿಮ್ನಾಸ್ಟಿಕ್ಸ್ ಚಾಂಪಿಯನ್ ಸಿಮೊನ್ ಬೈಲ್ಸ್ ಎರಡು ವರ್ಷಗಳ ಹಿಂದೆ ನ್ಯಾಯಾಲಯದಲ್ಲಿ ನೀಡಿದ್ದ ಹೇಳಿಕೆಗೆ ಕ್ರೀಡಾಜಗತ್ತು ಬೆಚ್ಚಿಬಿದ್ದಿತ್ತು. 70ಕ್ಕೂ ಹೆಚ್ಚು ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನೆಂಬ ಆರೋಪವು ಅಮೆರಿಕ ಜಿಮ್ನಾಸ್ಟಿಕ್ಸ್ ತಂಡ ಮತ್ತು ಮಿಷಿಗನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ (ಎಂಎಸ್‌ಯು) ವೈದ್ಯನಾಗಿದ್ದ ಲ್ಯಾರಿ ಮೇಲೆ ಇತ್ತು. ಈ ಬಗ್ಗೆ ಎಫ್‌ಬಿಐಗೆ ಅಮೆರಿಕ ಜಿಮ್ನಾಸ್ಟಿಕ್ಸ್ 2015ರಲ್ಲಿಯೇ ದೂರು ನೀಡಿತ್ತು. ಆದರೂ ಲ್ಯಾರಿ ತನ್ನ ಹುದ್ದೆಯಲ್ಲಿ ಮುಂದುವರಿದಿದ್ದ. 2016ರಲ್ಲಿ ಪತ್ರಿಕೆಯೊಂದು ಆತನ ಕರ್ಮಕಾಂಡಗಳ ಕುರಿತ ಲೇಖನ ಪ್ರಕಟಿಸಿದಾಗ ಎಫ್‌ಬಿಐ ಕ್ರಮಕ್ಕೆ ಮುಂದಾಯಿತು. 58 ವರ್ಷದ ಲ್ಯಾರಿ ನಾಸರ್‌ಗೆ 2018ರಲ್ಲಿಯೇ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಜೈಲಿಗೆ ತಳ್ಳಲಾಯಿತು. ಆದರೆ ಆತನ ದೌರ್ಜನ್ಯದಿಂದಾಗಿ ಬೈಲ್ಸ್ ಸೇರಿದಂತೆ ಉಳಿದ ಹುಡುಗಿಯರು ಅನುಭವಿಸಿದ ಮಾನಸಿಕ ಹಾಗೂ ದೈಹಿಕ ಯಾತನೆ ಅವರಿಗಷ್ಟೇ ಗೊತ್ತು.

'ನಾನು ಲ್ಯಾರಿಯನ್ನು ಖಂಡಿಸುವಷ್ಟೇ ಇಡೀ ವ್ಯವಸ್ಥೆಯನ್ನೂ ದೂಷಿಸುತ್ತೇನೆ. ಅವನ ವಿಕೃತ ಕೃತ್ಯಗಳಿಗೆ ಕಡಿವಾಣ ಹಾಕದ ವ್ಯವಸ್ಥೆಗೆ ಧಿಕ್ಕಾರ' ಎಂದು ಬೈಲ್ಸ್ ಆಕ್ರೋಶ ವ್ಯಕ್ತಪಡಿಸಿದ್ದರು.

ಭಾರತದಲ್ಲಿಯೂ ಈಗ ಅದೇ ಪರಿಸ್ಥಿತಿ ಇದೆ. ಆರೋಪಿಯ ಜೊತೆಗೆ ಆತನಿಗೆ 'ರಕ್ಷಣೆ' ಒದಗಿಸುತ್ತಿರುವ ವ್ಯವಸ್ಥೆಯನ್ನೂ ಕುಸ್ತಿಪಟುಗಳು ಖಂಡಿಸುತ್ತಿದ್ದಾರೆ. ಆದರೂ ನ್ಯಾಯ ಸಿಕ್ಕಿಲ್ಲ. 'ನಾವು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಸಾಧನೆ ಮಾಡಿಬಂದಾಗ ಔತಣಕೂಟ ನೀಡಿ ಗೌರವಿಸಿದ್ದ ಪ್ರಧಾನಿಯವರಿಗೂ ನಮ್ಮ ಮನದ ಮಾತು ಕೇಳುತ್ತಿಲ್ಲ. ಬೇಟಿ ಪಢಾವೊ, ಬೇಟಿ ಬಚಾವೊ ಎಂದು ಹೇಳುವ ಅವರಿಗೆ ನಮ್ಮ ಅಹವಾಲು ತಲುಪಿಲ್ಲ' ಎಂದು ಕೆಲವು ದಿನಗಳ ಹಿಂದೆ ಸಾಕ್ಷಿ ಮಲಿಕ್ ಮಾಧ್ಯಮಗಳ ಮುಂದೆ ಕಣ್ಣೀರಿಟ್ಟಿದ್ದರು.

ಇನ್ನೊಂದೆಡೆ, 'ಆರೋಪಗಳಲ್ಲಿ ಹುರುಳಿಲ್ಲ. ಫೆಡರೇಷನ್ ಇತ್ತೀಚೆಗೆ ಜಾರಿಗೊಳಿಸಿರುವ ಕೆಲವು ಹೊಸ ನಿಯಮಗಳ ಬಗ್ಗೆ ಈ ಕುಸ್ತಿಪಟುಗಳಿಗೆ ತಕರಾರು ಇದೆ. ಧರಣಿಯಲ್ಲಿ ಭಾಗವಹಿಸಿದವರೆಲ್ಲರೂ ಹರಿಯಾಣದವರು ಮತ್ತು ಮುಂದಾಳತ್ವ ವಹಿಸಿದವರು ಒಂದೇ ಕುಟುಂಬದವರು. ಅದೇ ರಾಜ್ಯದ ಕುಸ್ತಿಪಟು ಯೋಗೇಶ್ವರ್ ದತ್ ತಟಸ್ಥವಾಗಿದ್ದಾರೆ. ಪ್ರಕರಣದ ತನಿಖೆ ಪಾರದರ್ಶಕವಾಗಿ ನಡೆದು ಸತ್ಯಾಂಶ ಹೊರಬರಲಿದೆ ಎಂಬ ಭರವಸೆ ನಮಗಿದೆ' ಎಂದು ಬ್ರಿಜ್ ಭೂಷಣ್ ಪರವಾಗಿರುವವರು ವಾದಿಸುತ್ತಾರೆ.

ಆದರೆ ಪಾರದರ್ಶಕ ತನಿಖೆ ಮಾಡುವವರು ಯಾರು ಎಂಬುದೇ ಈಗ ಇರುವ ಪ್ರಶ್ನೆ.

ಚುರುಮುರಿ



ತಲೆಯೊಳಗೇ ಚಿಪ್

• ಸುಮಂಗಲಾ

'ಎರಡ್ ಸಾವಿರದ ಪಿಂಕ್ ನೋಟಿದ್ರೆ, ಅದ್ರಾಗಿನ ಚಿಪ್ ಮಾತ್ರ ತೆಕ್ಕಂಡು, ಮದ್ಲು ಹೋಗಿ ಬ್ಯಾಂಕಿನಾಗೆ ಬದಲಿ ಮಾಡಿಕೋ' ಬೆಕ್ಕಣ್ಣ ಸುದ್ದಿ ಓದುತ್ತ ವದರಿತು.

'ನನ್ನ ಹತ್ರ ನೋಟೂ ಇಲ್ಲ, ನೋಟೊಳಗೆ ಚಿಪ್ಪೂ ಇಲ್ಲ. ಆವಾಗ ಎರಡು ಸಾವಿರದ ನೋಟು ಪ್ರಿಂಟ್ ಮಾಡಿದ್ದೇ ಭ್ರಷ್ಟಾಚಾರ ಕಂಟ್ರೋಲ್ ಮಾಡಾಕೆ, ಎಲ್ಲಾ ಕಪ್ಪುಹಣ ಹೊರಗೆ ಬರತೈತೆ ಅಂದಿದ್ದರಲ್ಲ... ಈಗ್ಯಾಕೆ ಮೋದಿಮಾಮ ನೋಟು ಹಿಂದೆ ತಗಂಡಾರಂತೆ?'

'ಆವಾಗ ಕಂಟ್ರೋಲ್ ಮಾಡಿದರು. ಈಗ 2000ದ ನೋಟು ಹಿಂದೆ ತಗಂಡು ಕಪ್ಪುಹಣ ಪೂರಾ ಬಂದ್ ಮಾಡತಾರೆ. ಕಪ್ಪುಹಣ, ಭ್ರಷ್ಟಾಚಾರಕ್ಕೆ ಗೇಟ್‌ಪಾಸ್, ತಿಳೀತಿಲ್ಲೋ' ಬೆಕ್ಕಣ್ಣ ಹೊಸದೇ ವಿತಂಡವಾದ ಹೂಡಿತು.

'2000ದ ಒಂದು ನೋಟು ಪ್ರಿಂಟ್ ಮಾಡಾಕೆ ಮೂರೂವರೆ ರೂಪಾಯಿ ಬೇಕಂತೆ. ಒಟ್ಟು ₹ 1,293 ಕೋಟಿ ಖರ್ಚು ಮಾಡಿ, ಹೊಸಾ ನೋಟು ಪ್ರಿಂಟ್ ಮಾಡಿ, ಈಗ ಹಿಂದೆ ತಗಂಡರೆ ಎಷ್ಟ್ ರೊಕ್ಕ ಹಾಳು'.

ಬೆಕ್ಕಣ್ಣ ನನ್ನ ಮಾತು ಕಿವಿಗೇ ಹಾಕಿಕೊಳ್ಳದೆ, 'ಸಿದ್ದು ಅಂಕಲ್ಲು ಗೃಹಲಕ್ಷ್ಮಿಯರಿಗೆ 2 ಸಾವಿರ ಕೊಡ್ತೀನಿ ಅಂದಾರಲ್ಲ... 2 ಸಾವಿರದ ನೋಟೇ ಮಾಯವಾದ್ರೆ ಮತ್ತ ಎಲ್ಲಿಂದ ಕೊಡತಾರೆ?' ಎಂದು ಹಲ್ಲು ಕಿಸಿಯಿತು.

'ಮಂಗ್ಯಾನಂಥವನೇ... ಅಕೌಂಟಿಗೆ ಹಾಕ್ತಾರಲೇ'.

'ಗೃಹಲಕ್ಷ್ಮಿಯರಿಗೇನೋ ಸರ್ಕಾರ ಕೊಡತೈತಿ. ನನಗ ಯಾರು ರೊಕ್ಕ ಕೊಡತಾರ? ಅದಕ್ಕೇ ಟಿ.ವಿಯವರಿಗೆ ಹೆಡ್‌ಲೈನ್ ಬರೆದುಕೊಟ್ಟು, ರೊಕ್ಕ ಮಾಡತೀನಿ' ಎನ್ನುತ್ತ ಬೆಕ್ಕಣ್ಣ ಬರೆಯತೊಡಗಿತು.

'ಡಬ್ಬಲ್ ಎಂಜಿನ್ ಬೇಡವೆಂದ ಕರುನಾಡಿಗರಿಗೆ ಡಬ್ಬಲ್ ಶಾಕ್', 'ಎತ್ತು ಏರಿಗೆ, ಕೋಣ ನೀರಿಗೆ ಎಳೆಯುವ ಜೋಡೆತ್ತುಗಳು', 'ಜೋಡೆತ್ತುಗಳ ಜಂಗೀಕುಸ್ತಿ', 'ಸಂಪುಟ ವಿಸ್ತರಣೆ ಕರ್ಮಕಾಂಡ', 'ಭುಗಿಲೆದ್ದ ಅತೃಪ್ತಿಯ ಬೆಂಕಿ'.

'ಅವ್ರು ಈಗಾಗ್ಲೇ ಇಂಥವನ್ನು ವದರಲಾಕೆ ಹತ್ಯಾರ' ಎಂದು ಟಿ.ವಿ. ಹಾಕಿ ತೋರಿಸಿದೆ.

'ನೋಟೊಳಗೆ ಅಲ್ಲ, ಇವ್ರ ತಲೆಯೊಳಗೇ ಚಿಪ್ ಹಾಕಿದಂಗೆ ಐತಿ' ಎಂದು ಬೆಕ್ಕಣ್ಣ ಹ್ಯಾಪುಮೋರೆ ಹಾಕಿತು.

ಸಂಗತ

ನಕಲಿ ದಾಖಲೆ: ಇರಲಿ ಕಡಿವಾಣ

ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ನಕಲಿ ದಾಖಲೆ ಸೃಷ್ಟಿಸುವ ಜಾಲ ರಾಜ್ಯದಾದ್ಯಂತ ಹರಡಿಕೊಂಡಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ


ಅಸಂಘಟಿತ ಕಟ್ಟಡ ಕಾರ್ಮಿಕರಿಗೆ ವಿವಿಧ ಸೌಲಭ್ಯ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು 2007ರಲ್ಲಿ 'ಕಾರ್ಮಿಕರ ಕಾರ್ಡ್' ಯೋಜನೆಯನ್ನು ಆರಂಭಿಸಿದೆ. ಧಾರವಾಡ ಜಿಲ್ಲೆ ವ್ಯಾಪ್ತಿಯಲ್ಲಿ 1,28,255 ನೋಂದಾಯಿತ ಕಾರ್ಮಿಕರು ಕಾರ್ಡ್ ಪಡೆದಿದ್ದಾರೆ. ಕಾರ್ಮಿಕ ಇಲಾಖೆ ನಡೆಸಿದ ತನಿಖೆಯಲ್ಲಿ, ಈ ಪೈಕಿ 5,693 ಜನರು ನಕಲಿ ದಾಖಲೆ ಸೃಷ್ಟಿಸಿ ಸೌಲಭ್ಯಗಳನ್ನು ಪಡೆದಿರುವುದು ದೃಢಪಟ್ಟಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 18). ನಕಲಿ ಕಾರ್ಡ್ ಪಡೆದವರ ಸಂಖ್ಯೆ ಜಿಲ್ಲೆಯಲ್ಲಿ ಇನ್ನೂ ಹೆಚ್ಚಾಗಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಹಳಷ್ಟು ಅನುಕೂಲಸ್ಥ ಕುಟುಂಬಗಳು ನಕಲಿ ದಾಖಲೆ ಸೃಷ್ಟಿಸಿ ಬಿಪಿಎಲ್ ಕಾರ್ಡ್ ಪಡೆದುಕೊಂಡಿವೆ. ಬಾಗಲಕೋಟೆ ಜಿಲ್ಲೆಯಲ್ಲಿ ಇಂಥ 9,000ದಷ್ಟು ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿದ ಬಗ್ಗೆ ನಾಲ್ಕು ತಿಂಗಳ ಹಿಂದೆ ವರದಿಯಾಗಿತ್ತು. ನೋವಿನ ಸಂಗತಿ ಎಂದರೆ, ತಾವು ಸ್ವಾತಂತ್ರ್ಯ ಯೋಧರು ಎಂದು ಹೇಳಿ, ನಕಲಿ ದಾಖಲೆ ಸಲ್ಲಿಸಿ ಪಿಂಚಣಿಯನ್ನು ಕೂಡ ಪಡೆದವರಿದ್ದಾರೆ. ತನಿಖೆ ನಂತರ ಅಂತಹವರಿಗೆ ಈ ಸೌಲಭ್ಯ ರದ್ದಾದ ಸಂಗತಿ ಈಗ ನೆನಪಾಗುತ್ತಿದೆ. ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ನಕಲಿ ದಾಖಲೆ ಸೃಷ್ಟಿಸುವ ಜಾಲಗಳು ರಾಜ್ಯದಾದ್ಯಂತ ಹರಡಿಕೊಂಡಿವೆ. ಮಧ್ಯವರ್ತಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಈ ವಂಚನೆಯ ಜಾಲದ ಪಾಲುದಾರರಾಗಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ನೂತನ ಸರ್ಕಾರವು ಮನೆಯ ಯಜಮಾನಿಗೆ ಪ್ರತಿ ತಿಂಗಳು ₹ 2,000 ನೆರವು, ನಿರುದ್ಯೋಗಿ ಯುವಕರಿಗೆ ಮಾಸಿಕ ಭತ್ಯೆ, 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯ, ಬಿಪಿಎಲ್ ಕುಟುಂಬದ ಸದಸ್ಯರಿಗೆ ತಿಂಗಳಿಗೆ ತಲಾ 10 ಕೆ.ಜಿ. ಅಕ್ಕಿ ನೀಡುವ ಯೋಜನೆಗಳನ್ನು ಶೀಘ್ರ ಅನುಷ್ಠಾನಗೊಳಿಸುವುದಾಗಿ ಪ್ರಕಟಿಸಿದೆ. ಈ ಸೌಲಭ್ಯಗಳು ನಿಜವಾದ ಅರ್ಹರಿಗೆ ಮಾತ್ರ ದಕ್ಕುವಂತೆ ಸರ್ಕಾರ ಜಾಗ್ರತೆ ವಹಿಸುವುದು ಅವಶ್ಯ.

ನಕಲಿ ದಾಖಲೆಗಳನ್ನು ಸಲ್ಲಿಸಿ ಕಾರ್ಮಿಕರ ಕಾರ್ಡ್, ಬಿಪಿಎಲ್ ಕಾರ್ಡ್ ಹೊಂದಿರುವ ಅನರ್ಹರಿಗೆ ಶಿಕ್ಷೆಯಾದ ನಿದರ್ಶನಗಳು ವಿರಳ. ಅವರ ಕಾರ್ಡ್‌ಗಳನ್ನು ಮಾತ್ರ ರದ್ದುಪಡಿಸಲಾಗಿದೆ. ಮನುಷ್ಯರು ಮೂಲಭೂತವಾಗಿ ಸ್ವಾರ್ಥಿಗಳು. ಕಟ್ಟುನಿಟ್ಟಿನ ಕ್ರಮಗಳಿಲ್ಲದಿದ್ದರೆ ವಂಚನೆಯ ಜಾಲಗಳನ್ನು ರೂಪಿಸುತ್ತಾರೆ. ವೇದಿಕೆಯ ಮೇಲೆ ಬಡವರು, ಅಸಹಾಯಕರ ಬಗ್ಗೆ ಅನುಕಂಪ ವ್ಯಕ್ತಪಡಿಸುವ ಗಣ್ಯರು, ಖಾಸಗಿಯಾಗಿ ಸ್ವಾರ್ಥಿಗಳಾಗಿ ವರ್ತಿಸುತ್ತಾರೆ. ನಿವೃತ್ತ ಶಿಕ್ಷಕ ಮಿತ್ರರೊಬ್ಬರು ತಿಂಗಳಿಗೆ ₹ 40,000 ಪಿಂಚಣಿ ಪಡೆಯುತ್ತಿದ್ದಾರೆ. ಅವರ ಮಕ್ಕಳು ಉತ್ತಮ ಸ್ಥಿತಿಯಲ್ಲಿದ್ದಾರೆ. ಆದರೆ ಅವರು ವೃದ್ಧಾಪ್ಯ ವೇತನವನ್ನು ಯಾವ ಮುಜುಗರವೂ ಇಲ್ಲದೆ ಪಡೆಯುತ್ತಿದ್ದಾರೆ. ಅವರು ಸಮರ್ಥಿಸಿಕೊಳ್ಳುವ ರೀತಿ ತುಂಬ ವಿಚಿತ್ರವಾಗಿದೆ. 'ಸರ್ಕಾರ ನನಗೆ ಕೊಡುವ ವೃದ್ಧಾಪ್ಯ ವೇತನವನ್ನು ನನ್ನ ಕುಟುಂಬಕ್ಕೆ ಬಳಸುವುದಿಲ್ಲ. ಬಡವರಿಗೆ, ದೇವಸ್ಥಾನಗಳಿಗೆ ದಾನ ಮಾಡುತ್ತೇನೆ' ಎನ್ನುತ್ತಾರೆ. ಅಕ್ರಮವಾಗಿ ಸರ್ಕಾರದ ಸೌಲಭ್ಯ ಪಡೆಯುವ ಅನೇಕರು ಇಂತಹುದೇ ಸಬೂಬು ಹೇಳಿ ದಾಟಿಕೊಳ್ಳುತ್ತಿದ್ದಾರೆ.

ಸಂಪತ್ತು ಜನರ ಜೀವನಮಟ್ಟವನ್ನು ನಿರ್ಧರಿಸುತ್ತದೆ. ಹೆಚ್ಚು ಸಂಪತ್ತು ಹೊಂದಿದವರು ಎಲ್ಲ ಮೂಲಗಳ ಸವಲತ್ತುಗಳನ್ನು ಸುಲಭವಾಗಿ ಪಡೆಯುತ್ತಾರೆ, ಬಡವರಿಗೆ ಸವಲತ್ತುಗಳು ಸರಿಯಾಗಿ ಸಿಗುವುದಿಲ್ಲ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿಯ ದತ್ತಾಂಶ. ಬಡವರಿಗೆ ಸರ್ಕಾರವು ಸವಲತ್ತುಗಳನ್ನು ನೀಡಿದರೂ ಪೂರ್ಣ ಪ್ರಮಾಣದಲ್ಲಿ ಅವುಗಳನ್ನು ಪಡೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ ಎಂದು ಈ ವರದಿ ವಿಶ್ಲೇಷಿಸಿದೆ. ಬಡವರಿಗೆ ಮೀಸಲಾದ ಸೌಲಭ್ಯಗಳನ್ನು ಉಳ್ಳವರು ಅಕ್ರಮವಾಗಿ ಪಡೆಯುತ್ತಿರುವ ಸಂಗತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ನಿರ್ಬಂಧಿಸಬೇಕು. ಆರೋಪಿಗಳ ಹೆಸರುಗಳನ್ನು ಅವರ ಭಾವಚಿತ್ರ ಸಮೇತ ಪತ್ರಿಕೆಗಳಲ್ಲಿ ಪ್ರಕಟಿಸಬೇಕು.



ಆಸ್ಟ್ರೇಲಿಯಾದಲ್ಲಿ ಬಡವರಿಗೆ ಮೀಸಲಾದ ಸರ್ಕಾರಿ ಸೌಲಭ್ಯ ಪಡೆಯುವುದನ್ನು ಜೀವವಿರೋಧಿ ನಡೆ ಎಂದು ಭಾವಿಸಲಾಗುತ್ತದೆ. ಇಂತಹ ಕೃತ್ಯ ಮೇಲ್ನೋಟಕ್ಕೆ ಸ್ಪಷ್ಟವಾದ ತಕ್ಷಣ, ಸೌಲಭ್ಯ ಪಡೆದ ವ್ಯಕ್ತಿಯ ಭಾವಚಿತ್ರ ಮತ್ತು ಆತನ ಒಟ್ಟು ಆದಾಯ ಮೂಲಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತದೆ. ಈ ಅಪಮಾನದಿಂದ ಆ ವ್ಯಕ್ತಿ ಸಮಾಜದಲ್ಲಿ ತಲೆಯೆತ್ತಿ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ.

ಡಿ. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಬಡ ಮಹಿಳೆಯರಿಗೆ ಉಚಿತವಾಗಿ ಸೀರೆ ವಿತರಿಸುವ ಯೋಜನೆ ಜಾರಿಗೆ ತಂದಿದ್ದರು. ಅರಸು ಒಮ್ಮೆ ಧಾರವಾಡ ಜಿಲ್ಲೆಯ ಒಂದು ಹಳ್ಳಿಗೆ ಭೇಟಿ ನೀಡಿದಾಗ, ಗ್ರಾಮದ ನೂರಾರು ಬಡ ಹೆಣ್ಣುಮಕ್ಕಳು ಬಂದು ಅರಸು ಅವರ ಪಾದ ಮುಟ್ಟಿ ನಮಸ್ಕರಿಸಿ, ತಮಗೆ ಸರ್ಕಾರಿ ಸೀರೆ ದೊರೆತಿಲ್ಲ, ಈ ಸೀರೆಗಳೆಲ್ಲ ಶ್ರೀಮಂತರ ಮನೆ ಸೇರಿವೆ ಎಂದು ತಿಳಿಸಿದರು. ಭಾವುಕರಾದ ಅರಸು ಕಣ್ಣಲ್ಲಿ ನೀರು ಬಂದಿತು. ಪರಿಶೀಲಿಸಿದಾಗ, ಆ ಗ್ರಾಮದಲ್ಲಿ 300ಕ್ಕೂ ಹೆಚ್ಚು ಸೀರೆಗಳನ್ನು ಹಂಚಲಾಗಿತ್ತು, ಆದರೆ ಅವೆಲ್ಲ ಉಳ್ಳವರ ಪಾಲಾಗಿದ್ದವು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಉತ್ಸುಕತೆಯಿಂದ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲು ಮುಂದಾಗಿದೆ. ಆದರೆ ಅವು ಅರ್ಹರಿಗೆ ಸರಿಯಾಗಿ ದಕ್ಕುವಂತೆ ಕಾಳಜಿ ವಹಿಸಬೇಕು.

ವಾಚಕರ ವಾಣಿ

ಹೊಸ ಚಿಂತನೆಗಳಿಲ್ಲದ ಹಳೆಯ ಮುಖಗಳು

ಬದಲಾವಣೆ ಜಗದ ನಿಯಮವೇ ಆಗಿರುವಾಗ, ರಾಷ್ಟ್ರೀಯ ಪಕ್ಷಗಳು ಹೊಸ ಯುವ ನಾಯಕತ್ವ ಬೆಳೆಸುವ ಬಗ್ಗೆ ನಿರ್ಲಕ್ಷ್ಯ ವಹಿಸಬಾರದು. ನಾವು ನಾಲ್ಕೈದು ಸಾರ್ವತ್ರಿಕ ಚುನಾವಣೆಗಳಲ್ಲಿ ಮತ ಚಲಾಯಿಸಿದರೂ ಹೊಸ ಚಿಂತನೆಗಳಿಲ್ಲದ ಅವೇ ಹಳೆಯ ಮುಖಗಳಿಗೆ ಮಣೆ ಹಾಕುತ್ತಿರುತ್ತೇವೆ. ಒಂದು ಸರ್ಕಾರ ಸಮರ್ಪಕವಾಗಿ ಆಡಳಿತ ನಡೆಸಲು ಅನುಭವ ಮುಖ್ಯ ಎಂಬುದನ್ನು ಒಪ್ಪಿಕೊಂಡರೂ ತಲೆಮಾರುಗಳ ಬದಲಾದ ಚಿಂತನೆ ಮತ್ತು ಆಧುನಿಕತೆಯ ದಾಪುಗಾಲಿಗೆ ತಕ್ಕಂತೆ ಓಡುವ ಯುವ ನಾಯಕರೂ ಅಷ್ಟೇ ಅತ್ಯಗತ್ಯ.

ಪ್ರತಿಯೊಂದು ಪಕ್ಷವೂ 50:50 ಸೂತ್ರ ಅಳವಡಿಸಿಕೊಂಡು ಮುಂದುವರಿಯಬೇಕು. ಅರ್ಧದಷ್ಟು ಮಂದಿ ಅನುಭವಿ ರಾಜಕಾರಣಿಗಳಿದ್ದರೆ, ಇನ್ನರ್ಧ ಹೊಸ ಚಿಂತನೆಯ ಉತ್ಸಾಹಿ ಯುವ ರಾಜಕಾರಣಿಗಳು ಇರುವಂತೆ ಎಚ್ಚರ ವಹಿಸಬೇಕು. ಇಂಥ ಸೂತ್ರವು ಪಕ್ಷಗಳು ಸದಾ ಸೃಜನಶೀಲವಾಗಿ, ದೂರದರ್ಶಿತ್ವದ ಆಡಳಿತ ನೀಡಲು ನೆರವಾಗುತ್ತದೆ, ಜನರು ಸಕಾರಾತ್ಮಕ ಆಶಯಗಳನ್ನು ಹೊಂದಲು ಸಾಧ್ಯವಾಗುತ್ತದೆ.

ಅಶೋಕ ಪ. ಹೊನಕೇರಿ, ಧಾರವಾಡ

ಪಿಎಸ್‌ಐ ಹುದ್ದೆ: ಮರೀಚಿಕೆಯಾಗದಿರಲಿ

402 ಪಿಎಸ್‌ಐ ಹುದ್ದೆಗಳಿಗೆ ದೈಹಿಕ ಪರೀಕ್ಷೆ ನಡೆದು ವರ್ಷವೇ ಕಳೆದಿದ್ದರೂ ಲಿಖಿತ ಪರೀಕ್ಷೆ ಮರೀಚಿಕೆಯಾಗಿದೆ. ಇನ್ನು 545 ಪಿಎಸ್‌ಐ ಹುದ್ದೆಗಳ ಮರುಪರೀಕ್ಷೆಯ ಹಾದಿಯನ್ನು ಅನೇಕರು ಕಾಯುತ್ತಿದ್ದಾರೆ. ಇವುಗಳ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕು ಮತ್ತು 'ಕಾನ್‌ಸ್ಟೆಬಲ್ ಸಿವಿಲ್ ಮತ್ತು ಡಿಎಆರ್' ಲಿಖಿತ ಪರೀಕ್ಷೆಯನ್ನು ನಿಗದಿಯಂತೆ ಜುಲೈನಲ್ಲಿ ನಡೆಸಬೇಕು.

ಇದರೊಂದಿಗೆ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಕ್ರಮೇಣ ತುಂಬಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಜೊತೆಗೆ ಎಲ್ಲಿಯೂ ಪರೀಕ್ಷೆಯಲ್ಲಿ ಅಕ್ರಮ ಎಂಬ ಸುದ್ದಿ ಕೇಳಿಬರದಂತೆ ಶುದ್ಧ 'ಹಸ್ತ'ದೊಂದಿಗೆ ಆಡಳಿತ ನಡೆಸಬೇಕು.

ಬಸನಗೌಡ ಪಾಟೀಲ, ಯರಗುಪ್ಪಿ

ರೈಲಿನಲ್ಲಿ ಇರಲಿ ಮಹಿಳಾ ಪೊಲೀಸರು

ಪ್ರಯಾಣದರ ಕಡಿಮೆ ಮತ್ತು ದೂರ ಪ್ರಯಾಣಕ್ಕೆ ಅನುಕೂಲಕರ ಎಂದು ಬಹಳಷ್ಟು ಜನ ರೈಲು ಪ್ರಯಾಣವನ್ನು ಬಯಸುತ್ತಾರೆ. ಸಾಮಾನ್ಯವಾಗಿ ರೈಲಿನಲ್ಲಿ ಮಹಿಳೆಯರಿಗೆ ಮೀಸಲು ಬೋಗಿಗಳು ಇರುತ್ತವೆ. ಆ ಬೋಗಿಗಳು ತುಂಬಿದ್ದಾಗ ಅವರು ಜನರಲ್ ಬೋಗಿಗಳಲ್ಲಿ ಪ್ರಯಾಣಿಸುತ್ತಾರೆ. ಆದರೆ ಮಹಿಳಾ ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸಿ, ರ್‍ಯಾಗಿಂಗ್ ಮಾಡುವ ಪುಂಡರಿಗೆ ಕಡಿವಾಣ ಹಾಕಲು ರೈಲಿನಲ್ಲಿ ಯಾವುದೇ ಸಿಬ್ಬಂದಿ ಇರುವುದಿಲ್ಲ. ಇನ್ನು ರೈಲ್ವೆ ಸಹಾಯವಾಣಿಯ ಕರೆಯನ್ನು ಸ್ವೀಕರಿಸುವವರು ಸಹ ಇರುವುದಿಲ್ಲ.

ರೈಲ್ವೆ ಪೊಲೀಸರು ರೈಲು ನಿಲ್ದಾಣಗಳಿಗೆ ಮಾತ್ರ ಸೀಮಿತವೇ? ನೆಪಮಾತ್ರಕ್ಕೆ ಎಂಬಂತಿರುವ ಮೊಬೈಲ್ ಆ್ಯಪ್ ಸೇವೆ ಎಲ್ಲೆಡೆ ಪ್ರಯೋಜನಕ್ಕೆ ಬರುತ್ತಿಲ್ಲ. ಇನ್ನಾದರೂ ರೈಲ್ವೆ ಇಲಾಖೆ ಎಚ್ಚೆತ್ತುಕೊಳ್ಳಬೇಕು. ರೈಲಿನಲ್ಲಿ ಮಹಿಳಾ ರೈಲ್ವೆ ಪೊಲೀಸರನ್ನು ನಿಯೋಜಿಸಬೇಕು. ಹಾಗಾದಾಗ ಮಹಿಳೆಯರಲ್ಲಿ ಧೈರ್ಯ ತುಂಬಬಹುದು ಜೊತೆಗೆ ಅವರಿಗೆ ಸುರಕ್ಷತೆಯನ್ನೂ ಒದಗಿಸಬಹುದು.

ಮುಗಳಳ್ಳಿ ರಾಜ, ಉಜ್ಜಯಿನಿ, ವಿಜಯನಗರ

ಜಾನಪದ ವಿ.ವಿ: ಅವಸರದ ನೇಮಕಾತಿ ಏಕೆ?

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು 2017-18ರಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಿತ್ತಾದರೂ ಮುಂದಿನ ಪ್ರಕ್ರಿಯೆ ಆರಂಭವಾಗಿರಲಿಲ್ಲ. ಆದರೆ ಐದು ವರ್ಷಗಳ ನಂತರ, ನಿಯಮಾನುಸಾರ ಹೊಸ ಅಧಿಸೂಚನೆಯನ್ನೂ ಹೊರಡಿಸದೆ, ಹಿಂದೆ ಹೊರಡಿಸಿದ ಅಧಿಸೂಚನೆಯ ಆಧಾರದ ಮೇಲೆ ಅವಸರ ಅವಸರವಾಗಿ ನೇಮಕಾತಿ ಪ್ರಕ್ರಿಯೆಯನ್ನು ನಡೆಸುತ್ತಿರುವುದು ಅನೇಕ ಅನುಮಾನಗಳಿಗೆ ಎಡೆಮಾಡಿದೆ. ಹೀಗೆ ಮಾಡಲು ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ ಹಾಗೂ ಸರ್ಕಾರದ ನೇಮಕಾತಿ ವಿಶೇಷ ನಿಯಮಗಳಲ್ಲಿ ಅವಕಾಶವಿದೆಯೇ? ಇದರಿಂದ ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಇಲ್ಲಿಯವರೆಗಿನ ತಮ್ಮ ಯಾವುದೇ ಶೈಕ್ಷಣಿಕ ಪ್ರಗತಿಯ ದಾಖಲೆಗಳನ್ನು ಸಲ್ಲಿಸಲು ಅವಕಾಶ ಸಿಗದೇ ಇದ್ದುದು ಹಾಗೂ ಹಿಂದಿನ ಐದು ವರ್ಷಗಳಲ್ಲಿ ಅರ್ಹತೆ ಪಡೆದ ಹೊಸಬರಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡದೇ ಇರುವುದು ಸರಿಯೇ?

ಅದೂ ಅಲ್ಲದೆ ನೇಮಕಾತಿ ಪ್ರವೇಶ ಪರೀಕ್ಷೆಯ ಪಠ್ಯಕ್ರಮವನ್ನು ಬಹಳಷ್ಟು ಮುಂಚಿತವಾಗಿ ಅಭ್ಯರ್ಥಿಗಳ ಗಮನಕ್ಕೆ ತರದೆ, ಪರೀಕ್ಷೆಗೆ ಬರೀ ಮೂರು ದಿನಗಳ ಮುಂಚೆ ಪ್ರಕಟಿಸಿದ್ದರ ಹಿಂದಿನ ಮರ್ಮವೇನು? ಪ್ರವೇಶ ಪತ್ರಗಳನ್ನು ಕೆಲವರಿಗೆ ಪರೀಕ್ಷೆಯ ದಿನ ಮತ್ತೆ ಕೆಲವರಿಗೆ ಪರೀಕ್ಷೆಯ ನಂತರ ತಲುಪುವಂತೆ ಮಾಡಿದ್ದರ ಹಿಂದಿನ ಗುಟ್ಟೇನು? ಅರ್ಜಿಗಳಲ್ಲಿ ಕೊಟ್ಟಿರುವ ವಿಳಾಸಗಳು ಐದು ವರ್ಷ ಹಿಂದಿನವು ಎಂಬುದನ್ನು ವಿಶ್ವವಿದ್ಯಾಲಯ ನಿರ್ಲಕ್ಷಿಸಿದ್ದು ಏಕೆ? ಎಲ್ಲಕ್ಕಿಂತ ಮುಖ್ಯವಾಗಿ, ಈ ನೇಮಕಾತಿ ಪ್ರಕ್ರಿಯೆ ನಡೆಸಲು ಸರ್ಕಾರದ ಅನುಮತಿ ಪಡೆಯಲಾಗಿದೆಯೇ? ಹೌದು ಎನ್ನುವುದಾದರೆ, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಅನುಮತಿ ಕೊಟ್ಟವರಾರು? ಇನ್ನೂ ವಿಸ್ಮಯದ ಪ್ರಶ್ನೆ ಎಂದರೆ, ವಿಧಾನಸಭಾ ಚುನಾವಣೆಯ ಮತ ಎಣಿಕೆ ದಿನ ಪರೀಕ್ಷೆ ನಡೆಸುವಂತಹ ಅವಸರ ಮತ್ತು ಅವಶ್ಯಕತೆ ಏನಿತ್ತು? ಮತ ಎಣಿಕೆಯ ಕಾರಣದಿಂದ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸಾರಿಗೆ ಸಂಪರ್ಕಕ್ಕೆ ತೊಂದರೆಯಾಗುತ್ತದೆ ಎಂಬ ಸಾಮಾನ್ಯ ತಿಳಿವಳಿಕೆಯೂ ವಿಶ್ವವಿದ್ಯಾಲಯದ ಆಡಳಿತಗಾರರಿಗೆ ಇಲ್ಲದೇ ಹೋಯಿತೇ? ಒಟ್ಟಾರೆ, ವಿಶ್ವವಿದ್ಯಾಲಯದ ಈ ಆತುರದ ನೇಮಕಾತಿ ಪ್ರಕ್ರಿಯೆಯನ್ನು ನೋಡಿದರೆ, ಇಲ್ಲಿ ನಿಯಮಗಳನ್ನು ಗಾಳಿಗೆ ತೂರಿ, ತಮಗೆ ತೋಚಿದಂತೆ ನೇಮಕಾತಿ ನಡೆಸಲು ಹೊರಟಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಇದರಿಂದ ಅನೇಕ ವರ್ಷಗಳಿಂದ ಉದ್ಯೋಗ ಬಯಸಿ ಕುಳಿತಿದ್ದ ನಮ್ಮಂಥ ಹಲವು ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಹಾಗಾಗಿ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ತಕ್ಷಣ ಇತ್ತ ಗಮನಹರಿಸಿ, ಈ ಅಕ್ರಮ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಬೇಕು.

ಡಾ. ಜಿ.ಕೆ.ಪ್ರೇಮ, ಡಾ. ಮಂಜುಳಾ, ಡಾ. ಜಿ. ಅರುಣ್‌ಕುಮಾರ, ಡಾ. ನೇತ್ರಾವತಿ, ಡಾ. ಶಿವರಾಜ್ ಬ್ಯಾಡರಹಳ್ಳಿ, ಚಂದ್ರಪ್ಪ ಹರಿಜನ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಿನಿ ಸಮ್ಮಾನ ನಾಮನಿರ್ದೇಶಿತರು

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ಕ್ಕೆ ದಿನಗಣನೆ ಶುರುವಾಗಿದೆ. 2022ನೇ ಸಾಲಿನ ಸಿನಿಮಾಗಳ ಪೈಕಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರನ್ನು ತಿಳಿಸುವ ಸಮಯ ಇದು. ಈವರೆಗೆ ಎಂಟು ವಿಭಾಗಗಳ ನಾಮನಿರ್ದೇಶನಗಳನ್ನು ಪ್ರಕಟಿಸಲಾಗಿದೆ. ಇನ್ನೂ ಆರು ವಿಭಾಗಗಳಲ್ಲಿ ನಾಮನಿರ್ದೇಶಿತರ ವಿವರ ಇಲ್ಲಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳು ಹಂತಹಂತವಾಗಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಲಿದೆ. ‘ಸಿನಿ ಸಮ್ಮಾನ’ದ ಕುರಿತ ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. prajavani.net/cinesamman

ಅತ್ಯುತ್ತಮ ಛಾಯಾಚಿತ್ರಗ್ರಹಣ



ಭುವನ್ ಗೌಡ
ಚಿತ್ರ: ಕೆ.ಜಿ.ಎಫ್ ಚಾಪ್ಟರ್ 2

ಅರವಿಂದ್ ಎಸ್.ಕಶ್ಯಪ್
ಚಿತ್ರ: ಕಾಂತಾರ

ಅರವಿಂದ್ ಎಸ್.ಕಶ್ಯಪ್
ಚಿತ್ರ: 777 ಚಾರ್ಲಿ



ಅಶೋಕ್ ಕಶ್ಯಪ್
ಚಿತ್ರ: ತಲೆದಂಡ

ಸಂತೋಷ್ ರೈ ಪಾತಾಜೆ
ಚಿತ್ರ: ಗಾಳಿಪಟ 2

ಅತ್ಯುತ್ತಮ ಸಂಕಲನ



ಪ್ರತೀಕ್ ಶೆಟ್ಟಿ, ಪ್ರಕಾಶ್ ಕೆ.ಎಂ
ಚಿತ್ರ: ಕಾಂತಾರ

ಉಜ್ವಲ್ ಕುಲಕರ್ಣಿ
ಚಿತ್ರ: ಕೆ.ಜಿ.ಎಫ್ ಚಾಪ್ಟರ್ 2



ಕುಮಾರ್ ಸಿ.ಎಚ್
ಚಿತ್ರ: ಮೆಟಡೊರ್

ಶಶಿಧರ್ ಪಿ
ಚಿತ್ರ: ಸದ್ದು! ವಿಚಾರಣೆ ನಡೆಯುತ್ತಿದೆ

ಉಜ್ವಲ್ ಚಂದ್ರ
ಚಿತ್ರ: ಧರಣಿ ಮಂಡಲ ಮಧ್ಯದೊಳಗೆ

ಅತ್ಯುತ್ತಮ ಚಿತ್ರಕಥೆ



ಪ್ರವೀಣ್ ಕೃಪಾಕರ್
ಚಿತ್ರ: ತಲೆದಂಡ

ಕಿರಣ್‌ರಾಜ್ ಕೆ
ಚಿತ್ರ: 777 ಚಾರ್ಲಿ

ಶ್ರೀಧರ್ ಶಿಕಾರಿಪುರ
ಚಿತ್ರ: ಧರಣಿ ಮಂಡಲ ಮಧ್ಯದೊಳಗೆ

ಹೇಮಂತ್‌ಕುಮಾರ್ ಎಲ್
ಚಿತ್ರ: ತುರ್ತು ನಿರ್ಗಮನ

ಎಸ್.ಎಸ್. ಸಜ್ಜನ್
ಚಿತ್ರ: ಫೋರ್‌ವಾಲ್ಸ್

ಅತ್ಯುತ್ತಮ ಹಿನ್ನೆಲೆ ಗಾಯಕ



ಮುದಕಣ್ಣ ಮೊರಬ
ಚಿತ್ರ: ಓಲ್ಡ್ ಮಾಂಕ್
ಗೀತೆ: ಗಿಚ್ಚ ಗಿಲಿ ಗಿಚ್ಚ ಗಿಲಿ

ಅರವಿಂದ್ ವೇಣುಗೋಪಾಲ್
ಚಿತ್ರ: ಮಾನ್ಸೂನ್ ರಾಗ
ಗೀತೆ: ಮೇಘರಾಜನ ರಾಗ

ಹರಿಚರಣ್
ಚಿತ್ರ: ಸಕುಟುಂಬ ಸಮೇತ
ಗೀತೆ: ಆ ಕನಸು

ಸಿದ್ ಶ್ರೀರಾಮ್
ಚಿತ್ರ: ಲವ್ 360
ಗೀತೆ: ಜಗವೇ ನೀನು

ಚಿಂತನ್ ವಿಕಾಸ್
ಚಿತ್ರ: ಫ್ಯಾಮಿಲಿ ಪ್ಯಾಕ್
ಗೀತೆ: ಬಿದ್ದಾಳಪ್ಪೋ

ಅತ್ಯುತ್ತಮ ಹಿನ್ನೆಲೆ ಗಾಯಕಿ



ಸುಪ್ರಿಯಾ ರಾಮ್
ಚಿತ್ರ: ಫೋರ್‌ವಾಲ್ಸ್
ಗೀತೆ: ಅಪ್ಪಯ್ಯ

ಅನ್ಶಾ ಶೆಟ್ಟಿ
ಚಿತ್ರ:777 ಚಾರ್ಲಿ
ಗೀತೆ: ಸಹಪಾಠಿ

ಮಂಗ್ಲಿ
ಚಿತ್ರ: ವೇದ
ಗೀತೆ: ಗಿಲ್ಲಕ್ಕೊ ಶಿವ

ಸಿರಿ ರವಿಕುಮಾರ್
ಚಿತ್ರ: ಸಕುಟುಂಬ ಸಮೇತ
ಗೀತೆ: ಸಂಗಾತಿ

ವಾರಿಜಾಶ್ರೀ
ಚಿತ್ರ: ತುರ್ತು ನಿರ್ಗಮನ
ಗೀತೆ: ಜೋರು ಜೋರಾಗಿ

ಅತ್ಯುತ್ತಮ ಗೀತ ಸಾಹಿತ್ಯ



ಪ್ರಮೋದ್ ಮರವಂತೆ
ಚಿತ್ರ: Once upon a time in ಜಮಾಲಿಗುಡ್ಡ
ಗೀತೆ: ರಂಗಾದ ರಗಳೆ

ಕೆ.ಕಲ್ಯಾಣ್
ಚಿತ್ರ: ಮಾನ್ಸೂನ್ ರಾಗ
ಗೀತೆ: ಮೇಘರಾಜನ ರಾಗ

ಗೌಸ್‌ಪೀರ್
ಚಿತ್ರ: ಧರಣಿ ಮಂಡಲ ಮಧ್ಯದೊಳಗೆ
ಗೀತೆ: ಮಾತು ಮಾತಲ್ಲೆ

ಡಾ.ವಿ.ನಾಗೇಂದ್ರ ಪ್ರಸಾದ್
ಚಿತ್ರ: ವೇದ
ಗೀತೆ: ಗಿಲ್ಲಕ್ಕೊ ಶಿವ

ಶ್ರೀ ತಲಗೇರಿ
ಚಿತ್ರ: ಫೋರ್‌ವಾಲ್ಸ್
ಗೀತೆ: ಕಣ್ಮಣಿಯೆ ಕಣ್ಮಣಿಯೆ


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘ಕರ್ನಾಟಕದಲ್ಲಿ ಮುಸ್ಲಿಮರ ಮೇಲೆ ಈಗ ನಿಯಂತ್ರಣವೇ ಇಲ್ಲದಂತಾಗಿದೆ. ಕಾಂಗ್ರೆಸ್ ಚುನಾವಣೆಯನ್ನು ಗೆದ್ದಿದೆಯಷ್ಟೇ, ಇನ್ನೂ ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸಿಲ್ಲ. ಆಗಲೇ ಮುಸ್ಲಿಮರು ಎಷ್ಟು ದೌರ್ಜನ್ಯ ನಡೆಸುತ್ತಿದ್ದಾರೆ’ ಎಂಬ ವಿವರ ಇರುವ ಟ್ವೀಟ್ ಮೇ 16ರಂದು ಪ್ರಕಟವಾಗಿದೆ. ಅಂದಿನಿಂದ ಆ ಟ್ವೀಟ್‌ನ ಸ್ಕ್ರೀನ್‌ಶಾಟ್‌ಗಳು ಮತ್ತು ಲಿಂಕ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಮುಸ್ಲಿಂ ವ್ಯಕ್ತಿಯೊಬ್ಬರು, ಪೊಲೀಸ್ ಅಧಿಕಾರಿಯೊಬ್ಬರ ಜತೆಗೆ ವಾಗ್ವಾದ ನಡೆಸುತ್ತಿರುವ ವಿಡಿಯೊವನ್ನೂ ಟ್ವೀಟ್ ಜತೆಗೆ ಹಂಚಿಕೊಳ್ಳಲಾಗಿದೆ. ಆದರೆ, ಈ ಟ್ವೀಟ್‌ನಲ್ಲಿ ಇರುವ ವಿವರ ಸುಳ್ಳು.

ಇದು ಕರ್ನಾಟಕಕ್ಕೆ ಸಂಬಂಧಿಸಿದ ವಿಡಿಯೊ ಅಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಇದು ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆ ಛೋಪಡಾ ಪಟ್ಟಣದಲ್ಲಿ ನಡೆದ ಘಟನೆ. 2021ರ ಮಾರ್ಚ್ 18ರಂದು ಈ ಘಟನೆ ನಡೆದಿತ್ತು. ಛೋಪಡಾ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಪೊಲೀಸರು ವಶಕ್ಕೆ ಪಡೆಯಲು ಮುಂದಾದಾಗ ವಾಗ್ವಾದ ನಡೆದಿತ್ತು. ಆಗಲೂ ವಿಡಿಯೊ ಬಗ್ಗೆ ಹಲವು ಸುಳ್ಳು ಸುದ್ದಿಗಳನ್ನು ಹರಿಬಿಡಲಾಗಿತ್ತು. ಈಗ ಮತ್ತೆ ಮಾಹಿತಿಯನ್ನು ತಿರುವಿ, ಕರ್ನಾಟಕದಲ್ಲಿ ಮುಸ್ಲಿಮರು ಪೊಲೀಸರಿಗೆ ಧಮಕಿ ಹಾಕುತ್ತಿದ್ದಾರೆ ಎಂದು ಸುಳ್ಳು ಸುದ್ದಿ ಹರಡಲಾಗಿದೆ’ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮಿತ-ಅಪರಿಮಿತ ಸುಖ

ವ್ಯಕ್ತಿ ಮಾತ್ರದ ವಿಭವ ವಿಶ್ವಾತ್ಮತಾನುಭವ |
ಮುಕ್ತಿಸುಖವಾಂತರಿಕವದು ನಿರವಧಿಸುಖ ||
ಬಾಕ್ತಪ್ರಪಂಚಸುಖವೆಂತಪರಿಮಿತವಹುದು ? |
ರಿಕ್ತಸುಖ ಬಾಹ್ಯಸುಖ- ಮಂಕುತಿಮ್ಮ || 888 ||

ಪದ-ಅರ್ಥ: ವಿಭವ = ಹಿರಿಮೆ, ಸಂಪತ್ತು, ವಿಶ್ವಾತ್ಮತಾನುಭವ = ವಿಶ್ವಾತ್ಮತಾ + ಅನುಭವ, ಮುಕ್ತಿಸುಖವಾಂತರಿಕವದು = ಮುಕ್ತಿಸುಖ + ಆಂತರಿಕವು + ಅದು, ನಿರವಧಿಸುಖ = ನಿರವಧಿ-(ನಿರಂತರವಾದ) + ಸುಖ, ಬಾಕ್ತಪ್ರಪಂಚಸುಖವೆಂತಪರಿಮಿತವಹುದು = ಭಾಕ್ತಪ್ರಪಂಚ(ಮತ್ತೊಂದನ್ನು ಆಶ್ರಯಿಸಿದ ಪ್ರಪಂಚ) + ಸುಖವು + ಎಂತು + ಅಪರಿಮಿತವು + ಅಹುದು, ರಿಕ್ತಸುಖ = ರಿಕ್ತ(ಕೆಳಮಟ್ಟದ) + ಸುಖ.

ವಾಚ್ಯಾರ್ಥ: ವ್ಯಕ್ತಿಯೊಬ್ಬನ ಹಿರಿಮೆ, ಸಂಪತ್ತೆಂದರೆ ಅವನಿಗಾದ ವಿಶ್ವಾತ್ಮತೆಯ ಅನುಭವ. ಮುಕ್ತಿ ಸುಖವೆಂಬುದು ಆಂತರಿಕವಾದದ್ದು, ಅದು ಶಾಶ್ವತವಾದದ್ದು. ಇಂದ್ರಿಯಗಳನ್ನು ಆಶ್ರಯಿಸಿದ ಪ್ರಪಂಚ ಸುಖ ಹೇಗೆ ಅಪರಿಮಿತವಾದೀತು? ಈ ಬಾಹ್ಯಸುಖ ಕೀಳು ಮಟ್ಟದ್ದು.

ವಿವರಣೆ: ಶ್ರೀ ರಾಮಕೃಷ್ಣ ಪರಮಹಂಸರು ನಿರ್ವಿಕಲ್ಪ ಸಮಾಧಿಯನ್ನು ಸಾಧಿಸಿಕೊಂಡಿದ್ದವರು. ಹಿಂದೂ, ಮುಸ್ಲಿಂ, ಕ್ರೈಸ್ತ ವಿಧಿವಿಧಾನಗಳನ್ನು ಶ್ರದ್ಧೆಯಿಂದ ಆಚರಿಸಿ ಅವೆಲ್ಲವುಗಳಲ್ಲಿಯೂ ಅದೇ ಪರಮಾತ್ಮನನ್ನು ಕಂಡವರು. ಸರ್ವಜೀವಿಗಳಲ್ಲಿ ಪರವಸ್ತುವಿನ ನಡೆಯನ್ನು ಗುರುತಿಸಿದವರು. ಅದು ಅವರಿಗೆ ಮಾತ್ರ ಸಾಧ್ಯವಾಯಿತು. ಅವರ ಸುತ್ತಮುತ್ತಲೂ ಇದ್ದವರಿಗೆ ಶ್ರೀ ರಾಮಕೃಷ್ಣರ ಸಾಧನೆಯ ಅರಿವಾದರೂ ಅವರಿಗೆ ಸ್ವತ: ದರ್ಶನ ಸಾಧ್ಯವಾಗಲಿಲ್ಲ. ಶ್ರೀ ರಾಮಕೃಷ್ಣರ ಸಾಧನೆ ವ್ಯಕ್ತಿಗತವಾದದ್ದು. ಯಾಕೆಂದರೆ ಅವರಿಗೆ ಮಾತ್ರ ಪ್ರಪಂಚದ ಎಲ್ಲ ಜೀವಿಗಳಲ್ಲಿ ಅದೇ ಚೈತನ್ಯವಿರುವುದು ಗೋಚರಿಸಿತ್ತು. ವಿಶ್ವಾತ್ಮತೆಯ ಅನುಭವವಾಗಿತ್ತು. ಅವರ ಜೊತೆಗೇ ಇದ್ದ ಅನೇಕರಿಗೆ ಅವರ ನಡೆ ವಿಚಿತ್ರವೆನ್ನಿಸಿತ್ತು, ಕೆಲವರು ಅವರಿಗೆ ಮತಿಭ್ರಾಂತಿಯಾಗಿದೆಎಂದು ಭಾವಿಸಿದ್ದರು. ಆ ಅದ್ಭುತ ಅನುಭವ ಶ್ರೀ ರಾಮಕೃಷ್ಣರ ವೈಯಕ್ತಿಕ ಹಿರಿಮೆ. ಹೀಗೆ ವಿಶ್ವಾತ್ಮತೆಯನ್ನು ಗುರುತಿಸಿದ, ಅನುಭವಿಸಿದ ಅನೇಕ ಸಾಧಕರಿಗೆ ಅದೊಂದು ವೈಯಕ್ತಿಕವಾದ ಅನುಭವ. ಅದು ಸಾರ್ವತ್ರಿಕವಾಗಲಾರದು. ಅಂತೆಯೇ ಆ ಸಾಧಕರಿಗೆ ದೊರೆತ ಸುಖ ಅಪರಿಮಿತವಾದದ್ದು ಯಾಕೆಂದರೆ ಅದು ಆಂತರಿಕವಾದದ್ದು. ಅದಕ್ಕೆ ಹೊರಪ್ರಪಂಚದ ಆಡಂಬರ, ಅಧಿಕಾರ, ಸಂಭ್ರಮ ಬೇಕಿಲ್ಲ. ಕಗ್ಗ ಹೇಳುತ್ತದೆ ಆಂತರಿಕವಾಗಿ ದೊರೆತ ಸುಖ ನಿರಂತರವಾದದ್ದು. ಯಾಕೆಂದರೆ ಅದು ಯಾವುದನ್ನೂ ಅವಲಂಬಿಸಿಲ್ಲ. ಆದರೆ ಇಂದ್ರಿಯಗಳಿಂದ ಗೋಚರವಾಗುವ ನಮ್ಮ ಸುತ್ತಮುತ್ತಲಿನ ಪ್ರಪಂಚದಿಂದ ಬರುವ ಸುಖ ಶಾಶ್ವತವಲ್ಲ. ಇದಕ್ಕೆ ಕಾರಣ, ಇಂದ್ರಿಯಗಳ ತೃಪ್ತಿ ಕೇವಲ ಕೆಲಕಾಲದ್ದು. ಇಷ್ಟವಾದದ್ದನ್ನು ತಿಂದರೆ ಸಂತೋಷ. ಆದರೆ ಮುಂದೆ ನಾಲ್ಕು ತಾಸಿಗೆ ಮತ್ತೊಂದರ ಬಯಕೆ. ಇದೇ ರೀತಿ ಇಂದ್ರಿಯಗಳ ಪ್ರಪಂಚ ಬೇಕುಗಳ ಪ್ರಪಂಚ. ಅದಕ್ಕೆ ಶಾಶ್ವತ ತೃಪ್ತಿ ಎನ್ನುವುದಿಲ್ಲ. ಅದಕ್ಕೇ ಕಗ್ಗ, ಬಾಹ್ಯಪ್ರಪಂಚದಿಂದ ದೊರೆಯುವ ಸುಖ ಅಪರಿಮಿತವಲ್ಲ ಎನ್ನುತ್ತದೆ. ಹೀಗೆ ಇಂದ್ರಿಯಗಳ ಮೂಲಕ ಪಡೆಯುವ ಸುಖ ಕೀಳುಮಟ್ಟದ್ದು. ಆಂತರಿಕ ಚಿಂತನೆಯಿಂದ ದೊರಕುವುದು ಶಾಶ್ವತಸುಖ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮೇ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುದ್ಧ ತೃತೀಯ ಗಂ. 23-20 ನಕ್ಷತ್ರ: ಮೃಗಶಿರಾ ಗಂ. 10-37 ಯೋಗ: ಧೃತಿ ಗಂ. 16-33, ಕರಣ: ತೈತಿಲ ಗಂ. 10-41, ವೃಷಭ ಮಾಸದ 07 ನೇ ದಿನ, ಮಳೆನಕ್ಷತ್ರ: ಕೃತ್ತಿಕ 4. ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-07 ಸೂರ್ಯಾಸ್ತ : 06-47, ಮುಸ್ಲಿಂ ದಿನಾಂಕ : 02 ಜುಲ್ಖಾಯದ್, ದಿನ ವಿಶೇಷ : ರಂಭಾ ತೃತೀಯ, ಪ್ರತಾಪ ಜಯಂತಿ (ರಾಜಸ್ಥಾನ)
ಅದೃಷ್ಟ ಸಂಖ್ಯೆ : 1, 12

ಮೇಷ: ಉದ್ಯೋಗದಲ್ಲಿ ಬದಲಾವಣೆ ಬಯಸಿದರೆ ಸ್ವಲ್ಪ ದಿನಗಳ ಕಾಲ ಕಾಯುವುದು ಅವಶ್ಯವಾಗಲಿದೆ. ಸಂಸಾರದ ವಿಷಯಗಳತ್ತ ಹೆಚ್ಚು ಗಮನಹರಿಸಬೇಕಾಗುವುದು. ಸ್ನೇಹಿತರ ಸಹಕಾರ ದೊರೆತು ಅಭಿಲಾಷೆ ಪೂರೈಸುವುದು.

ವೃಷಭ: ಚಟುವಟಿಕೆಗಳ ಒತ್ತಡದ ನಡುವೆ ಇತರರಿಗೆ ಸಹಾಯ ಮಾಡುವ ನಿಮ್ಮ ಪರೋಪಕಾರ ಮನೋಭಾವದಿಂದ ಯಶಸ್ಸು ಲಭಿಸಲಿದೆ. ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಬಂಡವಾಳ ತೊಡಗಿಸುವುದು ಸರಿಯಲ್ಲ.

ಮಿಥುನ: ಸಹೋದರನ ವ್ಯಾಪಾರ ವಹಿವಾಟುಗಳ ವಿಚಾರಗಳಿಗೆ ಸಹಕಾರವಾಗುವಂತಹ ಸಲಹೆಗಳನ್ನು ತಿಳಿಹೇಳಬಹುದು. ರಾಜಕಾರಣದ ರಹಸ್ಯ ಮಾತುಕತೆಗಳಲ್ಲಿ ನಿಮ್ಮ ಸ್ಥಾನ ಪ್ರಮುಖವಾಗಿರುವುದು. ಶಿವನನ್ನು ಆರಾಧಿಸಿ.

ಕರ್ಕಾಟಕ: ಬಂಧು ಮಿತ್ರರ ಸಲಹೆಗಳಿಗೆ ಗಮನ ನೀಡಿದ್ದರಿಂದಾಗಿ ನೀವು ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲಿದ್ದೀರಿ. ಅತಿಯಾದ ಖರ್ಚುವೆಚ್ಚಗಳು ತಗ್ಗುವುದು. ದಿನ ಹಂತ ಹಂತವಾಗಿ ಪ್ರಗತಿ ಪ್ರಾಪ್ತಿಯಾಗಲಿದೆ.

ಸಿಂಹ: ಯಾವುದೇ ಸಂದರ್ಭದಲ್ಲೂ ಒತ್ತಡಕ್ಕೆ ಸಿಲುಕದೆ ಕಾರ್ಯನಿರ್ವಹಿಸುವ ನೀವು ಎಲ್ಲರಿಂದಲೂ ಗುರುತಿಸಲ್ಪಡುವಿರಿ. ಬಹುದಿನಗಳಿಂದ ನಿರೀಕ್ಷಿಸಿದ ಪುತ್ರನ ಉದ್ಯೋಗವು ಹತ್ತಿರದಲ್ಲಿ ಕೆಲಸ ಪ್ರಾಪ್ತಿಯಾಗುವುದು.

ಕನ್ಯಾ: ಮುಕ್ತ ಮನೋಭಾವದಿಂದಾಗಿ ನೀವಾಡುವ ಮಾತುಗಳಿಂದಲೇ ಗುಪ್ತ ವಿಷಯಗಳು ಇತರರ ಮುಂದೆ ಬಹಿರಂಗಗೊಳ್ಳಲಿದೆ. ರಾಜಕೀಯ ರಂಗದವರಿಗೆ ವರಿಷ್ಠರೊಂದಿಗಿನ ಮಾತುಕತೆ ಅನುಕೂಲ ಉಂಟುಮಾಡಲಿದೆ.

ತುಲಾ: ವ್ಯವಹಾರದಲ್ಲಿ ಎದುರಾಗಿರುವ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವುದು ಉತ್ತಮ. ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ವೃತ್ತಿಯಲ್ಲಿ ಪೈಪೋಟಿ ಎದುರಿಸುವಿರಿ.

ವೃಶ್ಚಿಕ: ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವುದು ಒಳ್ಳೆಯದು. ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ಈ ದಿನ ತಿಳಿಯುವುದು. ಕಾಗದಪತ್ರಗಳಿಗೆ ಓದಿ ಸಹಿ ಹಾಕುವುದನ್ನು ಅಭ್ಯಸಿಸಿಕೊಳ್ಳಿರಿ.

ಧನು: ಬಟ್ಟೆಯ ವ್ಯಾಪಾರ ನಡೆಸುವವರು ಉದ್ಯೋಗದಲ್ಲಿ ಬಂಡವಾಳ ಹೂಡುವಂಥ ಕೆಲಸ ಈ ದಿನ ಮಾಡುವುದು ಸಮಂಜಸವಲ್ಲ. ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ಬಹು ಮಟ್ಟಿಗೆ ನಿರೀಕ್ಷಿತ ಫಲ ಲಭಿಸಲಿದೆ.

ಮಕರ: ಉದ್ಯೋಗಸ್ಥ ಮಹಿಳೆಯರಿಗೆ ಬಡ್ತಿ ದೊರೆಯುವ ಸಂಭವ. ನೂತನ ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣ ಕಾರ್ಯ ಮುಂದೂಡುವುದು ಉತ್ತಮ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಅಧಿಕಾರ ಪಡೆದುಕೊಳ್ಳುವಿರಿ.

ಕುಂಭ: ಕೈಗೊಂಡ ಕೆಲಸಗಳ ಬಗೆಗೆ ಮುತುವರ್ಜಿ ವಹಿಸುವುದರಿಂದ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕೆಲಸ ಪೂರ್ಣಗೊಳ್ಳುವುದು. ಸ್ವಾರ್ಥದಿಂದ ವ್ಯವಹರಿಸಿದ ಪರಿಣಾಮ ಪಶ್ಚಾತಾಪ ಪಡುವಂತಾಗುವುದು.


ಮೀನ: ಮುಂದೂಡಲ್ಪಟ್ಟಿದ್ದ ದೂರದ ಪ್ರಯಾಣ ಅನಿವಾರ್ಯತೆ ಸನ್ನಿವೇಶದಿಂದ ಕೈಗೊಳ್ಳಬೇಕಾಗುತ್ತದೆ. ಸಂಸಾರದ ಘನತೆ ಹೆಚ್ಚಿಸುವುದಕ್ಕಾಗಿ ಸಾಹಸ ಪಡುತ್ತಿರುವ ನಿಮಗೆ ಹೆಂಡತಿ ಮಕ್ಕಳು ನೆರವಾಗುವರು.

ಪದಬಂಧ 5326

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಯೋಗವಿದ್ದಾಗ ಆದ ವೆಚ್ಚ! (4)
2.ಒಳ್ಳೆಯ ಬುದ್ಧಿ (3)
4.ಕರುವಿಗೆ ತೋರಿದ ದಯೆ (3)
6.ಪಾಯ ಹಾಕುವಾಗ ಹೂಡಿದ ಯುಕ್ತಿ (3)
7.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಮೆಲ್ಲಗೆ ಕಿತ್ತು ಮುಡಿದ ಸುವಾಸಿತ ಹೂ (3)
13.ಗರ ಬಡಿದಿರುವ ಪಟ್ಟಣ (3)
14.ಗುಂಪು ಇಲ್ಲಿಕಾಣುತ್ತಿದೆ (4)

ಮೇಲಿಂದ ಕೆಳಕ್ಕೆ
1.ಬಿಡುವು ಹೀಗೆ ದೊರಕಿದೆ (3)
2.ಮಯನ ಹತ್ತಿರ ಕಳೆದ ಕಾಲ (3)
3.ಭಿಕ್ಷುಕನನ್ನು ಹೀಗೂ ಕರೆವರು (4)
5.ತಿರುಗಿ ಮಾಡಿದ ಕೆಲಸ (3)
6.ದಾಹವಿದ್ದಾಗ ನೀಡಿದ ದೃಷ್ಟಾಂತ (5)
8. ಸಾವು ಇಲ್ಲಿ ಉಲ್ಟಾ ಪಲ್ಟಾಆಗಿದೆ (3)
9.ಕೊನೆಗೆ ಮನನವನ್ನಿಟ್ಟು ಮಾಡಿದ ಹೋಲಿಕೆ (4)
10.ಹತ್ತು ನೂರಿದು (3)
12.ಗೆಳತಿಯೊಡನಿರುವ ಸ್ನೇಹಿತ (3)



5325ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಸುಮಾತು
3.ಉಮಅ 5.ವಾರ್ತೆ
6.ಯಜಮಾನ 9.ಪದವೀದಾನ
12.ಮನೋಗತ 14.ಮಾಸ
15.ಸ್ವಹರ 16.ವಾಚನಾಲಯ

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಮಾತುಲ
4.ಅಭಿನಯ 7.ಜವಾನ
8.ಹವೀಜ 9.ಪಲ್ಲಂಗ
10.ಸಾಮರಸ್ಯ 11.ಸುಸಮಯ
13.ಚಮಚ

ಸುಡೊಕು 5712

	4		1		3	5		7
7		6	4				3	1
	3				7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5711 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹525
	12 ಮೊಟ್ಟೆಗೆ	₹72
ಮೈಸೂರು	100 ಮೊಟ್ಟೆಗೆ	₹530



₹2,000 ನೋಟು ಹಿಂಪಡೆಯಲಿರುವ ಆರ್‌ಬಿಐ

ಚಿನ್ನ, ಬೆಳ್ಳಿಗೆ ಹೆಚ್ಚಿದ ವಿಚಾರಣೆ

ಮುಂಬೈ (ಪಿಟಿಐ): ₹2,000 ಮುಖ ಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಕಟಿಸಿದ ನಂತರದಲ್ಲಿ, ಚಿನ್ನ ಹಾಗೂ ಬೆಳ್ಳಿ ಖರೀದಿಗೆ ಗ್ರಾಹಕರು ವಿಚಾರಿಸುತ್ತಿರುವುದು ಹೆಚ್ಚಾಗಿದೆ ಎಂದು ಚಿನ್ನಾಭರಣ ವರ್ತಕರು ಹೇಳಿದ್ದಾರೆ.

ಆದರೆ, 2016ರಲ್ಲಿ ನೋಟು ರದ್ದತಿ ನಂತರದಲ್ಲಿ ಕಂಡುಬಂದಿದ್ದ ಆತುರದ ಖರೀದಿ ಈಗ ಇಲ್ಲ ಎಂದು ಅಖಿಲ ಭಾರತ ಮುತ್ತು ಮತ್ತು ಆಭರಣ ಮಂಡಳಿ (ಜಿಜೆಸಿ) ಭಾನುವಾರ ಹೇಳಿದೆ.

ಕಳೆದ ಎರಡು ದಿನಗಳಲ್ಲಿ ₹2,000 ಮುಖಬೆಲೆಯ ನೋಟುಗಳನ್ನು ನೀಡಿ ಚಿನ್ನ ಖರೀದಿಸುವುದು ಕಡಿಮೆ ಪ್ರಮಾಣದಲ್ಲಿದೆ. ಕೆವೈಸಿ ನಿಯಮಗಳನ್ನು ಬಿಗಿಗೊಳಿಸಿರುವುದು ಇದಕ್ಕೆ ಮುಖ್ಯ ಕಾರಣ. ಆದರೆ, ಕೆಲವು ವರ್ತಕರು ₹2,000 ಮುಖಬೆಲೆಯ ನೋಟು ನೀಡಿ ಆಭರಣ ಖರೀದಿಸುವವರಿಂದ ಶೇ 5ರಿಂದ ಶೇ 10ರವರೆಗೆ



ಹೆಚ್ಚುವರಿ ಮೊತ್ತ ಪಡೆಯಲು ಆರಂಭಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'₹2,000 ಮುಖಬೆಲೆಯ ನೋಟುಗಳನ್ನು ನೀಡಿ ಚಿನ್ನ, ಬೆಳ್ಳಿ ಖರೀದಿಸಲು ಗ್ರಾಹಕರು ವರ್ತಕರಲ್ಲಿ ವಿಚಾರಿಸುತ್ತಿರುವುದು ಹೆಚ್ಚಾಗಿದೆ. ಹೀಗಾಗಿ ಶನಿವಾರ ಚಿನ್ನಾಭರಣ ಮಳಿಗೆಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಿತ್ತು. ಆದರೆ, ಕೆವೈಸಿ ನಿಯಮಗಳು ಬಿಗಿಯಾಗಿರುವ ಕಾರಣ, ಖರೀದಿ ಪ್ರಮಾಣ ಕಡಿಮೆಯೇ ಇದೆ' ಎಂದು ಮಂಡಳಿ ಅಧ್ಯಕ್ಷ ಸೈಯಂ ಮೆಹ್ರಾ ಹೇಳಿದ್ದಾರೆ.

ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಆರ್‌ಬಿಐ ನಾಲ್ಕು ತಿಂಗಳ ಕಾಲಾವಕಾಶ ನೀಡಿರುವ ಕಾರಣ ಜನ ಚಿನ್ನ ಖರೀದಿಗೆ ಮಳಿಗೆಗಳಿಗೆ ಬರುತ್ತಿರುವ ಪ್ರಮಾಣ ಕಡಿಮೆ ಇದೆ ಎಂದು ಅವರು ಹೇಳಿದ್ದಾರೆ.

'ಚಿನ್ನ ಮಾರುವಾಗ ₹2,000 ಮುಖಬೆಲೆಯ ನೋಟು ಪಡೆದು, ಹೆಚ್ಚುವರಿ ಹಣ ಪಡೆಯುವ ಪ್ರವೃತ್ತಿಯು ಅಸಂಘಟಿತ ನೆಲೆಯಲ್ಲಿ ನಡೆದಿರಬಹುದು. ಸಂಘಟಿತ ಮಳಿಗೆಗಳು ಇಂತಹ ಕೆಲಸಕ್ಕೆ ಕೈಹಾಕುವುದಿಲ್ಲ' ಎಂದು ಪಿಎನ್‌ಜಿ ಜುವೆಲರ್ಸ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸೌರಭ್ ಗಾಡ್ಗೀಳ್ ಹೇಳಿದ್ದಾರೆ.

ಮುಖ್ಯಾಂಶಗಳು
- ಹೆಚ್ಚಿನ ಬೆಲೆಗೆ ಚಿನ್ನ ಮಾರುತ್ತಿರುವ ವರ್ತಕರು
- ಮಳಿಗೆಗಳಲ್ಲಿ ಹೆಚ್ಚಿದ ಗ್ರಾಹಕರ ಸಂಖ್ಯೆ

ಹೂಡಿಕೆ: ನೆರವಿಗೆ 3 ಕ್ಯಾಲ್ಕುಲೇಟರ್



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಹೂಡಿಕೆ ಮಾಡುವ ಮುನ್ನ ಸರಿಯಾದ ಲೆಕ್ಕಾಚಾರ ಮಾಡುವುದು ಬಹಳ ಮುಖ್ಯ. ಎಷ್ಟು ಮೊತ್ತ ಹೂಡಿಕೆ ಮಾಡಿದರೆ ಎಷ್ಟು ಲಾಭ ಬರುತ್ತದೆ, ಯಾವ ಹೂಡಿಕೆ ಪರಿಗಣಿಸಬೇಕು, ಯಾವುದನ್ನು ಪರಿಗಣಿಸಬಾರದು, ಬೆಲೆ ಏರಿಕೆ ಪ್ರಮಾಣ ಮೀರಿ ಹೂಡಿಕೆಯಲ್ಲಿ ಲಾಭ ಗಳಿಸುವುದು ಹೇಗೆ... ಹೀಗೆ ಅನೇಕ ಲೆಕ್ಕಾಚಾರಗಳನ್ನು ಹೂಡಿಕೆದಾರ ಮಾಡಬೇಕಾಗುತ್ತದೆ.

ಅಂತಹ ಲೆಕ್ಕಾಚಾರಗಳಲ್ಲಿ ನೆರವಾಗುವ ಮೂರು ಬಗೆಯ ಕ್ಯಾಲ್ಕುಲೇಟರ್‌ಗಳ ಬಗ್ಗೆ ತಿಳಿಯೋಣ.



1. ಲಮ್‌ಸಮ್ ಇನ್ವೆಸ್ಟ್‌ಮೆಂಟ್ ಕ್ಯಾಲ್ಕುಲೇಟರ್: ಮ್ಯೂಚುವಲ್ ಫಂಡ್‌ನಲ್ಲಿ ಒಂದೇ ಬಾರಿಗೆ ಹೂಡಿಕೆ ಮಾಡುವ ಮೊತ್ತವನ್ನು ಲಮ್‌ಸಮ್ ಎಂದು ಕರೆಯುತ್ತಾರೆ. ಒಮ್ಮೆಗೇ ₹5 ಸಾವಿರ, ₹10 ಸಾವಿರ, ₹15 ಸಾವಿರ, ₹1 ಲಕ್ಷ , ₹10 ಲಕ್ಷ ಹೀಗೆ ಒಂದಿಷ್ಟು ಮೊತ್ತವನ್ನು ಒಂದೇ ಬಾರಿಗೆ ಹೂಡಿಕೆ ಮಾಡುವುದನ್ನು ಲಮ್‌ಸಮ್ ಎಂದು ಪರಿಗಣಿಸಬಹುದು. ಲಮ್‌ಸಮ್ ಮೊತ್ತ ಹೂಡಿಕೆ ಮಾಡಿದರೆ ಆ ಮೊತ್ತ ಕೆಲವು ವರ್ಷಗಳ ಬಳಿಕ ಎಷ್ಟರ ಮಟ್ಟಿಗೆ ಬೆಳವಣಿಗೆ ಸಾಧಿಸಬಹುದು ಎನ್ನುವುದನ್ನು ಲಮ್‌ಸಮ್ ಕ್ಯಾಲ್ಕುಲೇಟರ್ ತಿಳಿಸಿಕೊಡುತ್ತದೆ.

ಉದಾಹರಣೆಗೆ, ₹1 ಲಕ್ಷವನ್ನು ಇಂದು ಹೂಡಿಕೆ ಮಾಡುತ್ತೀರಿ ಎಂದುಕೊಳ್ಳೋಣ. ವಾರ್ಷಿಕ ಶೇ 12ರಷ್ಟು ಲಾಭ ಸಿಕ್ಕು, 10 ವರ್ಷಗಳ ಬಳಿಕ ಆ ಮೊತ್ತ ಒಟ್ಟು ₹2,10,585 ಲಾಭ ತಂದುಕೊಡುತ್ತದೆ. ಅಸಲಿನ ಮೊತ್ತ ಸೇರಿಸಿದರೆ ಒಟ್ಟು ಮೌಲ್ಯ ₹3,10,585 ಆಗುತ್ತದೆ. (ಹೆಚ್ಚಿನ ಮಾಹಿತಿಗಾಗಿ ಪಟ್ಟಿ ಗಮನಿಸಿ)

2. ಎಸ್‌ಐಪಿ ಇನ್ವೆಸ್ಟ್‌ಮೆಂಟ್ ಕ್ಯಾಲ್ಕುಲೇಟರ್: ಮ್ಯೂಚುವಲ್ ಫಂಡ್‌ನಲ್ಲಿ ಪ್ರತಿ ತಿಂಗಳು ನಿರ್ದಿಷ್ಟ ದಿನಾಂಕಕ್ಕೆ ನಿಯಮಿತವಾಗಿ ಹೂಡಿಕೆ ಮಾಡುವುದನ್ನು ಎಸ್‌ಐಪಿ ಎನ್ನುತ್ತಾರೆ. ಉದಾಹರಣೆಗೆ, ಪ್ರತಿ ತಿಂಗಳು ₹1 ಸಾವಿರ, ₹2 ಸಾವಿರ, ₹5 ಸಾವಿರ, ₹10 ಸಾವಿರ, ₹25 ಸಾವಿರ, ₹50 ಸಾವಿರ ಹೀಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಮೊತ್ತ ನಿಗದಿ ಮಾಡಿ ಮಾಸಿಕವಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಮ್ಯೂಚುವಲ್ ಫಂಡ್ ಎಸ್‌ಐಪಿ ಎನ್ನುತ್ತಾರೆ.

ಹೀಗೆ ಮಾಸಿಕವಾಗಿ ಹೂಡಿಕೆ ಮಾಡಿದ ಮೊತ್ತ ಹಾಗೂ ಅದಕ್ಕೆ ಸಿಗುವ ಲಾಭವನ್ನು ಲೆಕ್ಕ ಹಾಕಲು ಎಸ್‌ಐಪಿ ಇನ್ವೆಸ್ಟ್‌ಮೆಂಟ್ ಕ್ಯಾಲ್ಕುಲೇಟರ್ ಬೇಕು. ಉದಾಹರಣೆಗೆ, 10 ವರ್ಷಗಳ ಕಾಲ ಪ್ರತಿ ತಿಂಗಳು ₹10 ಸಾವಿರ ಹೂಡಿಕೆ ಮಾಡುತ್ತಾ ಹೋದರೆ ಶೇ 12ರಷ್ಟು ಲಾಭ ದೊರೆತು, ಅಸಲು ಹೂಡಿಕೆ ಮೊತ್ತ ₹12 ಲಕ್ಷ ಸೇರಿ ಒಟ್ಟು ₹23,23,391 ಸಿಗುತ್ತದೆ. (ಹೆಚ್ಚಿನ ಮಾಹಿತಿಗಾಗಿ ಪಟ್ಟಿ ಗಮನಿಸಿ)

3. ಇನ್‌ಫ್ಲೇಷನ್ ಕ್ಯಾಲ್ಕುಲೇಟರ್: ಬೆಲೆ ಏರಿಕೆ ಕಾರಣದಿಂದಾಗಿ ನಮ್ಮ ಹಣ ಮೌಲ್ಯ ಕಳೆದುಕೊಳ್ಳುತ್ತಿರುತ್ತದೆ. ಉದಾಹರಣೆಗೆ, 10 ವರ್ಷಗಳ ಹಿಂದೆ ಪ್ರತಿ ಲೀಟರ್ ಹಾಲಿನ ಬೆಲೆ ₹18 ಇತ್ತು. ಈಗ ಅದೇ ಹಾಲಿನ ಬೆಲೆ ₹38 ಆಗಿದೆ. ಅಂದರೆ ಬೆಲೆ ಏರಿಕೆಯ ಕಾರಣದಿಂದ ದುಡ್ಡಿನ ಮೌಲ್ಯ ಕುಸಿಯುತ್ತದೆ.

ಉನ್ನತ ವ್ಯಾಸಂಗಕ್ಕೆ ಇವತ್ತಿನ ಬೆಲೆಯಲ್ಲಿ ₹5 ಲಕ್ಷ ಖರ್ಚಾಗುತ್ತಿದೆ ಎಂದು ಭಾವಿಸೋಣ. ಇದರಂತೆ 20 ವರ್ಷಗಳ ಬಳಿಕ ಉನ್ನತ ವ್ಯಾಸಂಗಕ್ಕೆ ಸಮಾರು ₹16 ಲಕ್ಷ ಬೇಕಾಗಬಹುದು. ವಾರ್ಷಿಕ ಶೇ 6ರ ಹಣದುಬ್ಬರ (ಬೆಲೆ ಏರಿಕೆ) ಪರಿಗಣಿಸಿ, ಈ ಲೆಕ್ಕಾಚಾರ ಮಾಡಲಾಗಿದೆ.

ಈ ಕ್ಯಾಲ್ಕುಲೇಟರ್‌ಗಳು ಎಲ್ಲಿ ಸಿಗುತ್ತವೆ?: ಗ್ರೋ, ಅಪ್‌ಸ್ಟಾಕ್, ಐಸಿಐಸಿಐ, ಅಡ್ವೈಸರ್ ಕೋಚ್ ಸೇರಿದಂತೆ ಬಹುತೇಕ ಹೂಡಿಕೆ ಮತ್ತು ಬ್ಯಾಂಕಿಂಗ್ ವೆಬ್‌ಸೈಟ್‌ಗಳು ವಿವಿಧ ಮಾದರಿಯ ಇನ್ವೆಸ್ಟ್‌ಮೆಂಟ್ ಕ್ಯಾಲ್ಕುಲೇಟರ್‌ಗಳನ್ನು ಒದಗಿಸುತ್ತವೆ. ಈ ಬಗೆಯ ಕ್ಯಾಲ್ಕುಲೇಟರ್‌ಗಳನ್ನು ಬಳಸಿ ಸುಲಭದಲ್ಲಿ ಹೂಡಿಕೆ ಅಂದಾಜು ಮಾಡಬಹುದು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಲಮ್‌ಸಮ್ ಕ್ಯಾಲ್ಕುಲೇಟರ್	
ಒಟ್ಟು ಹೂಡಿಕೆ ಮೊತ್ತ	₹1 ಲಕ್ಷ
ನಿರೀಕ್ಷಿತ ಲಾಭ (ವಾರ್ಷಿಕ)	ಶೇ 12
ಹೂಡಿಕೆ ಅವಧಿ	10 ವರ್ಷಗಳು
ಅಸಲು ಮತ್ತು ಲಾಭ ಸೇರಿದ ಮೊತ್ತ	₹3,10,585 (ಹೂಡಿಕೆ ₹1 ಲಕ್ಷ + ಲಾಭ ₹2,10,585)

ಎಸ್‌ಐಪಿ ಇನ್ವೆಸ್ಟ್‌ಮೆಂಟ್ ಕ್ಯಾಲ್ಕುಲೇಟರ್	
ಎಸ್‌ಐಪಿ ಹೂಡಿಕೆ ಮೊತ್ತ	₹10 ಸಾವಿರ
ನಿರೀಕ್ಷಿತ ಲಾಭ (ವಾರ್ಷಿಕ)	ಶೇ 12
ಹೂಡಿಕೆ ಅವಧಿ	10 ವರ್ಷ
ಅಸಲು ಮತ್ತು ಲಾಭ ಸೇರಿ ಸಿಗುವ ಮೊತ್ತ	₹23,23,391

ಇನ್‌ಫ್ಲೇಷನ್ ಕ್ಯಾಲ್ಕುಲೇಟರ್ (ಫ್ಯೂಚರ್ ವ್ಯಾಲ್ಯೂ ಕ್ಯಾಲ್ಕುಲೇಟರ್)	
ಉನ್ನತ ವ್ಯಾಸಂಗಕ್ಕೆ ಈಗ ಬೇಕಾಗುವ ಮೊತ್ತ	₹5 ಲಕ್ಷ
ಉನ್ನತ ವ್ಯಾಸಂಗಕ್ಕೆ 20 ವರ್ಷಗಳ ಬಳಿಕ ಬೇಕಾಗುವ ಮೊತ್ತ	₹16 ಲಕ್ಷ
ವಾರ್ಷಿಕ ಬೆಲೆ ಏರಿಕೆ ದರ	ಶೇ 6

ಅನಿಶ್ಚಿತತೆ, ಕುಸಿದ ಸೂಚ್ಯಂಕಗಳು

ಮೇ 19ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 61,729 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.48ರಷ್ಟು ಇಳಿಕೆ ದಾಖಲಿಸಿದೆ. 18,203 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.60ರಷ್ಟು ತಗ್ಗಿದೆ.

ಷೇರುಪೇಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಉತ್ಸಾಹ ಹೆಚ್ಚಿದೆ, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಉತ್ತಮ ಸಾಧನೆ ಕಂಡುಬಂದಿದೆ. ಹೀಗಿದ್ದರೂ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಇರುವುದರಿಂದ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 3ರಷ್ಟು ಕುಸಿದಿದೆ. ಮಾಧ್ಯಮ ಸೂಚ್ಯಂಕ ಶೇ 2ರಷ್ಟು, ಅನಿಲ ಮತ್ತು ತೈಲ ಸೂಚ್ಯಂಕ ಶೇ 1.8ರಷ್ಟು ಇಳಿಕೆಯಾಗಿವೆ. ನಿಫ್ಟಿ ರಿಯಲ್ ಎಸ್ಟೇಟ್ ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ತಲಾ ಶೇ 1ರಷ್ಟು ಜಿಗಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,098.2 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು ₹677.45 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ – ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್‌ಮಿಷನ್, ಅವೆನ್ಯೂ ಸೂಪರ್ ಮಾರ್ಟ್ಸ್, ಡಿವೀಸ್ ಲ್ಯಾಬೊರೇಟರಿಸ್, ಸೀಮನ್ಸ್ ಮತ್ತು ಎಸ್‌ಆರ್‌ಎಫ್ ಕುಸಿದಿವೆ. ಡಿಎಲ್‌ಎಫ್, ಟಾಟಾ ಮೋಟರ್ಸ್ ಡಿವಿಆರ್, ಹೀರೊ ಮೋಟೊಕಾರ್ಪ್, ನೈಕಾ, ಇಂಡಸ್ ಇಂಡ್ ಬ್ಯಾಂಕ್, ಪೇಟಿಎಂ, ಜೊಮಾಟೊ ಮತ್ತು ಇಂಡಿಯನ್ ಆಯಿಲ್ ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಬಿಪಿಸಿಎಲ್, ಬಜಾಜ್ ಎಲೆಕ್ಟ್ರಿಕಲ್ಸ್, ಬಯೋಕಾನ್, ಬಿನ್ನಿ ಮಿಲ್ಸ್, ಡಿಕ್ಸಾನ್, ರೇಡಿಯೊ ಸಿಟಿ, ಟೈಮೆಕ್ಸ್, ಟಿಟಿಕೆ ಹೆಲ್ತ್, ಹಿಂಡಾಲ್ಕೊ, ಇಂಡಿಯಾ ಸಿಮೆಂಟ್ಸ್ ಲಿ., ಐಟಿಡಿಸಿ, ನೈಕಾ, ಪ್ರೂಡೆಂಟ್, ಸಿಂಗರ್, ವಂಡರ್ ಲಾ, ಎಚ್‌ಸಿಜಿ, ಐಆರ್‌ಎಫ್‌ಸಿ, ಪವರ್ ಇಂಡಿಯಾ, ಎಸ್‌ಎಐಎಲ್, ಜೀ, ಬಿಇಎಂಎಲ್, ಬಿಎಚ್‌ಇಎಲ್, ಇಂಡಿಗೊ ಪೇಂಟ್ಸ್, ಎನ್‌ಸಿಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು, ದೇಶಿ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

370ನೇ ವಿಧಿ ಮರುಸ್ಥಾಪಿಸುವವರೆಗೆ ಚುನಾವಣೆಗೆ ಸ್ಪರ್ಧಿಸಲ್ಲ: ಮುಫ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ 370ನೇ ವಿಧಿ ಮರುಸ್ಥಾಪಿಸುವವರೆಗೂ ವಿಧಾನಸಭೆ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ' ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿ ಹೇಳಿದರು.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಮ್ಮು ಮತ್ತು ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನವು ಒಕ್ಕೂಟ ವ್ಯವಸ್ಥೆಗೆ ಅತ್ಯುತ್ತಮ ಉದಾಹರಣೆಯಾಗಿತ್ತು. ಆದರೆ, ಕೇಂದ್ರ ಸರ್ಕಾರವು 370ನೇ ವಿಧಿಯನ್ನು ರದ್ದುಗೊಳಿಸುವ ಮೂಲಕ ರಾಜ್ಯವನ್ನು ಛಿದ್ರಗೊಳಿಸಿತು. ಇಲ್ಲಿ ಭದ್ರತೆಯ ಹೆಸರಿನಲ್ಲಿ ಪ್ರತಿದಿನ ಕಿರುಕುಳ ಮತ್ತು ತಪಾಸಣೆ ನಡೆಯುತ್ತಿದೆ. ಜಮ್ಮು ಮತ್ತು ಕಾಶ್ಮೀರ ವಿಶ್ವದಲ್ಲೇ ಅತ್ಯಂತ ಮಿಲಿಟರೀಕೃತ ರಾಜ್ಯವಾಗಿ ಮಾರ್ಪಟ್ಟಿದೆ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಪಕ್ಷ ಪೀಪಲ್ಸ್



ಮೆಹಬೂಬ ಮುಫ್ತಿ

ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಸ್ಪರ್ಧಿಸುತ್ತದೆ. ಆದರೆ, ನಾನು ಸ್ಪರ್ಧಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನ ಪಾಸ್‌ಪೋರ್ಟ್ ಕಿತ್ತುಕೊಳ್ಳಲಾಗಿತ್ತು. ನನ್ನ ಮಗಳಿಗೆ ಇದುವರೆಗೂ ಪಾಸ್‌ಪೋರ್ಟ್ ಸಿಕ್ಕಿಲ್ಲ. ಕಾಶ್ಮೀರದಲ್ಲಿ ಎಲ್ಲವೂ ಸರಿಯಾಗಿಲ್ಲ ಇಂತಹ ಪರಿಸ್ಥಿತಿಯಲ್ಲಿ ಜಿ–20 ಶೃಂಗಸಭೆ ಆಯೋಜಿಸಿ ವಿಶ್ವಗುರುವಾಗುವುದಕ್ಕಿಂತ, ಸಾರ್ಕ್ ಶೃಂಗಸಭೆಯನ್ನು ಆಯೋಜಿಸಿ ಸ್ಥಳೀಯ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು. ಕಾಶ್ಮೀರದ ಸಮಸ್ಯೆಯ ಬಗ್ಗೆ ಈ ಹಿಂದೆ ಪಾಕಿಸ್ತಾನ ಮಾತ್ರ ಮಾತಾಡುತ್ತಿತ್ತು. ಈಗ ಚೀನಾ ಸಹ ಮಾತನಾಡುತ್ತಿರುವುದು ಬಿಜೆಪಿಯ ಕೊಡುಗೆ' ಎಂದು ಆರೋಪಿಸಿದರು.

'ಕೇಂದ್ರದ ಬಿಜೆಪಿ ಸರ್ಕಾರ ದೇಶದ ಯಾವುದೇ ವಿರೋಧಪಕ್ಷಗಳನ್ನು ಉಳಿಸುತ್ತಿಲ್ಲ. ದೆಹಲಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಇಡೀ ದೇಶಕ್ಕೆ ಎಚ್ಚರಿಕೆ ಗಂಟೆಯಾಗಿದೆ' ಎಂದರು.

'ಭಾರತದ ಪರಿಕಲ್ಪನೆಯ ಉಳಿವಿಗಾಗಿ ಇತರೆ ಪಕ್ಷಗಳಿಗೆ ಹೋಲಿಸಿದರೆ ಕಾಂಗ್ರೆಸ್ ದೊಡ್ಡ ಜವಾಬ್ದಾರಿಯನ್ನು ಹೊಂದಿದೆ. ಕರ್ನಾಟಕದಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕೋಮುವಾದದ ಶಕ್ತಿಗಳಿಗೆ ಸೋಲುಣಿಸುವ ಮೂಲಕ ಇಡೀ ದೇಶಕ್ಕೆ ಒಂದು ಭರವಸೆಯ ಕಿರಣ ಸಿಕ್ಕಂತಾಗಿದೆ. ಇಲ್ಲಿನ ಕೋಮು ಆಧಾರಿತ ರಾಜಕೀಯವನ್ನು ಮೆಟ್ಟಿ ನಿಲ್ಲುವಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು ಯಶಸ್ವಿಯಾಗಿದ್ದಾರೆ. ಇದಕ್ಕೆ ರಾಹುಲ್ ಗಾಂಧಿ ಅವರು ಕೈಗೊಂಡಿದ್ದ ಭಾರತ್ ಜೋಡೊ ಯಾತ್ರೆಯು ಮಹತ್ವದ ಪಾತ್ರವಹಿಸಿದೆ' ಎಂದು ತಿಳಿಸಿದರು.

₹1 ಲಕ್ಷ ಕೋಟಿ ದಾಟಿದ ಸರ್ಕಾರಿ ಬ್ಯಾಂಕ್‌ಗಳ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಒಟ್ಟು ಲಾಭವು 2022–23ನೆಯ ಹಣಕಾಸು ವರ್ಷದಲ್ಲಿ ₹1 ಲಕ್ಷ ಕೋಟಿಯನ್ನು ದಾಟಿದೆ. ಇದರಲ್ಲಿ ಸುಮಾರು ಅರ್ಧದಷ್ಟು ಪಾಲು ಎಸ್‌ಬಿಐನದ್ದೇ ಇದೆ. 2022–23ರಲ್ಲಿ ಎಸ್‌ಬಿಐ ಲಾಭ ₹ 50,232 ಕೋಟಿ ಆಗಿದೆ.

2017–18ರಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಒಟ್ಟು ನಷ್ಟ ₹85,390 ಕೋಟಿ ಆಗಿತ್ತು. ಆ ಬಳಿಕ 2022–23ನೇ ಹಣಕಾಸು ವರ್ಷದಲ್ಲಿ ಈ ಬ್ಯಾಂಕ್‌ಗಳು ₹1.04 ಲಕ್ಷ ಕೋಟಿ ಲಾಭ ಗಳಿಸಿವೆ. ಬ್ಯಾಂಕ್‌ಗಳು ಪ್ರಕಟಿಸಿರುವ ಹಣಕಾಸು ಫಲಿತಾಂಶದ ವಿಶ್ಲೇಷಣೆಯ ಆಧಾರದ ಮೇಲೆ ಈ ಮಾಹಿತಿ ನೀಡಲಾಗಿದೆ.

ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳ ಒಟ್ಟು ಲಾಭವು 2021–22ಕ್ಕೆ ಹೋಲಿಸಿದರೆ 2022–23ರಲ್ಲಿ ಶೇ 57ರಷ್ಟು ಏರಿಕೆ ಕಂಡಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್ ಒಂದನ್ನು ಹೊರತುಪಡಿಸಿ ಉಳಿದೆಲ್ಲ ಬ್ಯಾಂಕ್‌ಗಳ ತೆರಿಗೆ ನಂತರದ ಲಾಭವು ಹೆಚ್ಚಾಗಿದೆ.

ಮಣಿಪುರ: ಮೊಬೈಲ್ ನಿರ್ಬಂಧ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಕೆಲವೆಡೆ ಮತ್ತೆ ಮನೆಗಳಿಗೆ ಬೆಂಕಿ ಹಚ್ಚಿದ ಪ್ರಕರಣಗಳು ವರದಿಯಾದ ಬೆನ್ನಲ್ಲೇ ಮೊಬೈಲ್ ಮತ್ತು ಇಂಟರ್‌ನೆಟ್ ಬಳಕೆಗೆ ಹೇರಿದ್ದ ನಿರ್ಬಂಧವನ್ನು ಮತ್ತೆ ಮೇ 26ರ ವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಹಿಂಸಾಚಾರದಲ್ಲಿ ಒಟ್ಟು 73 ನಾಗರಿಕರು ಮೃತಪಟ್ಟಿದ್ದು, 35 ಸಾವಿರ ಜನರು ನೆಲೆ ಕಳೆದುಕೊಂಡಿದ್ದಾರೆ. ಪ್ರಸ್ತುತ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಸಾಮಾಜಿಕ ಜಾಲತಾಣದಲ್ಲಿ ದ್ವೇಷಪೂರಿತ ಹಾಗೂ ಪ್ರಚೋದನಕಾರಿ ಸಂದೇಶ ಹರಡುವ ಸಾಧ್ಯತೆ ಇದೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದೆ ಎಂದು ಮಣಿಪುರದ ಗೃಹ ಇಲಾಖೆಯ ಆಯುಕ್ತ ಎಚ್. ಗಯಾನ್ ಪ್ರಕಾಶ್ ಸ್ಪಷ್ಟಪಡಿಸಿದ್ದಾರೆ.

ಕಠಿಣ ಕ್ರಮ: ಮುಖ್ಯಮಂತ್ರಿ

'ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಲಿದೆ' ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಎಚ್ಚರಿಕೆ ನೀಡಿದ್ದಾರೆ.

ಭಯೋತ್ಪಾದನಾ ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಸರ್ಕಾರ ಯಾವುದೇ ಸಮುದಾಯದ ವಿರುದ್ಧವಿಲ್ಲ. ಅರಣ್ಯ ಸಂರಕ್ಷಣೆಯ ಜೊತೆಗೆ, ಮಾದಕ ವ್ಯಸನ ಮುಕ್ತ ರಾಜ್ಯ ನಿರ್ಮಾಣಕ್ಕೆ ಕಟಿಬದ್ಧವಾಗಿದೆ' ಎಂದು ತಿಳಿಸಿದರು. ಹಿಂಸಾಚಾರದಿಂದ ರಾಜ್ಯ ತೊರೆದಿರುವ ಜನರು ತಾಯ್ನಾಡಿಗೆ ಮರಳಬೇಕು ಎಂದು ಕೋರಿದರು.

ಮಣಿಪುರದ ನಾಗರಿಕರಿಗೆ ಆಹಾರದ ಅಭಾವ ತಲೆದೋರದಂತೆ ವಿಶೇಷ ಭದ್ರತೆಯೊಂದಿಗೆ ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಭಾರತೀಯ ಸೇನೆ ತಿಳಿಸಿದೆ.

'ಹೊಸ ಸಂಸತ್ ಭವನ ರಾಷ್ಟ್ರಪತಿ ಉದ್ಘಾಟಿಸಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನದ ಕಟ್ಟಡ ಉದ್ಘಾಟಿಸುವುದನ್ನು ವಿರೋಧಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಅದನ್ನು ಉದ್ಘಾಟಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಬೇಕು ಎಂದು ಭಾನುವಾರ ಆಗ್ರಹಿಸಿದ್ದಾರೆ.

'ಹೊಸ ಸಂಸತ್ ಭವನವನ್ನು ರಾಷ್ಟ್ರಪತಿ ಉದ್ಘಾಟಿಸಬೇಕೇ ಹೊರತು ಪ್ರಧಾನಿ ಅಲ್ಲ' ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ.

ಹಲವು ವಿರೋಧ ಪಕ್ಷಗಳ ನಾಯಕರು ಸಹ ರಾಹುಲ್ ಹೇಳಿಕೆಯನ್ನು ಬೆಂಬಲಿಸಿದ್ದಾರೆ.

ಸಾವರ್ಕರ್ ಅವರ ಜನ್ಮದಿನವಾದ ಮೇ 28 ರಂದು ಮೋದಿ ಅವರು ಸಂಸತ್ ಭವನ ಉದ್ಘಾಟಿಸಲಿದ್ದಾರೆ.

ದೆಹಲಿ ಸೇವಾ ವಿಷಯಗಳ ವಿಚಾರವಾಗಿ ಸುಗ್ರೀವಾಜ್ಞೆ: ಕೇಂದ್ರದ ವಿರುದ್ಧ ಕೇಜ್ರಿವಾಲ್ ಹೋರಾಟ

ಬೆಂಬಲ ಕ್ರೋಢೀಕರಣ: ವಿಪಕ್ಷಗಳತ್ತ ಮುಖ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ಸುಗ್ರೀವಾಜ್ಞೆ ಹೊರಡಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಂಘರ್ಷಕ್ಕೆ ಇಳಿದಿದ್ದು, ತಮ್ಮ ಹೋರಾಟಕ್ಕೆ ವಿರೋಧ ಪಕ್ಷಗಳ ಬೆಂಬಲ ಕ್ರೋಢೀಕರಿಸುವ ಯತ್ನ ನಡೆಸಿದ್ದಾರೆ,

ಈ ವಿಷಯಕ್ಕೆ ಸಂಬಂಧಿಸಿದ ಮಸೂದೆಯು ರಾಜ್ಯಸಭೆಯಲ್ಲಿ ಅಂಗೀಕಾರವಾಗದಂತೆ ನೋಡಿಕೊಳ್ಳಬೇಕು ಎಂಬ ಪ್ರಸ್ತಾವ ಮುಂದಿಟ್ಟಿರುವ ಕೇಜ್ರಿವಾಲ್, ವಿಪಕ್ಷಗಳ ನಾಯಕರ ಬೆಂಬಲ ಕೋರಲು ಮುಂದಾಗಿದ್ದಾರೆ.

ಈ ನಡುವೆಯೇ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕೇಜ್ರಿವಾಲ್ ಅವರನ್ನು ಭಾನುವಾರ ಭೇಟಿ ಮಾಡಿ, ಕೇಂದ್ರದ ವಿರುದ್ಧದ ಅವರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಜ್ರಿವಾಲ್, 'ಎಲ್ಲ ವಿರೋಧ ಪಕ್ಷಗಳು ಒಂದಾಗಿ, ರಾಜ್ಯಸಭೆಯಲ್ಲಿ ಈ ಮಸೂದೆ ಅಂಗೀಕಾರವಾಗದಂತೆ ನೋಡಿಕೊಳ್ಳಬೇಕು. ಇಂತಹ ನಡೆಯಿಂದ, ಮುಂದಿನ ವರ್ಷ ಲೋಕಸಭೆಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಸೋಲಲಿದೆ ಎಂಬ ಸಂದೇಶವನ್ನು ರವಾನಿಸಿದಂತಾಗುವುದು ಎಂಬುದಾಗಿ ನಿತೀಶ್ ಕುಮಾರ್‌ಗೆ ಹೇಳಿದ್ದೇನೆ' ಎಂದರು.

'ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಮಂಗಳವಾರ, ಶಿವಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಅವರನ್ನು ಬುಧವಾರ ಭೇಟಿ ಮಾಡುವೆ. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು 25ರಂದು ಭೇಟಿ ಮಾಡಿ, ಸುಗ್ರೀವಾಜ್ಞೆ ವಿಚಾರವಾಗಿ ಕೇಂದ್ರದ ವಿರುದ್ಧ ಕೈಗೊಂಡಿರುವ ಹೋರಾಟಕ್ಕೆ ಬೆಂಬಲ ನೀಡುವಂತೆ ಕೋರುವೆ' ಎಂದು ಹೇಳಿದರು.

ಕೇಜ್ರಿವಾಲ್‌ಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದ ನಿತೀಶ್‌ಕುಮಾರ್, 'ಒಂದು ಚುನಾಯಿತ ಸರ್ಕಾರದ ಅಧಿಕಾರವನ್ನು ಕಿತ್ತುಕೊಳ್ಳಲು ಹೇಗೆ ಸಾಧ್ಯ' ಎಂದರು.

'ಸಂವಿಧಾನವನ್ನು ಗಮನಿಸಿ. ಅದರಲ್ಲಿ ಏನು ಹೇಳಿದೆ ಎಂಬುದನ್ನು ನೋಡಿ. ಈ ವಿಷಯದಲ್ಲಿ ಕೇಜ್ರಿವಾಲ್ ನಿಲುವು ಸರಿಯಾಗಿಯೇ ಇದ್ದು, ನಾವು ಅವರ ಬೆಂಬಲಕ್ಕಿದ್ದೇವೆ' ಎಂದು ನಿತೀಶ್ ಹೇಳಿದರು.

ಒಗ್ಗಟ್ಟು: ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆ ವೇಳೆ ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮೂಡಿಸುವ ಪ್ರಯತ್ನ ಮುಂದುವರಿಸಿರುವ ನಿತೀಶ್ ಕುಮಾರ್, ಅರವಿಂದ ಕೇಜ್ರಿವಾಲ್ ಜೊತೆ ಈ ವಿಷಯ ಕುರಿತು ಮಾತುಕತೆ ನಡೆಸಿದರು. ಮತ್ತೊಂದೆಡೆ, ಕರ್ನಾಟಕದ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಕಾಂಗ್ರೆಸ್ ಪಕ್ಷವು ಕೇಜ್ರಿವಾಲ್ ಅವರಿಗೆ ಆಹ್ವಾನ ನೀಡಿರಲಿಲ್ಲ. ಈ ಸಮಾರಂಭ ನಡೆದ ಮಾರನೇ ದಿನವೇ ನಿತೀಶ್ ಅವರು ಕೇಜ್ರಿವಾಲ್ ನಿವಾಸಕ್ಕೆ ತೆರಳಿ, ಮಾತುಕತೆ ನಡೆಸಿದ್ದಾರೆ.

ಈ ಕಾರಣಗಳಿಂದಾಗಿ ನಿತೀಶ್ ಹಾಗೂ ಕೇಜ್ರಿವಾಲ್ ಅವರ ಸಭೆಗೆ ಮಹತ್ವ ಬಂದಿದೆ. ಜೊತೆಗೆ, ವಿರೋಧ ಪಕ್ಷಗಳ ಒಗ್ಗಟ್ಟಿನಲ್ಲಿ ಒಡಕು ಮೂಡಿಲ್ಲ ಎಂಬ ಸಂದೇಶ ರವಾನಿಸುವ ಉದ್ದೇಶವೂ ಈ ಭೇಟಿ ಹಿಂದೆ ಇತ್ತು ಎಂದು ವಿಶ್ಲೇಷಿಸಲಾಗುತ್ತಿದೆ.



ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ದೆಹಲಿಯಲ್ಲಿ ಭಾನುವಾರ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಭೇಟಿ ಮಾಡಿದರು. ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ಬಿಹಾರ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಇದ್ದರು —ಪಿಟಿಐ ಚಿತ್ರ

ಬಿಹಾರದಲ್ಲಿ ಸೃಷ್ಟಿಯಾಗಿರುವ ಅರಾಜಕತೆ ಬಗ್ಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಗಮನ ಹರಿಸಲಿ. ಪ್ರಧಾನಿಯಾಗುವ ಹಗಲುಗನಸು ಕಾಣುವುದನ್ನು ಅವರು ನಿಲ್ಲಿಸಬೇಕು
ಪ್ರೇಮ್ ಶುಕ್ಲ, ಬಿಜೆಪಿ ರಾಷ್ಟ್ರೀಯ ವಕ್ತಾರ

ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿದ ಮಸೂದೆಗೆ ರಾಜ್ಯ ಸಭೆಯಲ್ಲಿ ಸೋಲುಂಟಾದಲ್ಲಿ ಅದೇ ಚುನಾವಣೆಯ ಸೆಮಿಫೈನಲ್ ಆಗಲಿದೆ
ಅರವಿಂದ ಕೇಜ್ರಿವಾಲ್
ದೆಹಲಿ ಮುಖ್ಯಮಂತ್ರಿ

'ಕರ್ನಾಟಕದ ಫಲಿತಾಂಶ ಪರಿಸ್ಥಿತಿ ಬದಲಾಯಿಸಿದೆ'

ಮುಂಬೈ: 'ದೇಶದಲ್ಲಿ ಸಾಮಾಜಿಕ ಮತ್ತು ಕೋಮು ವಿಭಜನೆಯನ್ನು ಉದ್ದೇಶಪೂರ್ವಕವಾಗಿ ಪ್ರಚೋದಿಸುವ ಶಕ್ತಿಗಳ ವಿರುದ್ಧ ಹೋರಾಡುವುದು ಎಲ್ಲರ ಮುಂದಿರುವ ಸವಾಲಾಗಿದೆ. ಆದರೆ, ಕರ್ನಾಟಕ ವಿಧಾನಸಭಾ ಚುನಾವಣೆಯ ಫಲಿತಾಂಶದಿಂದಾಗಿ ಪರಿಸ್ಥಿತಿ ಕ್ರಮೇಣ ಬದಲಾಗುವಂತೆ ತೋರುತ್ತಿದೆ' ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಭಾನುವಾರ ಹೇಳಿದ್ದಾರೆ.

ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ದುಡಿಯುವ ವರ್ಗವು ಸದೃಢ ಮತ್ತು ಒಗ್ಗಟ್ಟು ಪ್ರದರ್ಶಿಸಿದರೆ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಂಡ ಫಲಿತಾಂಶವನ್ನು ದೇಶದ ಇತರೆಡೆಯೂ ಪುನರಾವರ್ತಿಸಬಹುದು' ಎಂದರು

ವಿಪಕ್ಷಗಳ ಒಗ್ಗಟ್ಟಿಗೆ ಕಾರ್ಯಸೂಚಿ ಅಗತ್ಯ: ಸಿಬಲ್

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ಒಗ್ಗಟ್ಟು ಕಣ್ಣಿಗೆ ಕಾಣುವಂತೆ ಅಷ್ಟೇ ಇದ್ದರೆ ಸಾಲುವುದಿಲ್ಲ ಎಂದು ರಾಜ್ಯಸಭೆ ಸಂಸದ ಕಪಿಲ್ ಸಿಬಲ್ ಅವರು ಭಾನುವಾರ ಟ್ವೀಟ್ ಮಾಡಿದ್ದಾರೆ.

'ಸಿದ್ದರಾಮಯ್ಯ ಅವರ ಪ್ರಮಾಣ ವಚನ ಸಮಾರಂಭದಲ್ಲಿ ಹಲವಾರು ಪ್ರಮುಖ ನಾಯಕರು ಆಗಮಿಸಿದ್ದು ಒಗ್ಗಟ್ಟು ಪ್ರದರ್ಶನದ ದ್ಯೋತಕವೇ? ನನ್ನ ಪ್ರಕಾರ, ವಿರೋಧ ಪಕ್ಷಗಳ ಒಗ್ಗಟ್ಟು ಈ ರೀತಿಯ ಪ್ರದರ್ಶನಕ್ಕಿಂತ ಹೆಚ್ಚಿನದ್ದನ್ನು ಅಪೇಕ್ಷಿಸುತ್ತದೆ. ಮನಸ್ಸುಗಳು ಸಂಧಿಸಬೇಕು, ಸಾಮಾನ್ಯ ಕಾರ್ಯಸೂಚಿ ಹೊಂದಿರಬೇಕು ಮತ್ತು ಪಕ್ಷಪಾತಿ ಹಿತಾಸಕ್ತಿಗಳನ್ನು ತ್ಯಜಿಸಬೇಕು' ಎಂದಿದ್ದಾರೆ.

ಜೀವವೈವಿಧ್ಯ ಸಂರಕ್ಷಣೆ ಅನುಷ್ಠಾನಕ್ಕೆ ಆದ್ಯತೆ

ಪ್ರತಿ ವರ್ಷ ಮೇ 22ನ್ನು ಅಂತರರಾಷ್ಟ್ರೀಯ ಜೀವವೈವಿಧ್ಯ ದಿನವನ್ನಾಗಿ ಆಚರಿಸಲಾಗುತ್ತದೆ. ಈ ಬಾರಿಯ ಜೀವವೈವಿಧ್ಯ ದಿನದ ವಿಷಯ, 'ಜೀವವೈವಿಧ್ಯ ಮರುಸ್ಥಾಪನೆ'. ವಿಶ್ವಸಂಸ್ಥೆಯ 'ಕಾನ್ಫರೆನ್ಸ್ ಆಫ್ ಪಾರ್ಟೀಸ್‌ನಲ್ಲಿ (ಸಿಒಪಿ–15)'ರಲ್ಲಿ 'ಜಾಗತಿಕ ಜೀವವೈವಿಧ್ಯ ಕಾರ್ಯಚೌಕಟ್ಟ'ನ್ನು ಅಂಗೀಕರಿಸಲಾಗಿತ್ತು. ಅದರ ಗುರಿಗಳನ್ನೇ ಈ ಬಾರಿಯ ಜೀವವೈವಿಧ್ಯ ದಿನಾಚರಣೆಯ ಗುರಿಗಳನ್ನಾಗಿ ಅಂಗೀಕರಿಸಲಾಗಿದೆ. ಆ ಗುರಿಗಳು ಇಂತಿವೆ

ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ ಇಂದು

- ಜೀವವೈವಿಧ್ಯ ಸಮೃದ್ಧ ಸ್ಥಳಗಳ ಭೂ ಹಾಗೂ ಜಲಪ್ರದೇಶಗಳ ಸಂರಕ್ಷಣೆ ಕಾರ್ಯ ಚುರುಕುಗೊಳಿಸುವುದು
- ನಿರ್ಲಕ್ಷ್ಯಕ್ಕೆ ಗುರಿಯಾಗಿರುವಜೀವವೈವಿಧ್ಯ ಮಹತ್ವ ಹೊಂದಿರುವ ಭೂಪ್ರದೇಶ, ಒಳನಾಡು ಜಲಸಂಪನ್ಮೂಲ, ಕರಾವಳಿ ಹಾಗೂ ಕಡಲ ಪರಿಸರದ ಶೇ 30ರಷ್ಟು ಪ್ರದೇಶವನ್ನು 2030ರೊಳಗೆ ಮತ್ತೆ ಜೀವವೈವಿಧ್ಯದ ತಾಣವಾಗಿ ಪರಿವರ್ತಿಸುವುದು
- ಜೀವವೈವಿಧ್ಯದ ತಾಣಗಳ ಸಂರಕ್ಷಣೆಯ ವೇಳೆ ಅಲ್ಲಿನ ಮೂಲನಿವಾಸಿಗಳು, ಸ್ಥಳೀಯ ಸಮುದಾಯಗಳ ಸಾಂಪ್ರದಾಯಿಕ ಭೂ ಒಡೆತನದ ಹಕ್ಕನ್ನು ಗೌರವಿಸಿ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು
- ಮಾನವ ಹಸ್ತಕ್ಷೇಪದಿಂದ ಅಪಾಯದ ಅಂಚು ತಲುಪಿರುವ ಜೀವಪ್ರಭೇದಗಳ ಸಂರಕ್ಷಣೆಗೆ ತುರ್ತು ಕ್ರಮಗಳನ್ನು ಖಾತರಿಪಡಿಸುವುದು
- ಮಾನವ–ಪ್ರಾಣಿ ಸಂಘರ್ಷವನ್ನು ಆದಷ್ಟೂ ತಗ್ಗಿಸುವುದು
- ವನ್ಯ ಪ್ರಬೇಧಗಳ ಸುಸ್ಥಿರ, ಸುರಕ್ಷಿತ ಹಾಗೂ ಕಾನೂನುಬದ್ಧ ಮಾರಾಟವನ್ನು ಖಚಿತಪಡಿಸಿಕೊಳ್ಳುವುದು
- ನಿರ್ದಿಷ್ಟ ಜೀವವೈವಿಧ್ಯ ಪ್ರದೇಶದ ಮೇಲೆ ವಲಸೆ ಪ್ರಬೇಧಗಳು ಉಂಟುಮಾಡುವ ಪರಿಣಾಮವನ್ನು ತಗ್ಗಿಸುವುದು ಅಥವಾ ನಿರ್ಬಂಧಿಸುವುದು. ಅವುಗಳನ್ನು ಜೀವವೈವಿಧ್ಯದ ಪ್ರದೇಶಕ್ಕೆ ಪರಿಚಯಿಸದಂತೆ ತಡೆಯುವುದು
- ಪ್ಲಾಸ್ಟಿಕ್ ಮಾಲಿನ್ಯ, ರಸಗೊಬ್ಬರಗಳು ಹಾಗೂ ಹಾನಿಕಾರಕ ರಾಸಾಯನಿಕಗಳ ಬಳಕೆಯನ್ನು ಅರ್ಧದಷ್ಟು ತಗ್ಗಿಸುವುದರ ಮೂಲಕ ಜೀವವೈವಿಧ್ಯ ಪ್ರದೇಶದ ಮೇಲೆ ಆಗುವ ಮಾಲಿನ್ಯ ಪರಿಣಾಮವನ್ನು ತಡೆಯುವುದು
- ಹವಾಮಾನ ಬದಲಾವಣೆ ಹಾಗೂ ಸಮುದ್ರದಲ್ಲಿ ಆಮ್ಲೀಯ ಪ್ರಮಾಣ ಹೆಚ್ಚಾಗುವುದನ್ನು ತಡೆಯುವುದು ಹಾಗೂ ಅದರ ಪರಿಣಾಮವನ್ನು ನೈಸರ್ಗಿಕ ವಿಧಾನದಲ್ಲಿ ಕಡಿಮೆಗೊಳಿಸುವುದು
- ಕೃಷಿ, ಮೀನುಗಾರಿಕೆ, ಅರಣ್ಯೀಕರಣವನ್ನು ಜೀವವೈವಿಧ್ಯ ಸ್ನೇಹಿ ಕ್ರಮಗಳ ಮೂಲಕ ಸುಸ್ಥಿರ ನಿರ್ವಹಣೆಗೆ ಒಳಪಡಿಸಬೇಕು
- ನೀರು, ಗಾಳಿ, ಪರಿಸರ, ಮಣ್ಣಿನ ಆರೋಗ್ಯದಂತಹ ಪ್ರಾಕೃತಿಕ ಅಂಶಗಳ ನಿರ್ವಹಣೆ, ರೋಗಗಳ ಅಪಾಯ ತಗ್ಗಿಸುವುದು, ನೈಸರ್ಗಿಕ ಪರಿಹಾರದ ಮೂಲಕ ಪ್ರಾಕೃತಿಕ ವಿಕೋಪಗಳನ್ನು ತಡೆಯುವುದರಿಂದ ಮನುಷ್ಯ ಹಾಗೂ ಪ್ರಕೃತಿಗೆ ನೆರವಾಗುವುದು
- ಸುಸ್ಥಿರ ನಗರೀಕರಣ, ಜೀವವೈವಿಧ್ಯ ಆದ್ಯತೆಯಾಗಿರುವ ನಗರ ಯೋಜನೆಯಂತಹ ಕ್ರಮಗಳನ್ನು ಅಳವಡಿಸಿಕೊಳ್ಳುವುದು



ಜಿ–7 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಪ್ರತಿಪಾದನೆ

'ವಿಶ್ವಸಂಸ್ಥೆಯಲ್ಲಿ ಸುಧಾರಣೆ ಅಗತ್ಯ'

ಹಿರೋಷಿಮಾ (ಜಪಾನ್) (ಪಿಟಿಐ): ವಿಶ್ವಸಂಸ್ಥೆ ಹಾಗೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗಳಲ್ಲಿ ಸುಧಾರಣೆಯಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬಲವಾಗಿ ಪ್ರತಿಪಾದಿಸಿದರು.

ಇಲ್ಲಿ ನಡೆಯುತ್ತಿರುವ ಜಿ–7 ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ವಿಶ್ವಸಂಸ್ಥೆ ಅಥವಾ ಭದ್ರತಾ ಮಂಡಳಿಯು ಪ್ರಸಕ್ತ ಜಗತ್ತಿನ ವಾಸ್ತವಿಕತೆಯನ್ನು ಪ್ರತಿಬಿಂಬಿಸದೇ ಹೋದಲ್ಲಿ ಈ ಸಂಸ್ಥೆಗಳು 'ಮಾತಿನ ಮಂಟಪ'ಗಳಾಗಿ ಉಳಿಯುತ್ತವೆ' ಎಂದರು.

'ಜಗತ್ತಿನಲ್ಲಿ ಶಾಂತಿ ಮತ್ತು ಸ್ಥಿರತೆ ಸ್ಥಾಪನೆ ವಿಷಯದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವ ಉದ್ದೇಶದಿಂದಲೇ ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಆದರೆ, ಶಾಂತಿ ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಕ್ರಮ ಕೈಗೊಳ್ಳಲು ಬೇರೆ ಬೇರೆ ವೇದಿಕೆಗಳನ್ನು ರಚಿಸಿದ್ದು ಯಾಕೆ' ಎಂದು ಮೋದಿ ಅಚ್ಚರಿವ್ಯಕ್ತಪಡಿಸಿದರು.

ಮೋದಿ–ಸುನಕ್ ಭೇಟಿ: ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರನ್ನು ಭೇಟಿ ಮಾಡಿ, ದ್ವಿಪಕ್ಷೀಯ ಸಂಬಂಧಗಳ ವೃದ್ಧಿ ಕುರಿತು ಅರ್ಥಪೂರ್ಣ ಮಾತುಕತೆ ನಡೆಸಲಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

'ಭಾರತ–ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ)ಕ್ಕೆ ಸಹಿ ಹಾಕುವ ನಿಟ್ಟಿನಲ್ಲಿ ಆಗಿರುವ ಪ್ರಗತಿ, ಹೂಡಿಕೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಭಾಗಿತ್ವ ಸೇರಿದಂತೆ ವಿವಿಧ ವಿಷಯಗಳ ಕುರಿತು ಉಭಯ ನಾಯಕರು ಚರ್ಚೆ ನಡೆಸಿದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಟ್ವೀಟ್ ಮಾಡಿದೆ.

'ಮಾನವೀಯ ಮೌಲ್ಯಕ್ಕೆ ಸಂಬಂಧಿಸಿದ ಸಮಸ್ಯೆ': ಉಕ್ರೇನ್‌ನ ಸದ್ಯದ ಸ್ಥಿತಿಯನ್ನು ಮಾನವೀಯತೆ ಮತ್ತು ಮಾನವೀಯ ಮೌಲ್ಯಕ್ಕೆ ಸಂಬಂಧಿಸಿದ ಸಮಸ್ಯೆಯಂತೆ ನೋಡುತ್ತೇನೇ ಹೊರತು, ರಾಜಕೀಯ ಅಥವಾ ಆರ್ಥಿಕತೆಗೆ ಸಂಬಂಧಿಸಿದ ಸಮಸ್ಯೆಯಂತೆ ನೋಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಸಾಮಾಜಿಕ, ರಾಜಕೀಯ ಸ್ಥಿತಿಯನ್ನು ಬದಲಿಸುವ ಪ್ರಯತ್ನಗಳ ವಿರುದ್ಧ ಒಕ್ಕೊರಲಿನಿಂದ ಧ್ವನಿ ಎತ್ತಬೇಕು ಎಂದರು.



ಜಪಾನ್ ಪ್ರವಾಸದ ವೇಳೆ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಸೇರಿ ಜಿ7ನ ಇತರ ನಾಯಕರು ಹಿರೋಷಿಮಾ ಶಾಂತಿ ಸ್ಮಾರಕ ಉದ್ಯಾನಕ್ಕೆ ತೆರಳಿ ಅಣುಬಾಂಬ್ ದಾಳಿ ಸಂತ್ರಸ್ತರಿಗೆ ಗೌರವ ಸಲ್ಲಿಸಿದರು —ಎಪಿ ಚಿತ್ರ

ಚೀನಾ: ರಾಜತಾಂತ್ರಿಕ ಪ್ರತಿಭಟನೆ ದಾಖಲು

ಬೀಜಿಂಗ್ (ಪಿಟಿಐ): ಜಿ7 ಶೃಂಗಸಭೆಯಲ್ಲಿ ಸದಸ್ಯ ರಾಷ್ಟ್ರಗಳು ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಗೆ ಚೀನಾ ಆಕ್ಷೇಪ ವ್ಯಕ್ತಪಡಿಸಿದ್ದು, ತನ್ನ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವುದನ್ನು ಭಾನುವಾರ ಖಂಡಿಸಿದೆ.

ತೈವಾನ್, ಪೂರ್ವ ಮತ್ತು ದಕ್ಷಿಣ ಚೀನಾ ಸಮುದ್ರ ಪ್ರದೇಶದಲ್ಲಿ ಚೀನಾ ಅನುಸರಿಸುತ್ತಿರುವ ಆಕ್ರಮಣಕಾರಿ ನೀತಿ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಜಿ7 ರಾಷ್ಟ್ರಗಳು, ಚೀನಾದೊಂದಿಗೆ ರಚನಾತ್ಮಕ ಮತ್ತು ಸ್ಥಿರ ಸಂಬಂಧಗಳನ್ನು ನಿರ್ಮಿಸಲು ಬಯಸುವುದಾಗಿ ಶನಿವಾರ ತಮ್ಮ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದವು. ಈ ರಾಷ್ಟ್ರಗಳ ಈ ನಿಲುವಿಗೆ ಚೀನಾ ರಾಜತಾಂತ್ರಿಕ ಪ್ರತಿಭಟನೆ ದಾಖಲಿಸಿದೆ.

ಪಪುವಾ ನ್ಯೂಗಿನಿ ತಲುಪಿದ ಮೋದಿ

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಜಪಾನ್‌ನಿಂದ ಹೊರಟು ಪಪುವಾ ನ್ಯೂಗಿನಿ ತಲುಪಿದರು.

ಅಲ್ಲಿಯ ಪ್ರಧಾನಿ ಜೇಮ್ಸ್ ಮರಾಪೆ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ಜಂಟಿಯಾಗಿ ಭಾರತ– ಪೆಸಿಫಿಕ್ ದ್ವೀಪ ರಾಷ್ಟ್ರಗಳ ಸಹಕಾರ ವೇದಿಕೆಯ (ಎಫ್‌ಐಪಿಐಸಿ) ಮೂರನೇ ಸಮ್ಮೇಳನದ ಆತಿಥ್ಯ ವಹಿಸಲಿದ್ದಾರೆ.

ನರೇಂದ್ರ ಮೋದಿ ಅವರು ಪಪುವಾ ನ್ಯೂ ಗಿನಿಗೆ ಭೇಟಿ ನೀಡಿದ ಮೊದಲ ಭಾರತೀಯ ಪ್ರಧಾನಿ ಆಗಿದ್ದಾರೆ.

ರಾಜ್ಯಗಳ ವಿಧಾನಸಭಾ ಚುನಾವಣೆ: ಇದೇ 24ಕ್ಕೆ ಕಾಂಗ್ರೆಸ್ ಮಹತ್ವದ ಸಭೆ

ನವದೆಹಲಿ (ಪಿಟಿಐ): ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಅಮೋಘ ಗೆಲುವು ದಾಖಲಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಕಾಂಗ್ರೆಸ್, ಈಗ ಮಧ್ಯಪ್ರದೇಶ, ರಾಜಸ್ಥಾನ, ಮಿಜೋರಾಂ ಹಾಗೂ ಛತ್ತೀಸಗಢದಲ್ಲಿ ನಡೆಯುವ ವಿಧಾನಸಭೆ ಚುನಾವಣೆಗಳತ್ತ ಚಿತ್ತ ಹರಿಸಿದೆ.

ಈ ರಾಜ್ಯಗಳಲ್ಲೂ ಅಧಿಕಾರದ ಚುಕ್ಕಾಣಿ ಹಿಡಿಯಲು ಹವಣಿಸುತ್ತಿರುವ ಪಕ್ಷವು, ಇದಕ್ಕಾಗಿ ಸೂಕ್ತ ರಣತಂತ್ರ ರೂಪಿಸಲು ಇದೇ 24ರಂದು ಮಹತ್ವದ ಸಭೆ ನಡೆಸಲಿದೆ.

'ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಸದ್ಯ ಅಧಿಕಾರದಲ್ಲಿರುವ ಕಾಂಗ್ರೆಸ್, ಮತ್ತೊಂದು ಅವಧಿಗೆ ಗದ್ದುಗೆ ಏರಲು ಕಾತರಿಸುತ್ತಿದೆ. ಈ ರಾಜ್ಯಗಳಲ್ಲೂ ಕರ್ನಾಟಕ ಮಾದರಿಯ ರಣತಂತ್ರ ಅನುಸರಿಸಲು ನಿರ್ಧರಿಸಿದೆ. ಜ್ಯೋತಿರಾಧಿತ್ಯ ಸಿಂಧಿಯಾ ಹಾಗೂ ಅವರ ಬೆಂಬಲಿಗ ಶಾಸಕರು ಬಂಡಾಯವೆದ್ದ ಕಾರಣ ಮಧ್ಯಪ್ರದೇಶದಲ್ಲಿ ಅಧಿಕಾರ ಕೈತಪ್ಪಿತ್ತು. ಈ ಬಾರಿ ಅಧಿಕಾರಕ್ಕೇರುವ ಹಂಬಲವನ್ನು ಪಕ್ಷ ಹೊತ್ತಿದೆ' ಎಂದು ಮೂಲಗಳು ತಿಳಿಸಿವೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ತೆಲಂಗಾಣ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢ ರಾಜ್ಯಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಖರ್ಗೆ ಅವರು ಈ ರಾಜ್ಯಗಳ ನಾಯಕರ ಜೊತೆಗೆ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಲಿದ್ದಾರೆ. ಬೇರು ಮಟ್ಟದಿಂದಲೇ ಸಂಘಟನೆ ಬಲಪಡಿಸುವುದು ಈ ಸಭೆಯ ಉದ್ದೇಶ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

'ಕರ್ನಾಟಕದಲ್ಲಿ ಚುನಾವಣಾ ಪೂರ್ವದಲ್ಲಿ ಐದು ಗ್ಯಾರಂಟಿಗಳನ್ನು ಘೋಷಿಸಿದ್ದು ಪಕ್ಷಕ್ಕೆ ವರದಾನವಾಗಿತ್ತು. ಇತರ ರಾಜ್ಯಗಳಲ್ಲೂ 'ಗ್ಯಾರಂಟಿ' ತಂತ್ರವನ್ನು ಪ್ರಯೋಗಿಸಲು ನಾಯಕರು ಒಲವು ತೋರಿದ್ದಾರೆ' ಎಂದು ನಾಯಕರೊಬ್ಬರು ತಿಳಿಸಿದ್ದಾರೆ.

'ಮೋದಿ ಸಮಾರಂಭಕ್ಕೆ ಮುಗಿಬೀಳುತ್ತಿರುವ ಜನ'

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರು ಮುಂದಿನ ತಿಂಗಳು ಅಮೆರಿಕ ಪ್ರವಾಸ ಕೈಗೊಳ್ಳುತ್ತಿದ್ದು, ಮೋದಿ ಭೇಟಿಯಿಂದ ಪೇಚಿಗೆ ಸಿಲುಕಿರುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಜಪಾನ್‌ನ ಟೋಕಿಯೊದಲ್ಲಿ ಶನಿವಾರ ನಡೆದ ಕ್ವಾಡ್ ನಾಯಕರ ಸಭೆ ವೇಳೆ ಹೇಳಿದ್ದಾರೆ.

ಮೋದಿ ಅವರ ಅಮೆರಿಕ ಪ್ರವಾಸದ ವೇಳೆ ನಡೆಯಲಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಭಾರಿ ಸಂಖ್ಯೆಯಲ್ಲಿ ಜನರು ಬೇಡಿಕೆ ಸಲ್ಲಿಸುತ್ತಿದ್ದಾರೆ. ಇದು ಆಡಳಿತಕ್ಕೆ ಹೊಸ ಸವಾಲಾಗಿದೆ ಎಂದು ಬೈಡನ್ ಹೇಳಿದ್ದಾರೆ.

ಮೋದಿ ಬಳಿ ತೆರಳಿ ಹಾಸ್ಯಮಿಶ್ರಿತ ಧಾಟಿಯಲ್ಲಿ ಅವರನ್ನು ಉದ್ದೇಶಿಸಿ ಮಾತನಾಡಿದ ಬೈಡನ್ ಅವರು, 'ನೀವು ನನಗೆ ನಿಜವಾದ ಸಮಸ್ಯೆಯನ್ನು ತಂದೊಡ್ಡಿದ್ದೀರಿ. ಮುಂದಿನ ತಿಂಗಳು ನಿಮಗಾಗಿ ನಾವು ವಾಷಿಂಗ್ಟನ್‌ನಲ್ಲಿ ಭೋಜನಕೂಟ ಏರ್ಪಡಿಸಿದ್ದೇವೆ. ದೇಶದ ಪ್ರತಿಯೊಬ್ಬರೂ ಭೋಜನಕೂಟದಲ್ಲಿ ಪಾಲ್ಗೊಳ್ಳಬೇಕು ಎಂದು ಬಯಸುತ್ತಿದ್ದಾರೆ. ನನ್ನ ಬಳಿ ಅಷ್ಟು ಟಿಕೆಟ್‌ಗಳು ಇಲ್ಲ. ನಾನು ತಮಾಷೆ ಮಾಡುತ್ತಿದ್ದೇನೆ ಎಂದು ನಿಮಗೆ ಅನಿಸಿದರೆ, ನನ್ನ ತಂಡವನ್ನು ಕೇಳಿ. ಟಿಕೆಟ್ ನೀಡುವಂತೆ ನನಗೆ ಹಲವರಿಂದ ದೂರವಾಣಿ ಕರೆಗಳು ಬರುತ್ತಿವೆ. ನೀವು ತುಂಬಾ ಜನಪ್ರಿಯ ವ್ಯಕ್ತಿ' ಎಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಪ್ರಧಾನಿ ಅವರೇ ನೀವು ಎಲ್ಲ ವಿಚಾರಗಳಲ್ಲೂ ಗುರುತರವಾದ ಪ್ರಭಾವ ಬೀರಿದ್ದೀರಿ. ಹವಾಮಾನ ಬದಲಾವಣೆ ವಿಚಾರದಲ್ಲೂ ಮೂಲಭೂತವಾದ ಬದಲಾವಣೆ ಮಾಡಿದ್ದೀರಿ. ಭಾರತ–ಪೆಸಿಫಿಕ್ ದೇಶಗಳ ಮೇಲೂ ಪ್ರಭಾವ ಬೀರಿದ್ದೀರಿ. ನಿಮ್ಮಿಂದ ಬದಲಾವಣೆ ಆಗುತ್ತಿದೆ' ಎಂದು ಮೋದಿ ಅವರನ್ನು ಬೈಡನ್ ಶ್ಲಾಘಿಸಿದ್ದಾರೆ.

ಇದೇವೇಳೆ, ತಾವು ಮೋದಿ ಅವರಿಂದ ಹಸ್ತಾಕ್ಷರ ಪಡೆಯಬೇಕೊಳ್ಳಬೇಕು ಎಂದು ಹಾಸ್ಯಧಾಟಿಯಲ್ಲಿ ಹೇಳಿದ್ದಾರೆ.

ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಅವರು ಕೂಡಾ ಇಂಥದ್ದೇ ಅಭಿಪ್ರಾಯವನ್ನು ಈ ವೇಳೆ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಇದೇ ವಾರ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದ್ದಾರೆ. ಮಂಗಳವಾರ ಅವರು ಸಿಡ್ನಿಯಲ್ಲಿ ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಲಿದ್ದಾರೆ. ಈ ಹಿನ್ನಲೆಯಲ್ಲಿ ಮಾತನಾಡಿದ ಅಲ್ಬನೀಸ್ ಅವರು, ಮೋದಿ ಅವರ ಕಾರ್ಯಕ್ರಮ ಆಯೋಜನೆ ಆಗಿರುವ ಸ್ಥಳದಲ್ಲಿ 20,000 ಜನರಿಗೆ ಸ್ಥಳಾವಕಾಶವಿದೆ. ಆದರೂ ಸಮಾರಂಭದಲ್ಲಿ ಪಾಲ್ಗೊಳ್ಳುವ ಆಕಾಂಕ್ಷೆ ಹೊಂದಿರುವ ಎಲ್ಲರಿಗೂ ಸ್ಥಳಾವಕಾಶ ಮಾಡುವುದು ಸವಾಲಾಗಿದೆ ಎಂದು ಅವರು ಹೇಳಿದ್ದಾರೆ.

ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಾರ್ಚ್‌ನಲ್ಲಿ ನಡೆದಿದ್ದ ಭಾರತ–ಆಸ್ಟ್ರೇಲಿಯಾ ಟೆಸ್ಟ್ ಪಂದ್ಯಾವಳಿ ವೀಕ್ಷಿಸಲು ತಾವು ಬಂದಿದ್ದ ವೇಳೆ 90,000ಕ್ಕೂ ಹೆಚ್ಚು ಮಂದಿ ಮೈದಾನದಲ್ಲಿ ನೆರೆದು ತಮ್ಮನ್ನು ಸ್ವಾಗತಿಸಿದ್ದನ್ನು ಅಲ್ಬನೀಸ್ ಈ ವೇಳೆ ನೆನೆದರು.

ಸಾವೆ, ಸೆಹಾಯ್‌ಗೆ ಟೆನ್ ಕೆ ಗರಿ

ಆಫ್ರಿಕಾ ಅಥ್ಲೀಟ್‌ಗಳ ಪ್ರಾಬಲ್ಯ; ಭಾರತದ ಸ್ಪರ್ಧಿಗಳಲ್ಲಿ ಮುರಳಿ, ತಂಶಿ ಮಿಂಚು

• ಮಹಮ್ಮದ್ ನೂಮಾನ್



ಸೆಬಾಸ್ಟಿಯನ್



ಮುರಳಿ ಗವಿತ್



ತಂಶಿ ಸಿಂಗ್

ಬೆಂಗಳೂರು: ಉದ್ಯಾನನಗರಿಯ ರಸ್ತೆಯಲ್ಲಿ ಭಾನುವಾರ ಬೆಳಿಗ್ಗೆ ಅಮೋಘ ರೀತಿಯಲ್ಲಿ ಓಡಿದ ಕೆನ್ಯಾದ ಸೆಬಾಸ್ಟಿಯನ್ ಸಾವೆ ಮತ್ತು ಇಥಿಯೋಪಿಯದ ಸೆಹಾಯ್ ಗೆಮೆಚು ಅವರು, ಟಿಸಿಎಸ್ ವಿಶ್ವ ಟೆನ್ ಕೆ ಓಟದಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

15ನೇ ಆವೃತ್ತಿಯ ಟೆನ್‌ಕೆ ಓಟದಲ್ಲಿ ಹೊಸ ಕೂಟ ದಾಖಲೆ ನಿರ್ಮಾಣವಾಗದಿದ್ದರೂ, ದೀರ್ಘ ಅಂತರದ ಓಟದಲ್ಲಿ ಆಫ್ರಿಕಾದ ಅಥ್ಲೀಟ್‌ಗಳಿಗೆ ಯಾರೂ ಸಾಟಿಯಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು.

ಸಹ ಸ್ಪರ್ಧಿಗಳ ನಿಕಟ ಪೈಪೋಟಿಯ ನಡುವೆಯೂ ಛಲದಿಂದ ಓಡಿದ ಸಾವೆ 27 ನಿಮಿಷ 58.24 ಸೆ.ಗಳಲ್ಲಿ ಗುರಿ ತಲುಪಿದರು. ಬುರುಂಡಿಯ ರಾಡ್ರಿಗ್ ಕ್ವಿಜೆರಾ (27 ನಿ. 58.35 ಸೆ.) ರನ್ನರ್ಸ್ ಅಪ್ ಆದರೆ, ಕೆನ್ಯಾದ ಹಿಲರಿ ಚೆಕ್ವೊನಿ (27 ನಿ. 59.70 ಸೆ.) ಮೂರನೇ ಸ್ಥಾನ ಪಡೆದರು.

ಮೊದಲ ಮೂರು ಸ್ಥಾನಗಳನ್ನು ಪಡೆದವರು 1.46 ಸೆ.ಗಳ ಅಂತರದಲ್ಲಿ ಗುರಿ ತಲುಪಿರುವುದು, ಓಟದಲ್ಲಿ ಪೈಪೋಟಿ ಎಷ್ಟಿತ್ತು ಎಂಬುದಕ್ಕೆ ಸಾಕ್ಷಿ.

ಇಲ್ಲಿ ಪ್ರಶಸ್ತಿ ಜಯಿಸುವ ನೆಚ್ಚಿನ ಅಥ್ಲೀಟ್ ಎನಿಸಿಕೊಂಡಿದ್ದ ಕೆನ್ಯಾದ ನಿಕೊಲಸ್ ಕಿಪ್ರೊರಿರ್ ಕಿಮೆಲಿ ನಾಲ್ಕನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಕಳೆದ ಬಾರಿ ಕೂಟ ದಾಖಲೆಯೊಂದಿಗೆ (27 ನಿ, 38 ಸೆ.) ಚಿನ್ನ ಗೆದ್ದಿದ್ದ ಅವರು ಭಾನುವಾರ ಗುರಿ ತಲುಪಲು 28 ನಿ. 5.09 ಸೆ. ತೆಗೆದುಕೊಂಡರು.

ಮಹಿಳೆಯರ ವಿಭಾಗದಲ್ಲಿ ಮೊದಲ ಮೂರೂ ಸ್ಥಾನಗಳೂ ಇಥಿಯೋಪಿಯದ ಅಥ್ಲೀಟ್‌ಗಳ ಪಾಲಾದವು. ಗೆಮೆಚು 31 ನಿಮಿಷ 38 ಸೆ.ಗಳಲ್ಲಿ ನಿಗದಿತ ಗುರಿ ಕ್ರಮಿಸಿದರು. ಅವರಿಗಿಂತ ನಾಲ್ಕು ಸೆಕೆಂಡುಗಳನ್ನು ಹೆಚ್ಚು ತೆಗೆದುಕೊಂಡ ಫೋಟ್ಯೆನ್ ತೆಸ್‌ಫಯೆ (31 ನಿ. 42 ಸೆ.) ಎರಡನೇ, ದೇರಾ ದಿಡಾ (31 ನಿ. 45 ಸೆ.) ಮೂರನೆಯವರಾದರು.

ಮುರಳಿ, ತಂಶಿಗೆ ಅಗ್ರಸ್ಥಾನ: ಗುಜರಾತ್‌ನ ಮುರಳಿ ಗವಿತ್ ಮತ್ತು ಉತ್ತರ ಪ್ರದೇಶದ ತಂಶಿ ಸಿಂಗ್ ಅವರು ಕ್ರಮವಾಗಿ ಎಲೀಟ್ ಭಾರತೀಯ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಅಗ್ರಸ್ಥಾನ ಪಡೆದರು. ಮುರಳಿ 29 ನಿ. 58.03 ಸೆ.ಗಳೊಂದಿಗೆ ಗುರಿ ತಲುಪಿದರೆ, ತಂಶಿ 34 ನಿ. 12 ಸೆಕೆಂಡುಗಳನ್ನು ತೆಗೆದುಕೊಂಡರು.

ಕಂಠೀರವ ಕ್ರೀಡಾಂಗಣದಲ್ಲಿ ಆರಂಭವಾದ ರೇಸ್ ಪ್ರಮುಖ ರಸ್ತೆಗಳಲ್ಲಿ ಸಾಗಿ ಅದೇ ಕ್ರೀಡಾಂಗಣದಲ್ಲಿ ಕೊನೆಗೊಂಡಿತು. ಎಲೀಟ್ ಟೆನ್ ಕೆ ಓಟ ಅಲ್ಲದೆ ಓಪನ್ ಟೆನ್ ಕೆ, ಅಂಗವಿಕಲರು, ಹಾಗೂ ಹಿರಿಯ ನಾಗರಿಕರು ಮತ್ತು ಮಜಾ ರನ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ವೃತ್ತಿಪರ ಮತ್ತು ಹವ್ಯಾಸಿ ಓಟಗಾರರು ಸೇರಿದಂತೆ 27 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡರು.



ವಿಶ್ವ ಟೆನ್ ಕೆ ಓಟದ ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನ ಪಡೆದ ಇಥಿಯೋಪಿಯದ ಸೆಹಾಯ್ ಗೆಮೆಚು (ಮುಂದೆ ಇರುವವರು) ಹಾಗೂ ಸಹ ಅಥ್ಲೀಟ್‌ಗಳು ಗುರಿಯತ್ತ ಓಡುತ್ತಿರುವುದು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಫಲಿತಾಂಶ

ಪುರುಷರು: ಸೆಬಾಸ್ಟಿಯನ್ ಸಾವೆ (ಕೆನ್ಯಾ; ಕಾಲ: 27 ನಿ. 58.24 ಸೆ.)–1, ರಾಡ್ರಿಗ್ ಕ್ವಿಜೆರಾ (ಬುರುಂಡಿ; ಕಾಲ: 27 ನಿ. 58.35 ಸೆ.)–2, ಹಿಲರಿ ಚೆಕ್ವೊನಿ (ಕೆನ್ಯಾ; ಕಾಲ: 27 ನಿ. 59.70 ಸೆ.)–3

ಮಹಿಳೆಯರು: ಸೆಹಾಯ್ ಗೆಮೆಚು (ಇಥಿಯೋಪಿಯ; 31 ನಿ. 38 ಸೆ.)–1, ಫೋಟ್ಯೆನ್ ತೆಸ್‌ಫಯೆ (ಇಥಿಯೋಪಿಯ; 31 ನಿ. 42 ಸೆ.)–2, ದೇರಾ ದಿಡಾ (ಇಥಿಯೋಪಿಯ; 31 ನಿ. 45 ಸೆ.)–3

ಎಲೀಟ್ ಭಾರತೀಯರ ವಿಭಾಗ: ಪುರುಷರು: ಮುರಳಿ ಗವಿತ್ (29 ನಿ. 58.03 ಸೆ.)–1, ಹರ್ಮನ್‌ಜೋತ್ ಸಿಂಗ್ (29 ನಿ. 59.10 ಸೆ.)–2, ಉತ್ತಮ್ ಚಾಂದ್ (29 ನಿ. 59.24 ಸೆ.)–3, ಮಹಿಳೆಯರು: ತಂಶಿ ಸಿಂಗ್ (34 ನಿ. 12 ಸೆ.)–1, ಪೂನಂ ಸೋನು (34 ನಿ. 29 ಸೆ.)–2, ಸೀಮಾ (34 ನಿ. 30 ಸೆ.)–3

ಕೋಚ್ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ

ಗುವಾಹಟಿ (ಪಿಟಿಐ): ಇಲ್ಲಿಯ ಸೋಲಲ್‌ಗಾಂವ್‌ನ ಭಾರತ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ಪ್ರಭಾರಿ ಹಾಗೂ ಈಜು ಕೋಚ್ ಮೃಣಾಲ್ ಬಾಸುಮತರಿ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಾಗಿದೆ.

ಲೈಂಗಿಕ ಕಿರುಕುಳದ ದೂರು ನೀಡಿರುವವರಲ್ಲಿ ಬಹುತೇಕರು ಬಾಲಕಿಯರು ಎಂದು ಎಸ್‌ಎಐ ಪ್ರಕಟಣೆಯಲ್ಲಿ ತಿಳಿಸಿದೆ. ಇಲ್ಲಿಯ ಪಲ್ಟನ್ ಬಾಜಾರ್ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಗುವಾಹಟಿಯಲ್ಲಿ ನಡೆದ ಆಯ್ಕೆ ಟ್ರಯಲ್ಸ್ ವೇಳೆ ಈ ವಿಷಯ ಬೆಳಕಿಗೆ ಬಂದಿದೆ. ಈ ಕುರಿತು ಈಗಾಗಲೇ ತನಿಖೆ ಕೂಡ ಆರಂಭವಾಗಿದೆ.

'ಲೈಂಗಿಕ ದೌರ್ಜನ್ಯವನ್ನು ಸಂಸ್ಥೆಯು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ನಮ್ಮ ಅಥ್ಲೀಟ್‌ಗಳಿಗೆ ನ್ಯಾಯ ಒದಗಿಸುವೆವು' ಎಂದು ಎಸ್‌ಎಐ ಪ್ರಕಟಣೆಯಲ್ಲಿ ತಿಳಿಸಿದೆ.

ಈಜು ಫೆಡರೇಷನ್ ಅಧ್ಯಕ್ಷರಾಗಿ ಜಯಪ್ರಕಾಶ್ ಮರು ಆಯ್ಕೆ

ಚೆನ್ನೈ (ಪಿಟಿಐ): ಆರ್.ಎನ್. ಜಯಪ್ರಕಾಶ್ ಅವರು ಭಾರತ ಈಜು ಫೆಡರೇಷನ್‌ನ ಅಧ್ಯಕ್ಷರಾಗಿ ಅವಿರೋಧವಾಗಿ ಮರು ಆಯ್ಕೆಯಾದರು.

ಭಾನುವಾರ ಇಲ್ಲಿ ನಡೆದ ಫೆಡರೇಷನ್‌ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ಮೋನಲ್ ಚೋಕ್ಸಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಖಜಾಂಚಿಯನ್ನಾಗಿ ಸುದೇಶ್ ನಗ್ವೆಂಕರ್, ಉಪಾಧ್ಯಕ್ಷರುಗಳಾಗಿ ಅನಿಲ್ ವ್ಯಾಸ್, ಎಂ. ಸತೀಶ್ ಕುಮಾರ್, ಭಾಸ್ಕರ್ ದಾಸ್, ಅನಿಲ್ ಖತ್ರಿ, ಜಂಟಿ ಕಾರ್ಯದರ್ಶಿಗಳಾಗಿ ಸೀಮಾ ಮೆಹರೊತ್ರಾ, ಟಿ.ಎಸ್. ಮುರಳಿಧರನ್, ಎಂ. ಲೋಕೇಶ್ವರ್ ಸಿಂಗ್, ಲಕ್ಷ್ಮಿ ಚಂದ್ರ ಮಹುಕರ್ ಅವರನ್ನು ಜಂಟಿ ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಯಿತು.

ಸಂಕ್ಷಿಪ್ತ ಸುದ್ದಿ

ಬೃಹತ್ ಶೋಧ ಕಾರ್ಯಾಚರಣೆ

ಪೂಂಛ್/ ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಗಡಿ ಜಿಲ್ಲೆ ಪೂಂಛ್‌ನಲ್ಲಿ ಅನುಮಾನಾಸ್ಪದ ಚಲನವಲನಗಳು ಕಂಡುಬಂದ ಕಾರಣ ಭಾನುವಾರ ಸೇನಾಪಡೆ ಬೃಹತ್ ಶೋಧ ಕಾರ್ಯಾಚರಣೆ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದರು.

ಮೆಂಧರ್ ಸೆಕ್ಟರ್‌ನಲ್ಲಿ ಗಸ್ತು ತಿರುಗುತ್ತಿದ್ದ ಸೈನಿಕರು ನಡೆಸಿದ ಗುಂಡಿನ ದಾಳಿಯಲ್ಲಿ ಯಾರಿಗೂ ಹಾನಿಯಾಗಿಲ್ಲ. ಕಾರ್ಯಾಚರಣೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಅಲ್ಲಿನ ನಿವಾಸಿಗಳಿಗೆ ಮನೆಯ ಒಳಗೇ ಇರಲು ಸೂಚಿಸಲಾಗಿತ್ತು ಎಂದರು.

ಇಂದಿನಿಂದ ಜಿ20 ಕಾರ್ಯಕಾರಿ ಸಭೆ

ಶ್ರೀನಗರ: ಸೋಮವಾರದಿಂದ ಆರಂಭವಾಗಲಿರುವ ಜಿ20 ಪ್ರವಾಸೋದ್ಯಮ ಕಾರ್ಯಕಾರಿ ಗುಂಪಿನ ಸಭೆಗೆ ಶ್ರೀನಗರವು ಸಜ್ಜಾಗಿದ್ದು, ನಾಗರಿಕ ಮತ್ತು ಪೊಲೀಸ್ ಇಲಾಖೆಯು ಸಭೆಯನ್ನು ಯಶಸ್ವಿಗೊಳಿಸಲು ಅಂತಿಮ ಸಿದ್ಧತೆಗಳನ್ನು ಕೈಗೊಳ್ಳುತ್ತಿದೆ. ಸಭೆ ನಡೆಯಲಿರುವ ಶೇರ್ –ಎ– ಕಾಶ್ಮೀರ್ ಇಂಟರ್ ನ್ಯಾಷನಲ್ ಕನ್ವೆನ್ಷನ್ ಕೇಂದ್ರಕ್ಕೆ ಹೋಗುವ ಮಾರ್ಗವನ್ನು ನವವಧುವಿನಂತೆ ಅಲಂಕರಿಸಲಾಗಿದೆ.

ಮೂರು ದಿನಗಳ ಕಾಲ ನಡೆಯುವ ಸಭೆಯಲ್ಲಿ ವಿವಿಧ ದೇಶಗಳಿಂದ ಕನಿಷ್ಠ 60 ವಿದೇಶಿ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಜಮ್ಮು ಮತ್ತು ಕಾಶ್ಮೀರದಾದ್ಯಂತ ಭಾರಿ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಪ್ರತಿನಿಧಿಗಳು ಸಂಚರಿಸುವ ರಸ್ತೆಗಳು ಸ್ಫೋಟಕಗಳಿಂದ ಮುಕ್ತವಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಿಆರ್‌ಪಿಎಫ್ ಸಿಬ್ಬಂದಿ ಐಇಡಿ ಡಿಟೆಕ್ಟರ್ ಮತ್ತು ಶ್ವಾನದಳದ ವ್ಯವಸ್ಥೆಯನ್ನು ಮಾಡಿಕೊಂಡಿವೆ ಎಂದು ಮೂಲಗಳು ತಿಳಿಸಿವೆ.

ದೇವಸ್ಥಾನಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗೆ ನಿಷೇಧ: ಟಿಡಿಬಿ

ತಿರುವನಂತಪುರ (ಪಿಟಿಐ): 'ತನ್ನ ಆಡಳಿತಕ್ಕೊಳಪಟ್ಟಿರುವ ದೇವಸ್ಥಾನಗಳಲ್ಲಿ ಆರ್‌ಎಸ್‌ಎಸ್ ಶಾಖೆಯ ಚಟುವಟಿಕೆ ಅಥವಾ ಅದು ಕೈಗೊಳ್ಳುವ ತರಬೇತಿ ನಿಷೇಧಿಸುವಂತೆ ಈ ಹಿಂದೆ ಹೊರಡಿಸಲಾಗಿದ್ದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಿ' ಎಂದು ತಿರುವಾಂಕೂರು ದೇವಸ್ಥಾನ ಮಂಡಳಿಯು (ಟಿಡಿಬಿ) ಅಧಿಕಾರಿಗಳಿಗೆ ಸೂಚಿಸಿದೆ. ಈ ಸಂಬಂಧ ಸುತ್ತೋಲೆಯೊಂದನ್ನು ಹೊರಡಿಸಿದೆ.

'ಆರ್‌ಎಸ್‌ಎಸ್‌ನವರು ಶಸ್ತ್ರಾಸ್ತ್ರ ತರಬೇತಿಗೆ ದೇವಸ್ಥಾನಕ್ಕೆ ಸೇರಿದ ಜಾಗ ಬಳಸಿಕೊಳ್ಳುವುದರ ಮೇಲೆ ನಿರ್ಬಂಧ ಹೇರುವಂತೆ 2021ರಲ್ಲಿ ಹೊರಡಿಸಿದ್ದ ಆದೇಶದಲ್ಲಿ ಸೂಚಿಸಲಾಗಿತ್ತು. ಆದರೆ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿಲ್ಲ' ಎಂದು ಟಿಡಿಬಿ ಸುತ್ತೋಲೆಯಲ್ಲಿ ತಿಳಿಸಿದೆ.

ಪಾಕ್ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ಅಮೃತಸರ (ಪಿಟಿಐ): ಗಡಿ ಭದ್ರತಾ ಪಡೆಯವರು (ಬಿಎಸ್‌ಎಫ್) ಪಂಜಾಬ್‌ನ ಅಮೃತಸರ ಬಳಿಯ ಅಂತರರಾಷ್ಟ್ರೀಯ ಗಡಿ ಸನಿಹ ಪಾಕಿಸ್ತಾನದ ಡ್ರೋನ್‌ವೊಂದನ್ನು ಹೊಡೆದುರುಳಿಸಿದ್ದಾರೆ.

'ಅಮೃತಸರದ ಧನೋಯಿ ಕಾಲನ್ ಗ್ರಾಮದ ಬಳಿ ಶನಿವಾರ ರಾತ್ರಿ ಪಹರೆ ಕಾಯುತ್ತಿದ್ದ ಸಿಬ್ಬಂದಿಗೆ ಡ್ರೋನ್ ಸದ್ದು ಕೇಳಿಸಿತ್ತು. ಕೂಡಲೇ ಅದರತ್ತ ಗುಂಡು ಹಾರಿಸಿ ನೆಲಕ್ಕುರುಳಿಸಿದ್ದಾರೆ. ಅದರಲ್ಲಿ 3.3 ಕೆ.ಜಿ ತೂಕದ ಮೂರು ಹೆರಾಯಿನ್ ಪೊಟ್ಟಣಗಳು ಇದ್ದವು. ಅವುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಬಿಎಸ್‌ಎಫ್ ಪ್ರಕಟಣೆ ತಿಳಿಸಿದೆ.

ಪಿಎಲ್‌ಎಫ್‌ಐ ಕಮಾಂಡರ್ ದಿನೇಶ್ ಬಂಧನ

ನವದೆಹಲಿ (ಪಿಟಿಐ): ನಿಷೇಧಿತ ಮಾವೋವಾದಿ ಸಂಘಟನೆ ಪೀಪಲ್ಸ್ ಲಿಬರೇಶನ್ ಫ್ರಂಟ್ ಆಫ್ ಇಂಡಿಯಾದ (ಪಿಎಲ್‌ಎಫ್‌ಐ) ಸ್ವಘೋಷಿತ ಪರಮೋಚ್ಚ ನಾಯಕ ದಿನೇಶ್ ಗೋಪ್‌ನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಬಂಧಿಸಿದೆ ಎಂದು ವಕ್ತಾರರು ಭಾನುವಾರ ತಿಳಿಸಿದರು.

ಗೋಪ್ ವಿರುದ್ಧ ಜಾರ್ಖಂಡ್, ಬಿಹಾರ ಮತ್ತು ಒಡಿಶಾದಲ್ಲಿ 100ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಈತನ ಸುಳಿವು ನೀಡಿದವರಿಗೆ ₹30 ಲಕ್ಷ ಬಹುಮಾನ ನೀಡುವುದಾಗಿ ಘೋಷಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.



ಸಪ್ತ ಶತಕ ಸರದಾರ ಕೊಹ್ಲಿ; ಗುಜರಾತ್‌ಗೆ ಭರ್ಜರಿ ಗೆಲುವು: ಪ್ಲೇಆಫ್‌ಗೆ ಸಾಗದ ಬೆಂಗಳೂರು

ಗಿಲ್ ಅಬ್ಬರಕ್ಕೆ ಆರ್‌ಸಿಬಿ ಕನಸು ಭಗ್ನ

• ಗಿರೀಶ ದೊಡ್ಡಮನಿ

ಬೆಂಗಳೂರು: ಯುವತಾರೆ ಶುಭಮನ್ ಗಿಲ್ ಬ್ಯಾಟಿಂಗ್ ಅಬ್ಬರಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ಲೇ ಆಫ್ ಕನಸು ನುಚ್ಚುನೂರಾಯಿತು.

ಭಾನುವಾರ ರಾತ್ರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿಯ ದಾಖಲೆಯ ಶತಕವನ್ನು ಕಣ್ಮನ ತುಂಬಿಕೊಂಡಿದ್ದ 36 ಸಾವಿರಕ್ಕೂ ಅಧಿಕ ಪ್ರೇಕ್ಷಕರು ಪಂದ್ಯದ ಕೊನೆಗೆ ನಿರಾಶೆಯಿಂದ ತಲೆ ಮೇಲೆ ಕೈಹೊತ್ತು ನಿಂತರು. ಅದಕ್ಕೆ ಕಾರಣರಾಗಿದ್ದು ಪಂಜಾಬಿ ಹುಡುಗ ಗಿಲ್ (ಅಜೇಯ 104; 52ಎ, 4X5, 6X8) ಅವರ ಆಟ. ಗಿಲ್ ಅವರು ಟೂರ್ನಿಯಲ್ಲಿ ಗಳಿಸಿದ ಎರಡನೇ ಶತಕ ಇದು. ಇದರಿಂದಾಗಿ ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡ 6 ವಿಕೆಟ್‌ಗಳಿಂದ ಗೆದ್ದಿತು. ಈ ತಂಡದ ಅಂಕಗಳು 20ಕ್ಕೇರಿದವು.

ಈ ಸೋಲಿನೊಂದಿಗೆ ಆರ್‌ಸಿಬಿ ತಂಡವು ಪ್ಲೇ ಆಫ್ ತಲುಪುವ ಅವಕಾಶ ಕಳೆದುಕೊಂಡಿತು. ಕಳೆದ ಮೂರು ಆವೃತ್ತಿಗಳಲ್ಲಿಯೂ ಬೆಂಗಳೂರು ಬಳಗವು ನಾಲ್ಕರ ಹಂತ ಪ್ರವೇಶಿಸಿತ್ತು.

ಲೀಗ್ ಹಂತದ ಈ ಕೊನೆಯ ಪಂದ್ಯದಲ್ಲಿ ಟಾಸ್ ಗೆದ್ದ ಗುಜರಾತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿರಾಟ್ (ಅಜೇಯ 101;61ಎ, 4X13. 6X1) ಶತಕದ ಬಲದಿಂದ ಆರ್‌ಸಿಬಿಯು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 197 ರನ್ ಗಳಿಸಿತು. ಆದರೆ ಈ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಬೌಲರ್‌ಗಳು ವಿಫಲರಾದರು. ಕೊನೆಯ ಓವರ್‌ಗಳಲ್ಲಿ ಗುಜರಾತ್ ತಂಡಕ್ಕೆ ಗೆಲುವಿಗಾಗಿ 8 ರನ್‌ಗಳ ಅವಶ್ಯಕತೆ ಇತ್ತು. ವೇಯ್ನ್ ಪಾರ್ನೆಲ್ ಮೊದಲೆರಡು ಎಸೆತಗಳಲ್ಲಿ ನೋಬಾಲ್ ಮತ್ತು ವೈಡ್ ಹಾಕುವ ಮೂಲಕ ಲಯ ತಪ್ಪಿದರು. ನಂತರ ಗಿಲ್ ಸಿಕ್ಸರ್ ಎತ್ತಿದರು. ಟೈಟನ್ಸ್ ತಂಡವು 19.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು.

ಶುಭಮನ್ ಗಿಲ್ ಮತ್ತು ಅರ್ಧಶತಕ ಬಾರಿಸಿದ ಇಂಪ್ಯಾಕ್ಟ್ ಪ್ಲೇಯರ್ ವಿಜಯಶಂಕರ್ ಅವರನ್ನು ಕಟ್ಟಿಹಾಕುವಲ್ಲಿ ಸಫಲರಾಗಲಿಲ್ಲ.

ಸಪ್ತ ಶತಕ ಸರದಾರ: ವಿರಾಟ್ ಕೊಹ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ 'ಸಪ್ತ ಶತಕ'ಗಳ ಸರದಾರನಾದರು. ಇದರೊಂದಿಗೆ ಕ್ರಿಸ್ ಗೇಲ್ ದಾಖಲೆಯನ್ನು ಮೀರಿ ನಿಂತರು.

ಮೊದಲ ಓವರ್‌ನ ಮೂರನೇ ಎಸೆತವನ್ನು ಬೌಂಡರಿಗಟ್ಟುವ ಮೂಲಕ ವಿರಾಟ್ ತಮ್ಮ ಖಾತೆ ತರೆದರು. 35 ಎಸೆತಗಳಲ್ಲಿ ಅರ್ಧಶತಕ ಮುಟ್ಟಿದರು. ತಾವೆದುರಿಸಿದ 60ನೇ ಎಸೆತದಲ್ಲಿ ಶತಕದ ಗಡಿ ಮುಟ್ಟಿದರು.

ಪೆವಿಲಿಯನ್‌ನತ್ತ ತಮ್ಮ ಬ್ಯಾಟ್ ತೋರಿಸಿ ಸಂಭ್ರಮಿಸಿದರು. ಗಣ್ಯರ ಗ್ಯಾಲರಿಯಲ್ಲಿದ್ದ ತಮ್ಮ ಪತ್ನಿ ಅನುಷ್ಕಾ ಶರ್ಮಾ ಅವರ 'ಅಭಿನಂದನೆ'ಯನ್ನು ಸ್ವೀಕರಿಸಿದ ಸಂಜ್ಞೆ ಪ್ರದರ್ಶಿಸಿದರು. ವಿರಾಟ್ ಅವರದ್ದು ಈ ಟೂರ್ನಿಯಲ್ಲಿ ಸತತ ಎರಡನೇ ಶತಕ ಇದು.

ತವರಿನಂಗಳದಲ್ಲಿ ಕೊಹ್ಲಿಗೆ ಅದೃಷ್ಟವೂ ಜೊತೆ ನೀಡಿತು. ಇನಿಂಗ್ಸ್‌ನ ಆರನೇ ಓವರ್‌ನಲ್ಲಿ ಅವರು ಹೊಡೆದ ಚೆಂಡು ಗಾಳಿಯಲ್ಲಿ ತೇಲಿ ಕವರ್ ಮತ್ತು ಮಿಡ್ ಆಫ್ ನಡುವೆ ಬಿದ್ದಿತು. ಅಲ್ಲಿದ್ದ ಹಾರ್ದಿಕ್ ಕ್ಯಾಚ್ ಪಡೆಯಲು ಪ್ರಯತ್ನ ಮಾಡಲಿಲ್ಲ. ಇದರಿಂದಾಗಿ ಕೊಹ್ಲಿ ಮುಖದಲ್ಲಿ ಮೂಡಿದ ಅಚ್ಚರಿಯ ನಗುವಿಗೆ ಹಾರ್ದಿಕ್ ಕೂಡ ಮುಗುಳ್ನಕ್ಕರು.

ಕೊಹ್ಲಿ 99 ರನ್ ಗಳಿಸಿದ್ದ ಸಂದರ್ಭದಲ್ಲಿ ರನ್ ಔಟ್ ನಿಂದ ಪಾರಾದರು. ಫೀಲ್ಡರ್ ಹೊಡೆದ ನೇರ ಥ್ರೋಗೂ ಮುನ್ನ ಡೈವ್ ಮಾಡಿ ಕ್ರೀಸ್ ಸೇರಿಕೊಂಡಿದ್ದರು. ವಿಡಿಯೊ ರೆಫರಲ್‌ನಲ್ಲಿ ನಾಟ್‌ಔಟ್ ನಿರ್ಧಾರ ಬರುವವರೆಗೂ ಕ್ರೀಡಾಂಗಣದಲ್ಲಿ ಗಾಢ ಮೌನ ಆವರಿಸಿತ್ತು.

ತಮ್ಮ ಶತಕದ ಮೂಲಕ ತಂಡವನ್ನೂ ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಿಂದ ಪಾರು ಮಾಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಅವರು ಡುಪ್ಲೆಸಿ ಜೊತೆಗೆ 67 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಟೂರ್ನಿಯಲ್ಲಿ ಇವರಿಬ್ಬರೂ ಎಂಟನೇ ಬಾರಿ ಅರ್ಧಶತಕದ ಜೊತೆಯಾಟವಾಡಿದ ದಾಖಲೆ ಮಾಡಿದರು.ಆದರೆ, ಫಫ್ ಔಟಾದ ನಂತರ ವಿರಾಟ್ ಇನಿಂಗ್ಸ್‌ನ ಸಂಪೂರ್ಣ ಹೊಣೆ ಹೊತ್ತರು.

ಕ್ರೀಸ್‌ಗೆ ಬಂದ ಗ್ಲೆನ್ ಮ್ಯಾಕ್ಸ್‌ವೆಲ್ ಒಂದು ಬೌಂಡರಿ ಮತ್ತು ಸಿಕ್ಸರ್ ಹೊಡೆದು ಸ್ಪಿನ್ನರ್ ರಶೀದ್ ಖಾನ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಮೈಕೆಲ್ ಬ್ರೇಸ್‌ವೆಲ್ ಮತ್ತು ಅನುಜ್ ರಾವತ್ ಉಪಯುಕ್ತ ಕಾಣಿಕೆ ನೀಡಿದರು.

ಅರ್ಧ ಗಂಟೆ ವಿಳಂಬ: ಬೆಂಗಳೂರಿನಲ್ಲಿ ಭಾನುವಾರ ಸಂಜೆ ಸುರಿದ ರಭಸದ ಮಳೆಯಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಗುಜರಾತ್ ಟೈಟನ್ಸ್ ನಡುವಣ ಐಪಿಎಲ್ ಪಂದ್ಯವು ಅರ್ಧ ಗಂಟೆ ವಿಳಂಬವಾಗಿ ಆರಂಭವಾಯಿತು. ಸಂಜೆ 6.45ರ ಸುಮಾರಿಗೆ ಮಳೆ ನಿಂತಿತು. ಆದರೆ ಮೈದಾನದ ಹೊರಾಂಗಣ ತೇವವಿದ್ದ ಕಾರಣ ಪಂದ್ಯವನ್ನು ರಾತ್ರಿ ಎಂಟು ಗಂಟೆಗೆ ಆರಂಭಿಸಲಾಯಿತು.

ಪಂದ್ಯ ವೀಕ್ಷಿಸಿದ ಡಿ.ಕೆ. ಶಿವಕುಮಾರ್: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಿದರು.



ಶುಭಮನ್ ಗಿಲ್ ಶತಕ ಸಂಭ್ರಮ –ಪ್ರಜಾವಾಣಿ ಚಿತ್ರ/ರಂಜು ಪಿ

ಅತಿ ಹೆಚ್ಚು ಶತಕ ಗಳಿಸಿದವರು

ಆಟಗಾರ	ಶತಕ
ವಿರಾಟ್ ಕೊಹ್ಲಿ	7
ಕ್ರಿಸ್ ಗೇಲ್	6
ಜೊಸ್ ಬಟ್ಲರ್	5

ಸತತ ಎರಡು ಶತಕ ಗಳಿಸಿದವರು

ಆಟಗಾರ	ತಂಡ	ವರ್ಷ
ಶಿಖರ್ ಧವನ್	ಡೆಲ್ಲಿ ಕ್ಯಾಪಿಟಲ್ಸ್	2020
ಜೊಸ್ ಬಟ್ಲರ್	ರಾಜಸ್ಥಾನ ರಾಯಲ್ಸ್	2022
ವಿರಾಟ್ ಕೊಹ್ಲಿ	ಆರ್‌ಸಿಬಿ	2023

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 5ಕ್ಕೆ 197 (20 ಓವರ್)

ವಿರಾಟ್ ಔಟಾಗದೆ 101 (61 ಎ., 4X13, 6X1)
ಡುಪ್ಲೆಸಿ ಸಿ ತೆವಾಟಿಯಾ ಬಿ ನೂರ್ 28 (19ಎ, 4X5)
ಮ್ಯಾಕ್ಸ್‌ವೆಲ್ ಬಿ ರಶೀದ್ 11 (5ಎ, 4X1, 6X1)
ಮಹಿಪಾಲ್ ಸ್ಟಂಪ್ಡ್ ಸಹಾ ಬಿ ನೂರ್ 1 (3ಎ)
ಬ್ರೇಸ್‌ವೆಲ್ ಸಿ ಮತ್ತು ಬಿ ಶಮಿ 26 (16ಎ, 4X5)
ದಿನೇಶ್ ಸಿ ಸಹಾ ಬಿ ಯಶ್ 0 (1ಎ)
ಅನುಜ್ ಔಟಾಗದೆ 23 (15 ಎ., 4X1, 6X1)
ಇತರೆ: 7 (ಲೆಗ್ ಬೈ 2, ವೈಡ್ 5)
ವಿಕೆಟ್ ಪತನ: 1–67 (ಫಫ್ ಡುಪ್ಲೆಸಿ; 7.1), 2–80 (ಗ್ಲೆನ್ ಮ್ಯಾಕ್ಸ್‌ವೆಲ್; 8.2), 3–85 (ಮಹಿಪಾಲ್; 9.1), 4–132 (ಮೈಕೆಲ್ ಬ್ರೇಸ್‌ವೆಲ್; 13.6), 5–133 (ದಿನೇಶ್ ಕಾರ್ತಿಕ್; 14.2)
ಬೌಲಿಂಗ್: ಮೊಹಮ್ಮದ್ ಶಮಿ 4–0–39–1 ಯಶ್ ದಯಾಳ್ 4–0–39–1, ರಶೀದ್ ಖಾನ್ 4–0–24–1, ನೂರ್ 4–0–39–2, ಮೋಹಿತ್ 4–0–54–0

ಗುಜರಾತ್ ಟೈಟನ್ಸ್ 4ಕ್ಕೆ 198 (19.1 ಓವರ್)

ವೃದ್ಧಿಮಾನ್ ಸಿ ಪಾರ್ನೆಲ್ ಬಿ ಸಿರಾಜ್ 12 (14ಎ, 4X2)
ಶುಭಮನ್ ಔಟಾಗದೆ 104 (52ಎ, 4X5, 6X8)
ವಿಜಯ್ ಸಿ ಕೊಹ್ಲಿ ಬಿ ವೈಶಾಖ 53 (35ಎ, 4X7, 6X2)
ಶನಕ ಸಿ ಪ್ರಭುದೇಸಾಯಿ (ಬದಲಿ) ಬಿ ಹರ್ಷಲ್ 0 (3ಎ)
ಮಿಲ್ಲರ್ ಸಿ ಪ್ರಭುದೇಸಾಯಿ (ಬದಲಿ) ಬಿ ಸಿರಾಜ್ 6 (7ಎ, 4X1)
ತೆವಾಟಿಯಾ ಔಟಾಗದೆ 4 (5ಎ)
ಇತರೆ: 19 (ಬೈ 5, ಲೆಗ್‌ಬೈ 6, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1-25 (ವೃದ್ಧಿಮಾನ್ ಸಹಾ, 2.6), 2-148 (ವಿಜಯ್ ಶಂಕರ್, 14.5), 3-150 (ದಸುನ್ ಶನಕ, 15.3), 4-171 (ಡೇವಿಡ್ ಮಿಲ್ಲರ್, 17.4)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–30–2, ವೇಯ್ನ್ ಪಾರ್ನೆಲ್ 3.1–42–0, ವಿಜಯಕುಮಾರ್ ವೈಶಾಖ್ 4–0–40–1, ಹಿಮಾಂಶು ಶರ್ಮಾ 3–0–28–0, ಹರ್ಷಲ್ ಪಟೇಲ್ 4–0–29–1, ಮೈಕಲ್ ಬ್ರೇಸ್‌ವೆಲ್ 1–0–16–0
ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ ಆರು ವಿಕೆಟ್‌ಗಳ ಜಯ



ವಿರಾಟ್ ಕೊಹ್ಲಿ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	14	10	4	0	20	0.839
ಚೆನ್ನೈ	14	8	5	1	17	0.652
ಲಖನೌ	14	8	5	1	17	0.284
ಮುಂಬೈ	14	8	6	0	16	-0.044
ರಾಜಸ್ಥಾನ	14	7	7	0	14	0.148
ಬೆಂಗಳೂರು	14	7	7	0	14	0.135
ಕೋಲ್ಕತ್ತ	14	6	8	0	12	-0.239
ಪಂಜಾಬ್	14	6	8	0	12	-0.304
ಡೆಲ್ಲಿ	14	5	9	0	10	-0.808
ಹೈದರಾಬಾದ್	14	4	10	0	8	-0.590

ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪ್ಲೇ ಆಫ್ ಪಂದ್ಯಗಳು

ಮೇ 23	ಕ್ವಾಲಿಫೈಯರ್1	ಗುಜರಾತ್–ಚೆನ್ನೈ
ಮೇ 24	ಎಲಿಮಿನೇಟರ್	ಲಖನೌ–ಮುಂಬೈ

ಗ್ರೀನ್ ಶತಕ; ಪ್ಲೇಆಫ್‌ಗೆ ಮುಂಬೈ

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 8 ವಿಕೆಟ್ ಗೆಲುವು

ಮುಂಬೈ (ಪಿಟಿಐ): ಕ್ಯಾಮರಾನ್ ಗ್ರೀನ್ ಅವರ ಅಬ್ಬರದ ಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎಂಟು ವಿಕೆಟ್‌ಗಳಿಂದ ಮಣಿಸಿತು. ಇದರೊಂದಿಗೆ ಪ್ಲೇ ಆಫ್‌ಗೆ ಪ್ರವೇಶ ಪಡೆಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸನ್ ರೈಸರ್ಸ್ ತಂಡ ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 200 ರನ್ ಗಳಿಸಿತು. ಮಯಂಕ್ ಅಗರವಾಲ್ (83 ರನ್, 46 ಎ., 4X8, 6X4) ಮತ್ತು ವಿವ್ರಾಂತ್ ಶರ್ಮಾ (69 ರನ್, 47 ಎ., 4X9, 6X2) ಅವರು ಗಮನ ಸೆಳೆದರು.

ಮುಂಬೈ ತಂಡ ಇನ್ನೂ ಎರಡು ಓವರ್‌ಗಳು ಇರುವಂತೆಯೇ 2 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು. ಎದುರಾಳಿ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿದ ಗ್ರೀನ್ (ಔಟಾಗದೆ 100, 47 ಎ., 4X8, 6X8) ಅವರು ಭರ್ಜರಿ ಗೆಲುವಿಗೆ ಕಾರಣರಾದರು. ನಾಯಕ ರೋಹಿತ್ ಶರ್ಮಾ (56, 37 ಎ., 4X8,. 6X1) ಕೊಡುಗೆ ನೀಡಿದರು.

ಇದರೊಂದಿಗೆ ಮುಂಬೈ, ಒಟ್ಟು 16 ಪಾಯಿಂಟ್ಸ್‌ಗಳೊಂದಿಗೆ 'ಪ್ಲೇ ಆಫ್'ನಲ್ಲಿ ಸ್ಥಾನ ಖಚಿತಪಡಿಸಿಕೊಂಡಿತು. ಆರ್‌ಸಿಬಿ ಮತ್ತು ಗುಜರಾತ್ ಟೈಟನ್ಸ್ ನಡುವೆ ಬೆಂಗಳೂರಿನಲ್ಲಿ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಆರ್‌ಸಿಬಿ ಸೋತಿದ್ದರಿಂದ ಮುಂಬೈ ನಾಲ್ಕನೇ ಸ್ಥಾನ ಪಡೆದು ಪ್ಲೇ ಆಫ್ ಪ್ರವೇಶಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಮುಂಬೈ ತಂಡ, ಇಶಾನ್ ಕಿಶನ್ (14 ರನ್, 12 ಎ.) ಅವರನ್ನು ಬೇಗನೇ ಕಳೆದುಕೊಂಡಿತು. ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಅವರು ಹ್ಯಾರಿ ಬ್ರೂಕ್‌ಗೆ ಕ್ಯಾಚಿತ್ತರು. ಎರಡನೇ ವಿಕೆಟ್‌ಗೆ ಜತೆಯಾದ ರೋಹಿತ್ ಮತ್ತು ಗ್ರೀನ್ 65 ಎಸೆತಗಳಲ್ಲಿ 128 ರನ್ ಸೇರಿಸಿ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು. ಇಬ್ಬರೂ ಆಕ್ರಮಣಕಾರಿಯಾಗಿ ಆಡಿದರು. 'ಪವರ್ ಪ್ಲೇ'ನಲ್ಲಿ ಸ್ಕೋರ್ 60 ಆಗಿತ್ತು. ಅರ್ಧಶತಕ ಪೂರೈಸಿದ ಬೆನ್ನಲ್ಲೇ ರೋಹಿತ್ ಔಟಾದರೂ, ಗ್ರೀನ್ ತಮ್ಮ ಅಬ್ಬರ ಮುಂದುವರಿಸಿದರು.

ಸೂರ್ಯಕುಮಾರ್ ಯಾದವ್ (ಔಟಾಗದೆ 25, 16 ಎ., 4X4) ಜತೆ ಮುರಿಯದ ಮೂರನೇ ವಿಕೆಟ್‌ಗೆ 53 ರನ್ ಸೇರಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು. ತಂಡದ ಗೆಲುವಿನ ರನ್ ಗಳಿಸುವ ಜತೆಯಲ್ಲೇ ಐಪಿಎಲ್‌ನಲ್ಲಿ ಚೊಚ್ಚಲ ಶತಕವನ್ನೂ ಪೂರೈಸಿದರು.

ಮಯಂಕ್ ಮಿಂಚು: ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ತಂಡಕ್ಕೆ ಮಯಂಕ್ ಮತ್ತು ವಿವ್ರಾಂತ್ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 13.5 ಓವರ್‌ಗಳಲ್ಲಿ 140 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 200 (ವಿವ್ರಾಂತ್ ಶರ್ಮಾ 69, ಮಯಂಕ್ ಅಗರವಾಲ್ 83, ಹೆನ್ರಿಚ್ ಕ್ಲಾಸನ್ 18, ಏಡನ್ ಮರ್ಕರಂ ಔಟಾಗದೆ 13, ಆಕಾಶ್ ಮಧ್ವಾಲ್ 37ಕ್ಕೆ 4, ಕ್ರಿಸ್ ಜೋರ್ಡನ್ 42ಕ್ಕೆ 1) ಮುಂಬೈ ಇಂಡಿಯನ್ಸ್ 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 201 (ಇಶಾನ್ ಕಿಶನ್ 14, ರೋಹಿತ್ ಶರ್ಮಾ 56, ಕ್ಯಾಮರಾನ್ ಗ್ರೀನ್ ಔಟಾಗದೆ 100, ಸೂರ್ಯಕುಮಾರ್ ಯಾದವ್ ಔಟಾಗದೆ 25, ಭುವನೇಶ್ವರ್ ಕುಮಾರ್ 26ಕ್ಕೆ 1) ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 8 ವಿಕೆಟ್ ಗೆಲುವು



ಶತಕ ಗಳಿಸಿದ ಸಂಭ್ರಮದಲ್ಲಿ ಕ್ಯಾಮರಾನ್ ಗ್ರೀನ್ –ಎಎಫ್‌ಪಿ ಚಿತ್ರ

ಮುಂಬೈ ಪರ ರೋಹಿತ್ 5,000 ರನ್

ರೋಹಿತ್ ಶರ್ಮಾ ಅವರು ಮುಂಬೈ ಇಂಡಿಯನ್ಸ್ ತಂಡದ ಪರ 5000 ರನ್ ಪೂರೈಸಿದರು. ಐಪಿಎಲ್‌ನ ಮೊದಲ ಮೂರು ಆವೃತ್ತಿಗಳಲ್ಲಿ ಡೆಕ್ಕನ್ ಚಾರ್ಜರ್ಸ್ ತಂಡವನ್ನು ಪ್ರತಿನಿಧಿಸಿದ್ದ ಅವರು, 2011ರಲ್ಲಿ ಮುಂಬೈ ತಂಡವನ್ನು ಸೇರಿದ್ದರು. ಒಟ್ಟಾರೆಯಾಗಿ ಅವರು ಐಪಿಎಲ್‌ನಲ್ಲಿ 6,192 ರನ್ ಗಳಿಸಿದ್ದಾರೆ.

ಲೀಗ್ ಕ್ರಿಕೆಟ್ ಮತ್ತು ಅಂತರರಾಷ್ಟ್ರೀಯ ಪಂದ್ಯಗಳು ಸೇರಿದಂತೆ ಟಿ20 ಮಾದರಿಯಲ್ಲಿ 11 ಸಾವಿರ ರನ್ ಪೂರೈಸಿದ ಸಾಧನೆಯನ್ನೂ ಈ ಪಂದ್ಯದಲ್ಲಿ ಮಾಡಿದರು.

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	730

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	24

ರಂಗನಾಥಗೆ ಅಗ್ರಸ್ಥಾನ

ಬೆಳಗಾವಿ: ರಾಮನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ರಂಗನಾಥ ಸಿ ಅವರು ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) ಮೈದಾನದಲ್ಲಿ ಆರಂಭಗೊಂಡ 24ನೇ ಅಂತರ ಕಾಲೇಜು ಅಥ್ಲೆಟಿಕ್ ಕೂಟದಲ್ಲಿ ಪುರುಷರ ವಿಭಾಗದ 10 ಸಾವಿರ ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದರು.

ಭಾನುವಾರ ನಡೆದ ಸ್ಪರ್ಧೆಯಲ್ಲಿ ಅವರು 35 ನಿ. 51.93 ಸೆ.ಗಳಲ್ಲಿ ಗುರಿ ತಲುಪಿದರು. ದಕ್ಷಿಣ ಕನ್ನಡದ ಕೆವಿಜಿ ಎಂಜಿನಿಯರಿಂಗ್ ಕಾಲೇಜಿನ ತಿಶನ್ ಎ.ಎಂ.(38 ನಿ.07.48 ಸೆ) ದ್ವಿತೀಯ ಹಾಗೂ ಕೊಡಗು ಜಿಲ್ಲೆ ಕುಶಾಲನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಶಾಂತ್ ಎಸ್.ಬಿ.(39 ನಿ. 18.56 ಸೆ) ತೃತೀಯ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯ ವಿದ್ಯಾ ಸಿ.ಎಸ್.(49 ನಿ. 57.55 ಸೆ) ಪ್ರಥಮ ಸ್ಥಾನ ಪಡೆದರು. ಧಾರವಾಡ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ಮಂಜುಳಾ ಸುನಗಡ್ ಹಾಗೂ ಪುತ್ತೂರಿನ ವಿವೇಕಾನಂದ ಕಾಲೇಜಿನ ಮಂಜುಶ್ರೀ ಎ. 2 ಮತ್ತು ಮೂರನೇ ಸ್ಥಾನ ಪಡೆದರು.



ರಂಗನಾಥ ಸಿ.

ಶೈಲಿ ಸಿಂಗ್‌ಗೆ ಕಂಚು

ಯೊಕೊಹಾಮಾ, ಜಪಾನ್ (ಪಿಟಿಐ): ಭಾರತದ ಯುವ ಅಥ್ಲೀಟ್ ಶೈಲಿ ಸಿಂಗ್ ಅವರು ಸೀಕೊ ಗೋಲ್ಡನ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ಸ್‌ನ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು.

ಇಲ್ಲಿ ನಡೆಯುತ್ತಿರುವ ಕೂಟದಲ್ಲಿ 19 ವರ್ಷದ ಶೈಲಿ ಭಾನುವಾರ 6.65 ಮೀಟರ್ಸ್ ಸಾಧನೆ ಮಾಡಿದರು. ಅವರಿಗೆ ಸೀನಿಯರ್ ಮಟ್ಟದಲ್ಲಿ ಇದು ಮೊದಲ ಪ್ರಮುಖ ಅಂತರರಾಷ್ಟ್ರೀಯ ಕೂಟವಾಗಿತ್ತು.

ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಗೋಲ್ಡ್ ಲೆವಲ್‌ನ ಈ ಕೂಟದ ಮೊದಲ ಸುತ್ತಿನಲ್ಲೇ ಶೈಲಿ 6.65 ಮೀ. ದೂರ ಜಿಗಿದರು. ಈ ಮಟ್ಟದಲ್ಲಿ ಅವರಿಗೆ ಇದು ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.

ಜರ್ಮನಿಯ ಮರಿಸ್ ಲುಜೊಲೊ (6.79 ಮೀ.) ಚಿನ್ನ ಮತ್ತು ಆಸ್ಟ್ರೇಲಿಯಾದ ಬ್ರೂಕ್ ಬಶ್‌ಕ್ಯುಲ್ (6.77 ಮೀ.) ಬೆಳ್ಳಿ ಜಯಿಸಿದರು.

ಮಹಿಳಾ ಹಾಕಿ: ಭಾರತ–ಆಸ್ಟ್ರೇಲಿಯಾ ಪಂದ್ಯ ಡ್ರಾ

ಅಡಿಲೇಡ್ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ಮಹಿಳಾ ತಂಡಗಳ ನಡುವಣ ಮೂರು ಪಂದ್ಯಗಳ ಹಾಕಿ ಸರಣಿಯ ಅಂತಿಮ ಹಣಾಹಣಿ 1–1 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಭಾನುವಾರ ನಡೆದ ಪಂದ್ಯದ 25ನೇ ನಿಮಿಷದಲ್ಲಿ ಮ್ಯಾಡಿಸನ್ ಬ್ರೂಕ್ಸ್ ಅವರು ಆಸ್ಟ್ರೇಲಿಯಾ ತಂಡಕ್ಕೆ ಮುನ್ನಡೆ ತಂದಿತ್ತರು. ಮರುಹೋರಾಟ ನಡೆಸಿದ ಭಾರತ ತಂಡಕ್ಕೆ ದೀಪ್ ಗ್ರೇಸ್ ಎಕ್ಕಾ 42ನೇ ನಿಮಿಷದಲ್ಲಿ ಸಮಬಲದ ಗೋಲು ಗಳಿಸಿದರು. ಪೆನಾಲ್ಟಿ ಕಾರ್ನರ್ ಅವಕಾಶವನ್ನು ಅವರು ಗೋಲಾಗಿ ಪರಿವರ್ತಿಸಿದರು.

ಮೊದಲ ಎರಡು ಪಂದ್ಯಗಳನ್ನು ಜಯಿಸಿದ್ದ ಆತಿಥೇಯ ತಂಡ 2–0 ರಲ್ಲಿ ಸರಣಿ ತನ್ನದಾಗಿಸಿಕೊಂಡಿತು. ಭಾರತ ತಂಡ ತನ್ನ ಮುಂದಿನ ಪಂದ್ಯದಲ್ಲಿ ಗುರುವಾರ ಆಸ್ಟ್ರೇಲಿಯಾ 'ಎ' ತಂಡವನ್ನು ಎದುರಿಸಲಿದೆ.

ಸವಿತಾಗೆ 250ನೇ ಪಂದ್ಯ: ಭಾರತ ತಂಡದ ನಾಯಕಿ ಸವಿತಾ ಅವರಿಗೆ ಇದು 250ನೇ ಅಂತರರಾಷ್ಟ್ರೀಯ ಪಂದ್ಯವಾಗಿತ್ತು. 32 ವರ್ಷದ ಸವಿತಾ ಅವರು 2009 ರಲ್ಲಿ ಪದಾರ್ಪಣೆ ಮಾಡಿದ್ದರು. ಅದೇ ರೀತಿ ಡಿಫೆಂಡರ್ ನಿಕ್ಕಿ ಪ್ರಧಾನ್ ಅವರು 150ನೇ ಪಂದ್ಯ ಆಡಿದ ಸಾಧನೆ ಮಾಡಿದರು. ನಿಕ್ಕಿ 2016 ರಲ್ಲಿ ಮೊದಲ ಅಂತರರಾಷ್ಟ್ರೀಯ ಪಂದ್ಯ ಆಡಿದ್ದರು.



ಸವಿತಾ ಪೂನಿಯಾ

ಟಿಟಿ: ಶರತ್, ಸತ್ಯನ್ ಜಯದ ಆರಂಭ

ಡರ್ಬನ್ (ಪಿಟಿಐ): ಭಾರತದ ಶರತ್ ಕಮಲ್ ಹಾಗೂ ಜಿ.ಸತ್ಯನ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಗೆಲುವಿನ ಆರಂಭ ಮಾಡಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 56ನೇ ಸ್ಥಾನದಲ್ಲಿರುವ ಶರತ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ 11-8, 9-11, 11-9, 11-6, 11-6ರಿಂದ ಆಸ್ಟ್ರಿಯಾದ ಡೇವಿಡ್ ಸೆರ್ದೊರೊಗ್ಲು ವಿರುದ್ಧ ಜಯ ಸಾಧಿಸಿದರು. ಡೇವಿಡ್ ಅವರು ವಿಶ್ವ ಕ್ರಮಾಂಕದಲ್ಲಿ 170ನೇ ಸ್ಥಾನದಲ್ಲಿದ್ದಾರೆ.

ಮೊದಲ ಸುತ್ತಿನ ಮತ್ತೊಂದು ಹಣಾಹಣಿಯಲ್ಲಿ ಸತ್ಯನ್ ಅವರಿಗೆ 11-9, 11-8, 7-11, 11-2, 15-13, 13-11, 11-6ರಿಂದ ಇಂಗ್ಲೆಂಡ್‌ನ ಟಾಮ್ ಜಾರ್ವಿಸ್ ವಿರುದ್ಧ ಗೆಲುವು ಒಲಿಯಿತು.

'28ರಂದು ಸಂಸತ್ ಭವನದ ಎದುರು ಮಹಿಳಾ ಪಂಚಾಯತ್'

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳ ಪ್ರಕರಣದ ಆರೋಪಿ, ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟಿಸುತ್ತಿರುವ ಕುಸ್ತಿಪಟುಗಳ ಬೆಂಬಲಕ್ಕೆ ನಿಂತಿರುವ 'ಖಾಪ್ ಮಹಾ ಪಂಚಾಯತ್' ಮೇ 28ರಂದು ಹೊಸ ಸಂಸತ್ ಭವನದ ಎದುರು ಮಹಿಳಾ ಪಂಚಾಯತ್ ಆಯೋಜಿಸಲು ನಿರ್ಧರಿಸಿದೆ.

28ರಂದೇ ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ನೂತನ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

ಭಾನುವಾರ ಸಭೆ ಸೇರಿದ್ದ ಖಾಪ್ ಮುಖಂಡರು 'ದೊಡ್ಡ ನಿರ್ಧಾರ' ಕೈಗೊಳ್ಳುವ ನಿರೀಕ್ಷೆ ಇತ್ತು. ಆದರೆ ಅಂತಿಮವಾಗಿ ಸಂಸತ್ತಿನ ಎದುರು ಪ್ರತಿಭಟಿಸುವ ತೀರ್ಮಾನಕ್ಕೆ ಬಂದರು.ಈ ಸಭೆಗೆ ಕುಸ್ತಿಪಟು ಸಾಕ್ಷಿ ಮಲಿಕ್ ಅವರ ಪತಿ ಸತ್ಯವ್ರತ್ ಕಡಿಯಾನ್ ಹಾಜರಾದರೆ, ಬಜರಂಗ್ ಪೂನಿಯಾ ಹಾಗೂ ವಿನೇಶಾ ಫೋಗಟ್ ಪ್ರತಿಭಟನಾ ಸ್ಥಳದಲ್ಲೇ ಉಳಿದರು.

ಏ. 23ರಿಂದ ಕುಸ್ತಿಪಟುಗಳು ಜಂತರ್ ಮಂಥರ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ಒಬ್ಬ ಬಾಲಕಿ ಸೇರಿದಂತೆ ಏಳು ಮಂದಿ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಪೈಲ್ವಾನರು ಬ್ರಿಜ್ ಭೂಷಣ್ ವಿರುದ್ಧ ಆರೋಪ ಮಾಡಿದ್ದಾರೆ.

'ಬಜರಂಗ್, ವಿನೇಶಾ ಸಿದ್ಧವಿದ್ದರೆ, ಮಂಪರು ಪರೀಕ್ಷೆಗೆ ನಾನೂ ಸಿದ್ಧ': ಬಜರಂಗ್ ಹಾಗೂ ವಿನೇಶಾ ಅವರು ಮಂಪರು ಹಾಗೂ ಸುಳ್ಳು ಪತ್ತೆ ಪರೀಕ್ಷೆಗೆ ಸಜ್ಜಾದರೆ ನಾನು ಅದಕ್ಕೆ ಸಿದ್ಧ ಎಂದು ಬ್ರಿಜ್‌ಭೂಷಣ್ ಹೇಳಿದ್ದಾರೆ.

ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಿಂದಿ ಭಾಷೆಯಲ್ಲಿ ಪೋಸ್ಟ್ ಮಾಡಿರುವ ಅವರು ಈ ಕುರಿತು ಪತ್ರಿಕಾಗೋಷ್ಠಿ ಕರೆದು ಘೋಷಿಸಲಿ ಎಂದಿದ್ದಾರೆ.

ಚೆಸ್: ರಂಗನಾಯಕಿಗೆ ಪ್ರಶಸ್ತಿ

ಬೆಂಗಳೂರು: ಚೆಸ್ ಶೂಟ್ಸ್ ಅಕಾಡೆಮಿಯ ರಂಗನಾಯಕಿ ವೆಂಕಟೇಶ್ ಅವರು ಇಲ್ಲಿ ನಡೆದ ರಾಜ್ಯ ಮಹಿಳಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು.

ವಿಜಯನಗರದ ಸಿಟಿ ಸೆಂಟ್ರಲ್ ಲೈಬ್ರರಿ ವೆಸ್ಟ್ ಜೋನ್‌ನಲ್ಲಿ ರೇನ್‌ಬೊ ಕ್ಲಬ್ ಕಿಡ್ಸ್ ಲೈಬ್ರರಿ ಆಯೋಜಿಸಿದ್ದ ಟೂರ್ನಿಯಲ್ಲಿ ರಂಗನಾಯಕಿ ಅವರು ಒಟ್ಟು ಒಂಬತ್ತು ಪಾಯಿಂಟ್ಸ್ ಗಳಿಸಿದರು. ಸಿಲಿಕಾನ್ ಸಿಟಿ ಅಕಾಡೆಮಿ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಿರುವ ಅವರು ಒಂಬತ್ತು ಸುತ್ತುಗಳಲ್ಲಿ ಅವರು ಅಜೇಯರಾಗುಳಿದರು.

ಮೌಂಟ್ ಕಾರ್ಮೆಲ್ ಪಿಯು ಕಾಲೇಜಿನ ಸ್ವರಾ ಲಕ್ಷ್ಮಿ (7.5 ಪಾಯಿಂಟ್ಸ್) ಎರಡನೇ ಮತ್ತು ಶೃತಿ ಪ್ರದೀಪ್ (7 ಪಾ.) ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಕರ್ನಾಟಕ ಚೆಸ್ ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆಯು ಟೂರ್ನಿ ಆಯೋಜಿಸಿತ್ತು.